ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು - ೫೭೦ ೦೦೬

KARNATAKA STATE OPEN UNIVERSITY
Mukthagangotri, Mysore - 570 006

# ಇತಿಹಾಸ

## ಎಂ.ಎ. (ಪ್ರಥಮ)




ಕೋರ್ಸ್ - 1

ಬ್ಲಾಕ್ - 7

# KSOU NATIONAL INTERNATIONAL RECOGNITION

Karnataka State Open University (KSOU) was established on 1st June 1996 with the assent of H.E. Governor of Karnataka as a full fledged University in the Academic year 1996 vide Government notification No./EDI/UOV/dated 12th February 1996 (Karnataka State Open University Act – 1992). The Act was promulgated with the object to incorporate an Open University at the State Level for the introduction and promotion of Open University and Distance Education Systems in the education pattern of the State and the Country for the Co-ordination and determination of standard of such systems.

- With the virtue of KSOU Act of 1992, Karnataka State Open University is empowered to establish, maintain or recognize Institutions, Colleges, Regional Centres and Study Centres at such places in Karnataka and also open outside Karnataka at such places as it deems fit.
- All Academic Programmes offered by Karnataka State Open University are recognized by the Distance Education Council (DEC), Ministry of Human Resource Development (MHRD), New Delhi.
- Karnataka State Open University is a regular member of the Association of Indian Universities (AIU), New Delhi, since 1999.
- Karnataka State Open University is a permanent member of Association of Commonwealth Universities (ACU), London, United Kingdom since 1999. Its member code number: ZKASOPENUINI.
- Karnataka State Open University is a permanent member of Asian Association of Open Universities (AAOU), Beijing, CHINA, since 1999.
- Karnataka State Open University has association with Commonwealth of Learning (COL), Vancouver, CANADA, since 2003. COL is an intergovernmental organization created by commonwealth Heads of Government to encourage the development and sharing of open learning distance education knowledge, resources and technologies.

**Higher Education To Everyone Everywhere**

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
**ಕೋರ್ಸ್ -1**

*ಬ್ಲಾಕ್*

**7**


| | |
|---|---|
| ಘಟಕ - 24<br>ಹೊಯ್ಸಳರು - ವಿಷ್ಣುವರ್ಧನನವರೆಗೆ | 1-12 |
| ಘಟಕ - 25<br>ಹೊಯ್ಸಳರು: ವಿಷ್ಣುವರ್ಧನನ ತರುವಾಯದ ರಾಜರು | 13-24 |
| ಘಟಕ - 26<br>ಹೊಯ್ಸಳರು - ಆಡಳಿತ ಮತ್ತು ಆರ್ಥಿಕ ಪರಿಸ್ಥಿತಿ | 25-34 |
| ಘಟಕ - 27<br>ಹೊಯ್ಸಳರು - ಕಲೆ, ವಾಸ್ತುಶಿಲ್ಪ, ಧರ್ಮ ಮತ್ತು ಸಾಹಿತ್ಯ | 35-43 |

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಡಾ. ಎಂ. ಸುಶೀಲ ಅರಸ್
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

***ವಿಷಯ ಸಂಯೋಜಕರು***

## ಪಠ್ಯಕ್ರಮ ನಿರೂಪಕರು

ಡಾ. ಮಾದೇಗೌಡ
ಪ್ರಾಧ್ಯಾಪಕರು
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಘಟಕಗಳು **24** ರಿಂದ **27**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ೨೦೧೩

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸುಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಇತಿಹಾಸ

# ಕೋರ್ಸ್ ೬ - 1

## ಪೀಠಿಕೆ

ಕರ್ನಾಟಕದ ರಾಜಕಾರಣ ಹಾಗೂ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಮಧ್ಯಕಾಲೀನ ರಾಜವಂಶವಾದ ಹೊಯ್ಸಳರ ಪಾತ್ರ ಅತ್ಯಂತ ಮುಖ್ಯವಾದುದು. ಈ ಬ್ಲಾಕಿನಲ್ಲಿ ನೀವು ಈ ಹೊಯ್ಸಳರನ್ನು ಕುರಿತಂತೆ ಅವರ ರಾಜಕೀಯ ಇತಿಹಾಸ ಕಲೆ ಮತ್ತು ವಾಸ್ತು ಶಿಲ್ಪಕ್ಕೆ ಕೊಡುಗೆ ಹಾಗೂ ಅವರ ಕಾಲದ ಧರ್ಮ ಹಾಗೂ ಸಮಾಜವನ್ನು ಅಧ್ಯಯನ ಮಾಡುವಿರಿ. ಘಟಕ 24 ಪ್ರಾರಂಭದ ಹೊಯ್ಸಳ ದೊರೆಗಳಿಂದ ವಿಷ್ಣುವರ್ಧನನವರೆಗೆ ರಾಜ್ಯವಾಳಿದ ದೊರೆಗಳನ್ನು ಕುರಿತಂತೆ ಅಧ್ಯಯನ ಮಾಡುವಿರಿ. ಈ ಅವಧಿಯಲ್ಲಿ ಸಣ್ಣ ರಾಜ್ಯವೊಂದು ವ್ಯಾಪಕವಾಗಿ ಬೆಳೆದುದನ್ನು ನೀವು ನೋಡುವಿರಿ. ಘಟಕ 25 ರಲ್ಲಿ ವಿಷ್ಣುವರ್ಧನನ ನಂತರದ ದೊರೆಗಳ ಬಗೆಗೆ ಅನೇಕ ವಿಚಾರಗಳನ್ನು ಅರಿಯುವಿರಿ. ಅದರಲ್ಲೂ ವಿಶೇಷವಾಗಿ ಸಮಕಾಲೀನ ರಾಜವಂಶಗಳಿಂದ ಬಂದ ಸವಾಲುಗಳು ಹಾಗೂ ತಮಿಳು ನಾಡಿನ ರಾಜಕಾರಣದಲ್ಲಿ ಹೊಯ್ಸಳರ ಪಾತ್ರ ಇತ್ಯಾದಿಗಳನ್ನು ಅಧ್ಯಯನ ಮಾಡುವಿರಿ. ಘಟಕ 26 ಹೊಯ್ಸಳರು ರೂಢಿಸಿದ ಆಡಳಿತ ವ್ಯವಸ್ಥೆ ಮತ್ತು ಹೊಯ್ಸಳ ಕಾಲದ ಕೃಷಿ ವ್ಯವಸ್ಥೆ ಹಾಗೂ ಉತ್ಪಾದನೆಯನ್ನು ಕುರಿತಾದ ಅನೇಕ ವಿಷಯಗಳನ್ನು ಅರಿಯುವಿರಿ. ಇದೇ ಘಟಕದಲ್ಲಿ ಹೊಯ್ಸಳರ ಕಾಲದ ವ್ಯಾಪಾರ, ವಾಣಿಜ್ಯ ಮತ್ತು ಕೈಗಾರಿಕೆಗಳ ಬಗೆಗೂ ಅನೇಕ ವಿಷಯಗಳನ್ನು ಗ್ರಹಿಸುವಿರಿ. ಘಟಕ 27 ರಲ್ಲಿ ಕಲೆ ಹಾಗೂ ವಾಸ್ತು ಶಿಲ್ಪಕ್ಕೆ ಹೊಯ್ಸಳರು ನೀಡಿದ ಕೊಡುಗೆ ಹಾಗೂ ಅವರ ಕಾಲದಲ್ಲಿ ವಿವಿಧ ಧರ್ಮಗಳು ಹಾಗೂ ಪಂಥಗಳು ಸಮಾಜದಲ್ಲಿ ನಿರ್ವಹಿಸಿದ ಪಾತ್ರವನ್ನು ಅಧ್ಯಯನ ಮಾಡುವಿರಿ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 24

# ಹೊಯ್ಸಳರು - ವಿಷ್ಣುವರ್ಧನನವರೆಗೆ

## ವಿಷಯಕ್ರಮ


24.0 ಘಟಕದ ಉದ್ದೇಶ

24.1 ಪೀಠಿಕೆ

24.2 ಹೊಯ್ಸಳರ ಮೂಲ : ಹಿನ್ನೆಲೆ

24.3 ಹೊಯ್ಸಳರ ರಾಜಕೀಯ ಇತಿಹಾಸ ವಿಷ್ಣುವರ್ಧನನವರೆಗೆ

- 24.3.1 ಸಳ
- 24.3.2 ಒಂದನೇ ವಿನಯಾದಿತ್ಯ
- 24.3.3 ನೃಪಕಾಮ
- 24.3.4 ಇಮ್ಮಡಿ ವಿನಯಾದಿತ್ಯ
- 24.3.5 ಒಂದನೇ ಬಲ್ಲಾಳ

24.4 ವಿಷ್ಣುವರ್ಧನ

- 24.4.1 ರಾಜ್ಯ ವಿಸ್ತರಣೆ
- 24.4.2 ವಿಷ್ಣುವರ್ಧನನ ಧಾರ್ಮಿಕ ನೀತಿ ಮತ್ತು ಸಾಂಸ್ಕೃತಿಕ ಸಾಧನೆ

24.5 ಸಾರಾಂಶ

24.6 ಸ್ವಪರೀಕ್ಷೆ ಪ್ರಶ್ನೆಗಳು

24.7 ಹೆಚ್ಚಿನ ಅಭ್ಯಾಸಕ್ಕಾಗಿ ಗ್ರಂಥಗಳು

## 24.0 ಘಟಕದ ಉದ್ದೇಶ

ಹೊಯ್ಸಳರ ಹಿನ್ನೆಲೆ ಮತ್ತು ಅವರ ರಾಜಕೀಯ ಸಾಧನೆಯನ್ನು ವಿಷ್ಣುವರ್ಧನನವರೆಗೆ ಪರಿಚಯಿಸುವುದು ಈ ಘಟಕದ ಉದ್ದೇಶವಾಗಿದೆ. ಈ ಘಟಕವನ್ನು ಅಭ್ಯಾಸಿಸಿದ ಮೇಲೆ ಈ ಕೆಳಗಿನ ವಿಷಯಗಳನ್ನು ಗ್ರಹಿಸಲು ಸಮರ್ಥರಾಗುವಿರಿ.

* ಬುಡಕಟ್ಟು ವ್ಯವಸ್ಥೆಯಿಂದ ಒಂದು ಪ್ರಬಲ ರಾಜ್ಯವಾಗಿ ರೂಪುಗೊಂಡ ಬಗೆಯನ್ನು ಅರಿವಿರಿ.
* ಇವರ ಹಿನ್ನೆಲೆಯನ್ನು ಕುರಿತಂತೆ ಇರುವ ಪ್ರಚಲಿತ ಅಭಿಪ್ರಾಯಗಳನ್ನು ಗಮನಿಸುವಿರಿ.
* ಸಳನ ಐತಿಹಾಸಿಕತೆಯ ಬಗ್ಗೆ ಇರುವ ವಿವರಣೆಗಳನ್ನು ಗ್ರಹಿಸಬಹುದು.
* ಹೊಯ್ಸಳ ರಾಜ್ಯ ಪ್ರಬಲವಾಗಿ ಪ್ರಬುದ್ಧಮಾನಕ್ಕೆ ಬರಲು ಎರಡನೆ ವಿನಯಾದಿತ್ಯ ಮತ್ತು ಒಂದನೇ ಬಲ್ಲಾಳರ ಕೊಡುಗೆಗಳನ್ನು ತಿಳಿಯುವಿರಿ.
* ಕೊನೆಯಲ್ಲಿ ವಿಷ್ಣುವರ್ಧನನ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ಪರಿಚಯಿಸಿಕೊಳ್ಳುವಿರಿ.

## 24.1 ಪೀಠಿಕೆ

ಕರ್ನಾಟಕದ ಇತಿಹಾಸದಲ್ಲಿ ಹೊಯ್ಸಳರ ಕಾಲವು ಒಂದು ಪ್ರಮುಖ ಹಾಗೂ ಸ್ಮರಣೀಯ ಅಧ್ಯಾಯವಾಗಿದೆ. ಕ್ರಿ.ಶ. 11ನೇ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದು ಸುಭದ್ರ ರಾಜ್ಯವನ್ನು ಕಟ್ಟಿ 14 ನೇ ಶತಮಾನ ಪೂರ್ವಾರ್ಧದವರೆಗೂ ಯಶಸ್ವಿಯಾಗಿ ಪ್ರಭುತ್ವವನ್ನು ನಡೆಸಿದ ಹೊಯ್ಸಳರ ಆಳ್ವಿಕೆಯು ಮಹತ್ಸಾಧನೆಯಿಂದ ಕೂಡಿದೆ. ಕರ್ನಾಟಕ ಮತ್ತು ದಕ್ಷಿಣ ಭಾರತದಲ್ಲಿ ಪ್ರಬಲ ಸಾಮ್ರಾಜ್ಯವಾಗಿ ಶತಮಾನಗಳ ಕಾಲ ಪ್ರಭುತ್ವ ನಡೆಸಿ ಹೊಯ್ಸಳ ಸಂತತಿಯು ಆಡಳಿತ ಧರ್ಮ, ಸಾಹಿತ್ಯ ಮತ್ತು ಕಲೆಗೆ ವಿಶೇಷ ಪ್ರೋತ್ಸಾಹ ನೀಡಿತು. ಧರ್ಮ ಸುಧಾರಕರೂ, ದಾರ್ಶನಿಕರೂ ಆದ ಶ್ರೀರಾಮಾನುಜಚಾರ್ಯ, ಬಸವೇಶ್ವರ ಮತ್ತು ಮಧ್ವಾಚಾರ್ಯ ಇವರು ಹೊಯ್ಸಳ ಸಂತತಿಯ ಸಮಕಾಲೀನರಾಗಿದ್ದರು. ಹೊಯ್ಸಳರ ಪ್ರೋತ್ಸಾಹದಿಂದ ಜೈನಧರ್ಮ, ಶೈವಧರ್ಮ ಮತ್ತು ಶ್ರೀ ವೈಷ್ಣವ ಧರ್ಮಗಳು ಪ್ರಗತಿಯುತವಾಗಿದ್ದವು. ಇವರ ಪ್ರೋತ್ಸಾಹದಿಂದ ವ್ಯವಸಾಯವೂ, ವ್ಯಾಪಾರವೂ ಪ್ರಗತಿಪಥದತ್ತ ಸಾಗಿ ಸಾಮ್ರಾಜ್ಯದಲ್ಲಿ ಶಾಂತಿ, ಸುಭಿಕ್ಷೆ ನೆಲೆಸುವಂತಾಯಿತು. ಅವರ ಪ್ರೋತ್ಸಾಹದಿಂದ ವಾಸ್ತು ಶಿಲ್ಪ ಮತ್ತು ಕಲೆಯಲ್ಲಿ ಹೊಸ ಪ್ರಭೇದವೂ ನವೀನ ಅಭಿವ್ಯಕ್ತತೆಯೂ ಉಂಟಾದವು. ಸುಭದ್ರ ಆಡಳಿತ ಪ್ರಜಾಭ್ಯುದಯಕ್ಕೆ ಸಹಕಾರಿಯಾದ ಸಾರ್ವಜನಿಕ ಕೆರೆಕಟ್ಟೆ, ಕಾಲುವೆಗಳ ನಿರ್ಮಾಣ, ವ್ಯಾಪಾರ, ವ್ಯವಸಾಯ ಮತ್ತು ಕೈಗಾರಿಕೆಗಳಿಗೆ ನೀಡಿದ ಪ್ರೋತ್ಸಾಹ ಅನನ್ಯ ಧಾರ್ಮಿಕ ಪ್ರೋತ್ಸಾಹ ಮತ್ತು ಸಹನೆ ಸಾಹಿತ್ಯ ಕಲೆಗಳ ಸಂವರ್ಧನೆ ಇವುಗಳು ಈ ಸಂತತಿಯ ಆಳ್ವಿಕೆಯ ಮಹತ್ಸಾಧನೆಗಳಾಗಿವೆ.

ಹೊಯ್ಸಳ ಸಾಮ್ರಾಜ್ಯ ಇತಿಹಾಸ ರಚನೆಗೆ ಸಾಹಿತ್ಯ ಗ್ರಂಥಗಳಿಂದ ಹೆಚ್ಚು ಉಪಯುಕ್ತ ಮಾಹಿತಿ ದೊರಕುವುದಿಲ್ಲ. ಅವರ ಕಾಲದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕನ್ನಡ ಮತ್ತು ಸಂಸ್ಕೃತದಲ್ಲಿ ಗ್ರಂಥಗಳು ರಚನೆಯಾದವು. ಅವುಗಳಲ್ಲಿ ಜನ್ನನ ಯಶೋಧರ ಚರಿತೆ, ರುದ್ರಭಟ್ಟನ ಜಗನ್ನಾಥ ವಿಜಯ, ರಾಜಾದಿತ್ಯನ ವ್ಯವಹಾರ ಗಣಿತ, ಅಭಿನವ ಪಂಪನ ರಾಮಚಂದ್ರ ಚರಿತ ಪುರಾಣ, ಹರಿಹರ ಮತ್ತು ರಾಘವಾಂಕರ ಕೃತಿಗಳು ಮತ್ತು ವೀರಶೈವ ಸಂತರಿಂದ ರಚಿತವಾದ ವಚನಗಳು ಹಾಗೂ ವಿದ್ಯಾ ಚಕ್ರವರ್ತಿಯ ಗದ್ಯಾ ಕರ್ಣಾಮೃತ ಮೊದಲಾದ ಸಮಕಾಲೀನ ಗ್ರಂಥಗಳೂ ಮತ್ತು ಅನಂತರ ವಿರಚಿತವಾದ ಹೊಯ್ಸಳ ವಂಶಾಭ್ಯುದಯ, ಕುಮಾರರಾಮನ ಚರಿತೆ ಮತ್ತು ತಮಿಳು ರಾಜ ಕಾಲನಿರ್ಣಯ ಮೊದಲಾದ ಗ್ರಂಥಗಳು ಅಲ್ಪಸ್ವಲ್ಪ ಮಾಹಿತಿಯನ್ನೊದಗಿಸುತ್ತವೆ. ಹೊಯ್ಸಳರ ಆಳ್ವಿಕೆಯ ಸಹಸ್ರಾರು ಶಾಸನಗಳು ಆ ಕಾಲದ ಇತಿಹಾಸ ರಚನೆಗೆ ಇರುವ ಅಮೂಲ್ಯ ದಾಖಲೆಗಳಾಗಿವೆ. ಶಾಸನಗಳಿಂದ ಹೊಯ್ಸಳ ಸಂತತಿಯ ವಂಶಾನು ಕ್ರಮಣಿಕೆ, ಕಾಲಾನುಕ್ರಮಣಿಕೆ, ಆಡಳಿತ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು ಹಾಗೂ ಧಾರ್ಮಿಕ ಮತ್ತು ಸಾಂಸ್ಕೃತಿಕ ಸ್ಥಿತಿಗಳನ್ನು ಅರಿಯಲು ಅವಕಾಶವಾಗಿದೆ. ಅವರು ಅಚ್ಚು ಹಾಕಿಸಿದ ಸಮಕಾಲೀನ ಸಾಮಾಜಿಕ ಸ್ಥಿತಿಗತಿಗಳನ್ನು ನಿರೂಪಿಸುತ್ತವೆ.

## 24.2 ಹೊಯ್ಸಳರ ಮೂಲ : ಹಿನ್ನೆಲೆ

ಹೊಯ್ಸಳರ ಮೂಲಕ್ಕೆ ಸಂಬಂಧಿಸಿದಂತೆ ವಿಭಿನ್ನ ವಿವರಣೆಗಳು ಮತ್ತು ಹೇಳಿಕೆಗಳಿವೆ. ಈ ಸಂತತಿಯು ಸ್ಥಾಪನೆಯಾದ ಒಂದುನೂರು ವರ್ಷಗಳ ನಂತರದ ರಾಜರ ಶಾಸನಗಳಲ್ಲಿ ಈ ಸಂತತಿಗೂ ಕೃಷ್ಣನಿಂದ ಪುನೀತವಾದ ದ್ವಾರಕೆಯ ಯದುವಂಶಕ್ಕೂ ಸಂಬಂಧವನ್ನು ಕಲ್ಪಿಸಲಾದ ವರ್ಣನೆಗಳು ಕಂಡು ಬರುತ್ತವೆ. ಈ ವರ್ಣನೆ ಪ್ರಕಾರ ಯದುವಂಶದ ಸಾಹಸಿಯೊಬ್ಬ ದಕ್ಷಿಣಕ್ಕೆ ಯಾತ್ರೆಗಾಗಿ ಬಂದನೆಂದೂ ; ಅವನು ರಾಜ್ಯಸ್ಥಾಪಿಸಿ ತನ್ನ ರಾಜಧಾನಿಗೆ ದೋರಸಮುದ್ರ ಎಂದು ನಾಮಕರಣ ಮಾಡದನೆಂದೂ ; ಸಳನು ಅವನ ವಂಶಸ್ಥನೆಂದೂ ಪೌರಾಣಿಕ ವರ್ಣನೆಯನ್ನು ನೀಡಲಾಗಿದೆ. ಆದರೆ ಪ್ರಾರಂಭದಲ್ಲಿ ಚಿಕ್ಕ ಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಸೊಸೆವೂರು (ಇಂದಿನ ಅಂಗಡಿ) ಎಂಬುದು ಹೊಯ್ಸಳರ ರಾಜಧಾನಿಯಾಗಿತ್ತು. ತಮ್ಮ ರಾಜಕೀಯ ಪ್ರಾಬಲ್ಯವನ್ನು ವಿಸ್ತರಿಸಿದ ನಂತರ ಬೇಲೂರು ಅನಂತರ ದೋರಸಮುದ್ರವನ್ನು ರಾಜಧಾನಿಯಾಗಿ ಮಾಡಿಕೊಂಡರೆಂದು ವಿವರಿಸಲಾಗಿದೆ. ಆದರೆ ಪ್ರಾರಂಭದ ರಾಜರ ಶಾಸನಗಳಲ್ಲಿ ಯದುವಂಶದ ಪ್ರಸ್ತಾಪವಿಲ್ಲ. ಆದುದರಿಂದ ಹೊಯ್ಸಳರು ಯದುವಂಶಕ್ಕೆ ಸೇರಿದವರೆಂಬುದಾಗಲೀ, ದ್ವಾರಕೆಯಿಂದ ಬಂದರೆಂದಾಗಲಿ, ನಂಬಲಾಗವುದಿಲ್ಲ.

ಶಾಸನಗಳಲ್ಲಿ ಸರ್ವೇಸಾಮಾನ್ಯವಾಗಿ ಕಾಣಬರುವ ಹೇಳಿಕೆಯ ಪ್ರಕಾರ ಈ ವಂಶದ ಮೂಲ ಪುರುಷ ಸಳ. ಸಳನು ತನ್ನ ಗುರುವಾದ ಜೈನ ಮುನಿ ಸುದತ್ತಾಚಾರ್ಯನೊಡನೆ ಇಂದಿನ ಮೂಡುಗೆರೆ ತಾಲ್ಲೂಕಿನಲ್ಲಿರುವ, ಅಂದು ಸೊಸೆವೂರೆಂದೂ ಹಾಗೂ ಇಂದು ಅಂಗಡಿಯೆಂದು ಕರೆಯಲಾಗಿರುವ ಗ್ರಾಮವಾದ ಜೈನ ಬಸದಿಯಲ್ಲಿ ವಾಸಂತಿಕ ಅಥವಾ ಪದ್ಮಾವತಿಯೆಂಬ ದೇವಿಯ ಆರಾಧನೆಯಲ್ಲಿ ತೊಡಗಿದ್ದನು. ಒಂದು ದಿನ ಅವರು ಪೂಜೆಯಲ್ಲಿ ನಿರತರಾಗಿದ್ದಾಗ ಹುಲಿಯೊಂದು ಜಿಗಿದು ಬಂದಿತು. ಮುನಿಯು ತನ್ನ ಕೈಯಲ್ಲಿದ್ದ ದಂಡವನ್ನು ಸಳನಿಗಿತ್ತು "ಪೊಯ್‌ಸಳ" ಎಂದು ಆಜ್ಞಾಪಿಸಿದನು. ಕೂಡಲೇ ಸಳನು ಹುಲಿಯನ್ನು ಕೊಂದನು. ಇದರಿಂದ ಸುಪ್ರೀತನಾದ ಜೈನ ಮುನಿಯು ವಾಸಂತಿಕ ದೇವಿಯಿಂದ ವರವನ್ನು ಪಡೆದು ಸಳನಿಗೆ ರಾಜ್ಯ ಪ್ರಾಪ್ತಿಯಾಗುವಂತೆ ಮಾಡಿದನು. ಯತಿಯ ಉದ್ಗಾರವಾದ 'ಪೊಯ್‌ಸಳ' ಎಂಬುದರಿಂದ ಸಳನ ಸಂತತಿಗೆ ಪೊಯ್ಸಳ ಅಥವಾ ಹೊಯ್ಸಳ ಎಂಬುದಾಗಿ ಹೆಸರಾಯಿತೆಂದು ವರ್ಣಿಸಲಾಗಿದೆ. ಈ ವರ್ಣನೆಯೂ ಸಹ ಪೌರಾಣಿಕವಾಗಿದ್ದು ಹಲವು ಕಾರಣಗಳಿಂದ ನಂಬಲು ಸಾಧ್ಯವಾಗಿಲ್ಲ. ಒಟ್ಟಿನಲ್ಲಿ ಪ್ರಾರಂಭದ ಹೊಯ್ಸಳ ರಾಜರು ಜೈನ ಮತೀಯರಾಗಿದ್ದರೆಂಬ ಅಂಶವನ್ನು ಬಿಟ್ಟರೆ ಈ ವರ್ಣನೆಯು ಕಾಲ್ಪನಿಕವೆಂಬುದರಲ್ಲಿ ಸಂಶಯವಿಲ್ಲ. ಕೆಲವು ವಿದ್ವಾಂಸರು ಸಳನು ಹುಲಿಯನ್ನು ಕೊಂದ ಹೇಳಿಕೆ ಹಾಗೂ ಹೊಯ್ಸಳರ ಹಲವು ಪ್ರಭುಗಳು ಹೊಂದಿದ್ದ ಬಲ್ಲಾಳ ಎಂಬ ಹೆಸರಿನ ಆಧಾರದ ಮೇಲೆ ಹೊಯ್ಸಳರ ಮೂಲವನ್ನು ತಮಿಳು ನಾಡಿನೊಡನೆ ಸಂಪರ್ಕಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಇದೂ ಸಹ ಊಹಾಪೋಹಗಳಿಂದ ಕೂಡಿದೆ. ಏಕೆಂದರೆ ಧೀರ ವ್ಯಕ್ತಿಯೊಬ್ಬನು ಹುಲಿಯನ್ನು ಕೊಂದ ಘಟನೆ ತಮಿಳು ನಾಡಿನಲ್ಲಿ ಸಂಗಂ ಕಾಲದಲ್ಲಿ ನಡೆಯಿತ್ತೆಂದು ಹೇಳಲಾದ ಘಟನೆಯೇ ಆಗಿರಬೇಕಾಗಿಲ್ಲ. ಮಿಗಿಲಾಗಿನ ಬಲ್ಲಾಳ ಎಂಬ ಹೆಸರಿಗೂ ತಮಿಳುನಾಡಿನ ವೆಲ್ಲಾಳ ಎಂಬ ಪಂಗಡಕ್ಕೂ ಯಾವ ವಿಧವಾದ ಸಂಬಂಧವೂ ಇಲ್ಲ. ಆದ್ದರಿಂದ ಈ ಹೇಳಿಕೆಗಳು ಕೇವಲ ಊಹೆಯಾಗಿದ್ದು ಸತ್ಯಾಂಶಕ್ಕೆ ದೂರವಾಗಿದೆ.

ಪ್ರಚಲಿತವಿರುವ ಮತ್ತೊಂದು ವರ್ಣನೆಯ ಪ್ರಕಾರ ಸೊಸೆವೂರಿನ ವಾಸಂತಿಕಾ ದೇವಿಯ ಜಾತ್ರೆಯು ಪ್ರತಿವರ್ಷವೂ ವಿಜೃಂಭಣೆಯಿಂದ ನಡೆಯುತ್ತಿತ್ತು. ಕಾಲಾನಂತರದಲ್ಲಿ ಆ ಪ್ರದೇಶದಲ್ಲಿ ಒಂದು ಹುಲಿಯು ವಾಸಿಸುತ್ತಿದ್ದುದು ಜನರಿಗೆ ಉಪದ್ರವವನ್ನುಂಟು ಮಾಡುತ್ತಿತ್ತು. ಇದರ ಕಾರಣದಿಂದ ಜನರು ಜಾತ್ರೆಗೆ ಬರಲು ಅಂಜುವಂತಾಯಿತು. ಭಯಗ್ರಸ್ಥರಾದ ಜನರು ಹುಲಿಯುನ್ನು ಕೊಂದ ವ್ಯಕ್ತಿಗೆ ತಲಾ ವರ್ಷಂಪ್ರತಿ ಒಂದು ಹಣ ಕಾಣಿಕೆ ಕೊಡುವುದಾಗಿ ಘೋಷಿಸಿದರು. ಸಳನು ಹುಲಿಯನ್ನು ಕೊಂದು ಕಾಣಿಕೆ ಸ್ವೀಕರಿಸಿದನು. ನಾಲ್ಕಾರು ವರ್ಷಗಳಲ್ಲಿ ಸಂದಾಯವಾದ ಕಾಣಿಕೆ ಹಣದಿಂದ ಸೈನ್ಯವನ್ನು ಕಟ್ಟಿ ರಾಜನಾದನು. ಈ ಹೇಳಿಕೆಯ ಪ್ರಕಾರ ಸಳನು ಸ್ಥಳೀಯ ಪ್ರಬಲವ್ಯಕ್ತಿಯಾಗಿದ್ದು ಗಂಗ ಸಂತತಿಯ ಕೊನೆಯ ಕಾಲದಲ್ಲಿ ಮಾನ್ಯತೆ ಪಡದು ಮಲೆನಾಡು ಪ್ರದೇಶದಲ್ಲಿ ಚಿಕ್ಕ ಮಾಂಡಲಿಕನಾದನೆಂದು ತಿಳಿದು ಬರುತ್ತದೆ.

ಮಿಗಿಲಾಗಿ, ಸಳ ಎಂಬ ಹೆಸರು ಹೊಯ್ಸಳರ ಪ್ರಾರಂಭದ ಸುಮಾರು ಒಂದು ನೂರು ವರ್ಷಗಳ ಕಾಲ ಕಾಣಬರುವುದಿಲ್ಲ. ಕ್ರಿ.ಶ. 960 ರ ಸುಮಾರಿನಿಂದಲೂ ಹೊಯ್ಸಳ ಅಥವಾ ಪೊಸ್ಸಳ ಎಂಬ ಹೆಸರೇ ಶಾಸನಗಳಲ್ಲಿ ದೊರೆಯುತ್ತದೆ. ಅಲ್ಲದೆ ಆ ಕಾಲದ ಶಾಸನಗಳಲ್ಲಿ 'ಪೊಯ್ಸಳ ಗೌಂಡ' 'ಪೊಯ್ಸಳ ಮಾರುಗ' 'ಪೊಯ್ಸಳಾ ಚಾರಿ' ಮೊದಲಾದ ಹೆಸರುಗಳನ್ನು ಕಾಣಬಹುದು. ಆದ್ದರಿಂದ

ಈ ಸಂತತಿಯ ರಾಜ್ಯ ಸ್ಥಾಪಕನ ಹೆಸರು ಪ್ರಾರಂಭದಿಂದಲೂ ಹೊಯ್ಸಳ ಎಂಬುದಾಗೇ ಇದ್ದಿತೆಂದು ಖಚಿತಪಡುತ್ತದೆ. ಈ ಸಂತತಿಯು ಪ್ರಾಬಲ್ಯಕ್ಕೆ ಬಂದ ನಂತರ ಆಸ್ಥಾನದ ವಿದ್ವಾಂಸರು ಹೊಯ್ಸಳ ಎಂಬ ಪದವನ್ನು 'ಪೊಯ್' ಸಳ ಎಂಬುದಾಗಿ ವಿಭಜಿಸಿ ತಮ್ಮ ಕಾಲ್ಪನಿಕ ವರ್ಣನೆಗಳನ್ನು ಹೆಣೆದವರೆಂಬುದರಲ್ಲಿ ಸಂಶಯವಿಲ್ಲ.

ಹೊಯ್ಸಳ ಸಂತತಿಯ ಪ್ರಾರಂಭದ ರಾಜರ ಬಿರುದುಗಳಾದ 'ಮಲೆಪರೋಳ್ಗಂಡ', 'ತೊರೆವರಮಾರಿ' ಮತ್ತು 'ಮಲೆವರ ಮಾರಿ' ಮೊದಲಾದ ಬಿರುದುಗಳು ಅವರು ರಾಜ್ಯಸ್ಥಾಪನೆಯ ಕಾಲದಲ್ಲಿ ಮೇಲ್ಕಂಡ ಬುಡಕಟ್ಟುಗಳೊಡನೆ ಸೆಣಸಾಟದಲ್ಲಿ ತೊಡಗಿ ಅವುಗಳನ್ನು ಹತ್ತಿಕ್ಕಿ ತಮ್ಮ ಪ್ರಭಾವವನ್ನು ಸ್ಥಾಪಿಸಿದರೆಂದು ಸಾರುತ್ತವೆ. ಆದ್ದರಿಂದ ಬಿ.ಎ. ರೈಸ್ ಅಭಿಪ್ರಾಯ ಪಟ್ಟಿರುವಂತೆ ಹೊಯ್ಸಳರು ಮೂಲತಃ ಕನ್ನಡ ನಾಡಿನವರಾಗಿದ್ದು ಮಲೆನಾಡಿನ ನಿವಾಸಿಗಳಾಗಿದ್ದರೆಂಬುದು ಖಚಿತವಾಗಿದೆ.

## 24.3 ಹೊಯ್ಸಳರ ರಾಜಕೀಯ ಇತಿಹಾಸ ವಿಷ್ಣುವರ್ಧನನವರೆಗೆ

### *24.3.1 ಸಳ*

ಹೊಯ್ಸಳರ ರಾಜಕೀಯ ಇತಿಹಾಸ ಸಳನಿಂದ ಕ್ರಿ.ಶ. 10 ನೇ ಶತಮಾನ ಆರಂಭವಾಗುತ್ತದೆ. ಆದರೆ ಸಳನ ಐತಿಹಾಸಿಕತೆ ಬಗ್ಗೆ ಕೆಲವು ವಿದ್ವಾಂಸರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸಳ ಪೌರಾಣಿಕ ಕಾಲ್ಪನಿಕ ವ್ಯಕ್ತಿಯಲ್ಲ ಅವನು ಐತಿಹಾಸಿಕ ವ್ಯಕ್ತಿಯಾಗಿದ್ದು ರಾಜ್ಯದ ಸಂಸ್ಥಾಪಕ ಎಂಬ ವಿಷಯ ಹೊಯ್ಸಳರ ಶಾಸನಗಳಿಂದ ಖಚಿತ ಪಡುತ್ತದೆ. ಕ್ರಿ.ಶ. 10 ನೇ ಶತಮಾನದ ಕೊನೆಯ ಹೊಯ್ಸಳ ಎಂಬ ಹೆಸರು ಹಲವು ಶಾಸನಗಳಲ್ಲಿ ಕಂಡು ಬರುತ್ತದೆ. ಹೊಯ್ಸಳ ಮಾರುಗ ಎಂಬುವನು ಗಂಗರೊಡನೆ ಸೇರಿ ನೊಳಂಬರಾಜನನ್ನು ಸೋಲಿಸಿದ ಸಂಗತಿಯು ಶಾಸನವೊಂದರಿಂದ ತಿಳಿದು ಬರುತ್ತದೆ. ಆದುದರಿಂದ ಆರಂಭದಲ್ಲಿ ಈ ಸಂತತಿಯು ಗಂಗರ ಮಾಂಡಲಿಕ ಮನೆತನವಾಗಿ ಮಲೆನಾಡಿನಲ್ಲಿ ಅಸ್ತಿತ್ವಕ್ಕೆ ಬಂದಿತು ಎಂಬುದಕ್ಕೆ ಅವರ ಬಿರುದುಗಳೇ ಸಾಕ್ಷಿಯಾಗಿದೆ. ಇವರು ಗಂಗರ ಬಿರುದುಗಳಾದ ಪೆರ್ಮಾನಡಿ, ವೀರಗಂಗ, ವಿಕ್ರಮಗಂಗ ಮತ್ತು ರಕ್ಕಸಗಂಗ ಮೊದಲಾದ ಬಿರುದುಗಳನ್ನು ಹೊಂದಿದ್ದರು. ಈ ಸಂಗತಿಯು ಗಂಗರಿಗೂ ಹೊಯ್ಸಳರಿಗೂ ಆರಂಭದಲ್ಲಿದ್ದ ಸಂಬಂಧವನ್ನು ಸೂಚಿಸುತ್ತದೆ. ಈ ಸಂತತಿಯ ಸ್ಥಾಪಕನಾದ ಹೊಯ್ಸಳನ ಶಾಸನಗಳು ಲಭ್ಯವಾಗಿಲ್ಲ. ಅವನು 10 ನೇ ಶತಮಾನದ ಕೊನೆಯಲ್ಲಿ ಪ್ರಾಮುಖ್ಯತೆ ಪಡೆದು ಕ್ರಿ.ಶ. 1006 ರವರೆಗೂ ಆಳ್ವಿಕೆ ನಡೆಸಿದನೆಂದು ತಿಳಿದು ಬರುತ್ತದೆ. ಕ್ರಿ.ಶ. 1006 ರಲ್ಲಿ ಚೋಳ ದಂಡನಾಯಕನಾದ ಅಪ್ರಮೇಯನನ್ನು ತಿರುಮಕೂಡಲು ನರಸಿಪುರ ತಾಲ್ಲೂಕಿನ ಕೆಳಗೂರು ಗ್ರಾಮದಲ್ಲಿ ಎದುರಿಸಿ ಪರಾಜಿತನಾದ ಹೊಯ್ಸಳ ಮುಖ್ಯನು ಈ ಸಂತತಿಯ ರಾಜ್ಯ ಸ್ಥಾಪಕನಾದ ಹೊಯ್ಸಳನೆಂಬುದರಲ್ಲಿ ಸಂಶಯ ತೋರುವುದಿಲ್ಲ ಎಂಬುವುದು ಅನೇಕರ ಅಭಿಪ್ರಾಯವಾಗಿದೆ.

### *24.3.2 ಒಂದನೇ ವಿನಯಾದಿತ್ಯ*

ಹೊಯ್ಸಳನ ತರುವಾಯ ಒಂದನೇ ವಿನಯಾದಿತ್ಯನು ರಾಜನಾದನು. ಇವನು ಹೊಯ್ಸಳ ಮತ್ತು ಅವನ ಪತ್ನಿ ಭೂಮಿ ದೇವಿಯರ ಮಗ. ವಿನಯಾದಿತ್ಯನು ಕ್ರಿ.ಶ. 1022 ರವರೆಗೂ ಆಳಿದನು. ಇವನ ಆಳ್ವಿಕೆಯ ಪ್ರಾರಂಭದಲ್ಲೆ ಹೊಯ್ಸಳರಿಗೂ ಮತ್ತು ಚೋಳರಿಗೂ ಘರ್ಷಣೆಗಳು ನಡೆದವು ಎಂದು ಶಾಸನಗಳಿಂದ ತಿಳಿದು ಬರುತ್ತದೆ. ಉದಾಹರಣೆಗೆ 1006 ರ ಕಲಿಯೂರು ಶಾಸನವನ್ನು ಹೆಸರಿಸಬಹುದು. ಈ ಕಾಳಗದಲ್ಲಿ ವಿನಯಾದಿತ್ಯನ ದಂಡನಾಯಕ ನಾಗಣ್ಣನೆಂಬುವನು ತನ್ನ ಪರಾಕ್ರಮವನ್ನು ಮೆರೆದನು. ವಿನಯಾದಿತ್ಯನು 1022 ರಲ್ಲಿ ಮರಣ ಹೊಂದಿದನು.

### *24.3.3 ನೃಪಕಾಮ*

ಒಂದನೇ ವಿನಯಾದಿತ್ಯನ ಮಗನಾದ ನೃಪಕಾಮನು ತನ್ನ ತಂದೆಯ ಮರಣ ನಂತರ ಅಧಿಕಾರಕ್ಕೆ ಬಂದನು. ಇವನು 1047 ರವರೆಗೂ ಆಳ್ವಿಕೆ ನಡೆಸಿದನು. ಇವನನ್ನು 'ಕಾಮನೃಪ' ಎಂದು ಹಲವು ಶಾಸನಗಳಲ್ಲಿ ಹೆಸರಿಸಲಾಗಿದೆ. ಅಧಿಕಾರಕ್ಕೆ ಬಂದ ನಂತರ ರಾಜ್ಯ ವಿಸ್ತರಣೆಯಲ್ಲಿ ತೊಡಗಿದನು. ಮೊದಲಿಗೆ ಅವನು ಚೋಳ ಸಾಮಾಂತರಾಗಿದ್ದ ಚೆಂಗಾಳ್ವರ ಮೇಲೆ ಯುದ್ಧ ಮಾಡಬೇಕಾಯಿತು. ಅನೇಕ ಬಾರಿ ಚೆಂಗಾಳ್ವರ ಮೇಲೆ ಹೋರಾಟ ಮಾಡಿದನು ಎಂದು ಶಾಸನಗಳು ತಿಳಿಸುತ್ತವೆ. ನೃಪಕಾಮನು ಚೆಂಗಾಳ್ವರನ್ನು ಸೋಲಿಸಿ ರಾಜ್ಯ ವಿಸ್ತರಿಸಿ 'ಮಹಾಮಂಡಲೇಶ್ವರ' 'ರಾಜಮಲ್ಲಪೆರ್ಮಾಡಿ' ಎಂಬ ಬಿರುದನ್ನು ಧರಿಸಿದನು. ರಾಜಮಲ್ಲ ಕೆರ್ಮಡಿ ಎಂಬ ಬಿರುದು

ಗಂಗ ಸಂತತಿಯ ಪ್ರಭುಗಳು ಹೊಂದಿದ್ದ ಬಿರುದಾಗಿದ್ದು ಇದು ತಲಕಾಡಿನ ಗಂಗರಿಗೂ ದೋರ ಸಮುದ್ರದ ಹೊಯ್ಸಳರಿಗೂ ಇದ್ದ ಸಂಬಂಧವನ್ನು ವ್ಯಕ್ತಪಡಿಸುತ್ತದೆ. ಇವನ ಆಸ್ಥಾನದಲ್ಲಿ ಈಚಿಮಯ್ಯನು ಆಸ್ಥಾನದಲ್ಲಿದ್ದನು. ಈ ಈಚಿಮಯ್ಯನೇ ವಿಷ್ಣುವರ್ಧನನ ತಾತ ಎಂಬುವುದು ಗಮನಾರ್ಹ ವಿಷಯ. ನೃಪಕಾಮನ ತರುವಾಯ ಅವನ ಮಗ ಇಮ್ಮಡಿ ವಿನಯಾದಿತ್ಯನು ರಾಜನಾದನು.

### 24.3.4 ಇಮ್ಮಡಿ ವಿನಯಾದಿತ್ಯ

ಇಮ್ಮಡಿ ವಿನಯಾದಿತ್ಯನು ತನ್ನ ಸ್ವಸಾಮರ್ಥ್ಯದಿಂದ ಹೊಯ್ಸಳರ ಪ್ರಾಬಲ್ಯವನ್ನು ವಿಸ್ತರಿಸಿದನು. ಇವನ ಕಾಲವನ್ನು ಹೊಯ್ಸಳರ ಶಕ್ತಿ ಸಂಘಟನೆ ಮತ್ತು ಸಂಚಯಾನದ ಕಾಲ ಎಂದು ಕರೆಯಲಾಗಿದೆ. ಇವನು ಚೋಳ ಮತ್ತು ಚಾಳುಕ್ಯರ ನಡುವಿನ ಕಾದಾಟದಿಂದ ಒದಗಿದ್ದ ಒಳ್ಳೆಯ ಅವಕಾಶವನ್ನು ಉಪಯೋಗಿಸಿಕೊಂಡು ರಾಜ್ಯ ವಿಸ್ತರಣೆಯಲ್ಲಿ ತೊಡಗಿದನು. ಸೈನ್ಯ ಬಲವನ್ನು ಹೆಚ್ಚಿಸಿಕೊಂಡು ಚಿಕ್ಕಮಗಳೂರು, ಹಾಸನ ಜಿಲ್ಲೆಗಳ ಮೇಲೂ ಮತ್ತು ಮೈಸೂರು, ಶಿವಮೊಗ್ಗ ಜಿಲ್ಲೆಗಳ ಮೇಲೂ ತನ್ನ ಅಧಿಕಾರವನ್ನು ಸ್ಥಾಪಿಸಿದನು. ಪ್ರಾರಂಭದಲ್ಲಿ ಸೊಸೆವೂರನ್ನು ರಾಜಧಾನಿಯನ್ನಾಗಿ ಹೊಂದಿದ್ದ ಇವನು ಅನಂತರ ಸ್ವಲ್ಪ ಮಟ್ಟಿಗೆ ಮೈದಾನ ಪ್ರದೇಶವಾಗಿದ್ದ ಹಾಗೂ ಸಂಪರ್ಕ ಸಾಧನೆಗಳಿಗೆ ಅನುಕೂಲಕರವಾಗಿದ್ದ ದೋರ ಸಮುದ್ರವನ್ನು ರಾಜಧಾನಿಯಾಗಿ ಮಾಡಿಕೊಂಡನು. ಚಂಗಾಳ್ವ ಮತ್ತು ಕೊಂಗಾಳ್ವರನ್ನು ಸೋಲಿಸಿ ಮೈಸೂರು ಜಿಲ್ಲೆಯ ಕನ್ನಂಬಾಡಿಯವರೆಗೂ ರಾಜ್ಯ ವಿಸ್ತರಿಸಿದನು. ತಲಕಾಡಿನ ಗಂಗರ ಬಿರುದಾದ 'ರಕ್ಕಸಗಂಗ' ಎಂಬುದನ್ನು ಧರಿಸಿ ಗಂಗವಾಡಿಯನ್ನು ಚೋಳರ ಆಳ್ವಿಕೆಯಿಂದ ಮುಕ್ತಗೊಳಿಸಲು ಪ್ರಯತ್ನಿಸಿದನು. ಇವರ ಕಾಲದಲ್ಲಿ ಕೊಂಕಣ, ಆಳ್ವಖೇಡ, ವೈನಾಡು ಮತ್ತು ತಲಕಾಡು ಹೊಯ್ಸಳ ರಾಜ್ಯದ ಗಡಿಗಳಿಗಿದ್ದವೆಂದು ಶಾಸನದಿಂದ ತಿಳಿದು ಬರುತ್ತದೆ.

ಎರಡನೇ ವಿನಯಾದಿತ್ಯನು ಕಲ್ಯಾಣಿ ಚಾಳುಕ್ಯರ ಸಾರ್ವಭೌಮಾಧಿಕಾರವನ್ನು ಒಪ್ಪಿಕೊಂಡು ಅವರ ಬಿರುದುಗಳಲ್ಲಿ ಒಂದಾದ ತ್ರಿಭುವನಮಲ್ಲ ಎಂಬುದನ್ನು ತಾನು ಧರಿಸಿದನು. ಕೇವಲ ರಾಜಕೀಯ ಸಂಬಂಧವಷ್ಟೇ ಅಲ್ಲದೆ ವೈವಾಹಿಕ ಸಂಬಂಧವೂ ಇವನ ಕಾಲದಲ್ಲಿ ಹೊಯ್ಸಳ ಮತ್ತು ಚಾಳುಕ್ಯರ ನಡುವೆ ಏರ್ಪಟ್ಟಿತ್ತೆಂದು ಶಾಸನವೊಂದು ತಿಳಿಸುತ್ತದೆ. ಚಾಳುಕ್ಯ ಚಕ್ರವರ್ತಿ ಇಮ್ಮಡಿ ಸೋಲೇಶ್ವರನ ರಾಣಿಯಾದ ಹೊಯ್ಸಳ ಮಹಾದೇವಿಯು ವಿನಯಾದಿತ್ಯನ ಸಹೋದರಿಯಾಗಿದ್ದಳು. ವಿನಯಾದಿತ್ಯನ ಮಗನೂ, ಯುವರಾಜನೂ ಆದ ಎರೆಯಾಂಗನು ಚಾಳುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯನಿಗೆ ಬಲ ಭುಜದಂತಿದ್ದನು ಎಂದು ಶಾಸನಗಳಲ್ಲಿ ವರ್ಣಿಸಲಾಗಿದೆ. ಆರನೇ ವಿಕ್ರಮಾದಿತ್ಯನು ಕೈಗೊಂಡ ಉತ್ತರದ ದಂಡಯಾತ್ರೆಯ ಸಮಯದಲ್ಲಿ ಎರೆಯಾಂಗನು ಚಾಳುಕ್ಯ ಸೈನ್ಯದ ನೇತೃತ್ವವನ್ನು ವಹಿಸಿದ್ದನು. ಮಾಳವವನ್ನು ಮುತ್ತಿದ್ದಲ್ಲದೆ ಧಾರನಗರವನ್ನು ಮತ್ತು ಚಿತ್ರಕೂಟವನ್ನು ಸೂರೆಗೊಂಡನು. ಎರೆಯಾಂಗನಿಗೆ ಬಲ್ಲಾಳ, ಬಿಟ್ಟಿದೇವ (ವಿಷ್ಣುವರ್ಧನ) ಮತ್ತು ಉದಯಾದಿತ್ಯ ಎಂಬ ಮೂವರು ಗಂಡು ಮಕ್ಕಳಿದ್ದರು. ಎರೆಯಾಂಗನು ಇನ್ನೂ ಯುವರಾಜನಾಗಿದ್ದಾಗಲೇ ತನ್ನ ತಂದೆಯ ಆಳ್ವಿಕೆಯ ಕಾಲದಲ್ಲಿ ಕ್ರಿ.ಶ. 1099 ರಲ್ಲಿ ಮರಣ ಹೊಂದಿದನು. ಜೈನ ಮತಾವಲಂಬಿಯಾಗಿದ್ದ ಎರಯಾಂಗನಿಗೆ 'ಗೋಪ ನಂದಿ' ಎಂಬ ಆಚಾರ್ಯನು ಗುರುವಾಗಿದ್ದನು.

ವಿನಯಾದಿತ್ಯನು ದಕ್ಷ ಆಡಳಿತಗಾರನಾಗಿದ್ದನು. ಪೋಚಿಮಯ್ಯ ಎಂಬುವನು ಅವನ ಮಹಾಸಂಧಿವಿಗ್ರಹಿಯಾಗಿದ್ದನು. ಮರಿಯಾನೆ ಮತ್ತು ಬಾಹುಬಲಿ ಎಂಬುವರು ಅವನ ಇತರ ಮುಖ್ಯ ಸಚಿವ ಮತ್ತು ದಂಡನಾಯಕರಾಗಿದ್ದರು. ವಿನಯಾದಿತ್ಯನು ಜೈನ ಮತಾವಲಂಬಿಯಾಗಿದ್ದು ಮತ್ತಾವರ, ಸೊಸೆವೂರು, ಶ್ರವಣಬೆಳಗೊಳ, ಚಿಕ್ಕಹನಸೋಗೆ ಮೊದಲಾದ ಕಡೆಗಳಲ್ಲಿ ಅನೇಕ ಜೈನ ಬಸದಿಗಳು ಇವರ ಕಾಲದಲ್ಲಿ ನಿರ್ಮಾಣವಾದವು. ಇವನು ಕ್ರಿ.ಶ. 1100 ರಲ್ಲಿ ಮರಣ ಹೊಂದಿದನು. ಇವನು ಪರಮತ ಸಹಿಷ್ಣುವಾಗಿದ್ದನು.

### 24.3.5 ಒಂದನೇ ಬಲ್ಲಾಳ

ಯುವರಾಜ ಎರೆಯಾಗಂನು ಮೊದಲೇ ಮರಣ ಹೊಂದಿದ್ದರಿಂದ, ಅವನ ಹಿರಿಯ ಮಗನೂ ಮತ್ತು ವಿನಯಾದಿತ್ಯನ ಮೊಮ್ಮಗನೂ ಆದ ಬಲ್ಲಾಳನು ರಾಜನಾದನು. ಇವನನ್ನು ಒಂದನೇ ಬಲ್ಲಾಳನೆಂದು ಕರೆಯಲಾಗಿದೆ. ಪಟ್ಟಕ್ಕೆ ಬಂದ ಕೂಡಲೇ ಬಲ್ಲಾಳನು ತನ್ನ ಸಂತತಿಯ ಪೂರ್ವಿಕರ ನೆಲೆಯಾಗಿದ್ದ ಸೊಸೆವೂರು ಅಥವಾ ಶಶಕಪುರವನ್ನು ಸಂದರ್ಶಿಸಿ ಅಲ್ಲಿನ ದೇವಾಲಯಗಳಿಗೆ ಕೈಂಕರ್ಯಗಳನ್ನು ಏರ್ಪಡಿಸಿ ದತ್ತಿಯನ್ನು ಬಿಟ್ಟನು. ತನ್ನ ತಾತ ಎರಡನೇ ವಿನಯಾದಿತ್ಯನಂತೆ ಇವನೂ ಕೂಡ ಕಲ್ಯಾಣದ ಚಾಳುಕ್ಯರ ಸಾಮಂತತ್ವವನ್ನು ಒಪ್ಪಿಕೊಂಡು 'ತ್ರಿಭುವನ ಮಲ್ಲ' ಎಂಬ ಬಿರುದನ್ನು ಹೊಂದಿದ್ದನು. ಪಟ್ಟಕ್ಕೆ ಬಂದ ಕೂಡಲೇ ಚೆಂಗಾಳ್ವರನ್ನು ಹತ್ತಿಕ್ಕಬೇಕಾಯಿತು. ಬಲ್ಲಾಳನು ದೋರ ಸಮುದ್ರವನ್ನು ತನ್ನ ರಾಜಧಾನಿಯಾಗಿ ಮುಂದುವರಿಸಿದನು. ಬಲ್ಲಾಳನ ಆಳ್ವಿಕೆಯ ಅತಿ

ಮುಖ್ಯ ಘಟನೆ ಎಂದರೆ ಶಾಂತಾರ ಸಂತತಿಯ ಜಗದೇವನ ಆಕ್ರಮಣವನ್ನು ತನ್ನ ಸಹೋದರ ವಿಷ್ಣುವರ್ಧನನ ಸಹಾಯದಿಂದ ಎದುರಿಸಿ ಸೋಲಿಸಿ ಹಿಮ್ಮೆಟ್ಟಿಸಿದುದು. ಬಲ್ಲಾಳನು ಅನಾರೋಗ್ಯಕ್ಕೆ ತುತ್ತಾಗಿ ಮರಣ ಹೊಂದಿದನು. ಇವನು ಜೈನ ಮತಾವಲಂಬಿಯಾಗಿದ್ದು ಇವನ ಕಾಲದಲ್ಲಿ ರಾಜಧಾನಿ ಮತ್ತು ಇತರ ಕಡೆಗಳಲ್ಲಿ ಹಲವು ಜೈನ ಬಸದಿಗಳು ಇವನ ಕಾಲದಲ್ಲಿ ನಿರ್ಮಾಣಗೊಂಡವು. ಇವನು ಪರಿಮತ ಸಹಿಷ್ಣುವಾಗಿದ್ದನು.

## 24.4 ವಿಷ್ಣುವರ್ಧನ (ಕ್ರಿ.ಶ. 1108-1142)

ಒಂದನೇ ಬಲ್ಲಾಳನಿಗೆ ಮಕ್ಕಳಿರಲಿಲ್ಲವಾದ್ದರಿಂದ ಅವನ ಮರಣನಂತರ ಅವನ ತಮ್ಮನಾದ ವಿಷ್ಣುವರ್ಧನನು ಕ್ರಿ.ಶ. 1108 ರಲ್ಲಿ ಸಿಂಹಾಸನಕ್ಕೆ ಬಂದನು. ಪಟ್ಟಕ್ಕೆ ಬರುವ ಮೊದಲೇ ಅವನು ಆಡಳಿತ ಮತ್ತು ಯುದ್ಧಗಳಲ್ಲಿ ನುರಿತು ವಿಶೇಷ ಅನುಭವ ಗಳಿಸಿದ್ದನು. ತನ್ನ ತಾತನಾದ ಎರಡನೇ ವಿನಯಾದಿತ್ಯನ ಆಳ್ವಿಕೆಯ ಕೊನೆಗಾಲದಲ್ಲಿ ಶ್ರೀರಂಗ ಪಟ್ಟಣ ತಾಲ್ಲೂಕಿನ ಬೆಳಗೊಳದ ಸುತ್ತಮುತ್ತಲ ಪ್ರದೇಶಕ್ಕೆ ಪ್ರಾಂತ್ಯಾಧಿಕಾರಿಯಾಗಿದ್ದನು. ಬೆಳಗೊಳದ ಸೀತಾರಾಮ ದೇವಾಲಯಕ್ಕೆ ದಾನನೀಡಿ ಆ ಗ್ರಾಮವನ್ನು ಒಂದು ಅಗ್ರಹಾರವಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ಕೊಟ್ಟನು. ಆ ಪ್ರದೇಶವನ್ನು 1096 ರ ಶಾಸನವು 'ಶ್ರೀ ವಿಷ್ಣುವರ್ಧನ ಚತುರ್ವೇದಿ ಮಂಗಲ' ಎಂಬ ಹೆಸರಿನಿಂದಲೇ ಕರೆದಿದೆ. ತನ್ನ ಅಣ್ಣ ಬಲ್ಲಾಳನ ಆಳ್ವಿಕೆಯಲ್ಲಿ ಯುದ್ಧ ಮತ್ತು ಆಡಳಿತದಲ್ಲಿ ಸಕ್ರಿಯ ಪಾತ್ರ ವಹಿಸಿದ್ದನು. ಜಗದೇವ ಹಾಗೂ ಇತರರೊಡನೆ ಹೋರಾಡಿ ಶತ್ರುಗಳನ್ನು ಸೋಲಿಸಿದನು.

ತನ್ನ 35 ವರ್ಷಗಳ ಆಳ್ವಿಕೆಯಲ್ಲಿ ವಿಷ್ಣುವರ್ಧನನು ಹೊಯ್ಸಳ ಸಂತತಿಯ ಅಧಿಕಾರವನ್ನು ಭದ್ರ ಬುನಾದಿಯ ಮೇಲೆ ಸ್ಥಾಪಿಸಿದನು. ರಾಜ್ಯವನ್ನು ವಿಸ್ತರಿಸಿ ಆಡಳಿತವನ್ನು ವ್ಯವಸ್ಥೆಗೊಳಿಸಿದನು. ಹೊಯ್ಸಳ ಸಂತತಿಯ ಪರಮ ಶ್ರೇಷ್ಠ ರಾಜರಲ್ಲಿ ಒಬ್ಬನಾಗಿರುವುದಲ್ಲದೆ ಕರ್ನಾಟಕ ಚರಿತ್ರೆಯ ಆದರ್ಶ ರಾಜರಲ್ಲೊಬ್ಬನಾಗಿದ್ದಾನೆ. ಇವನು ಎರಡು ಧ್ಯೇಯಗಳನ್ನು ಹೊಂದಿದ್ದಾಗಿ ತಿಳಿದು ಬರುತ್ತದೆ. ಮೊದಲನೆಯದಾಗಿ ಗಂಗವಾಡಿ ಮತ್ತು ನೊಳಂಬವಾಡಿ ಪ್ರದೇಶಗಳನ್ನು ಚೋಳರ ಆಳ್ವಿಕೆಯಿಂದ ಪಾರು ಮಾಡುವುದು. ಎರಡನೆಯದಾಗಿ ಚಾಳುಕ್ಯರ ಅಧೀನತೆಯನ್ನು ಕೊನೆಗಾಣಿಸಿ ತನ್ನ ಮನೆತನದ ಸ್ವತಂತ್ರ ಆಳ್ವಿಕೆಯನ್ನು ಸ್ಥಾಪಿಸುವುದು. ಈ ರಾಜಕೀಯ ಧ್ಯೇಯಗಳ ಸಾಧನೆಗಾಗಿ ಕಾರ್ಯೋನ್ಮುಖನಾದನು. ಸಿಂಹಾಸನಕ್ಕೆ ಬಂದ ಕೂಡಲೇ ಆಡಳಿತವನ್ನು ಬಿಗಿಗೊಳಿಸಿ, ಸೈನ್ಯವನ್ನು ಹೆಚ್ಚಿಸಿಕೊಂಡು, ಅನುಭವಿಗಳನ್ನು, ಪರಾಕ್ರಮಿಗಳನ್ನು ಸಚಿವ ಮತ್ತು ದಂಡನಾಯಕರುಗಳಾಗಿ ನೇಮಿಸಿಕೊಂಡನು. ಶೂರನೂ, ಅನುಭವಿಯೂ, ದಕ್ಷನೂ ಆದ ಗಂಗ ರಾಜನನ್ನು ತನ್ನ ಪ್ರಧಾನ ದಂಡನಾಯಕನನ್ನಾಗಿ ನೇಮಿಸಿದನು. ಸರ್ವಸಿದ್ಧತೆ ಮಾಡಿಕೊಂಡು ಗಂಗವಾಡಿಯನ್ನು ಚೋಳರ ಆಕ್ರಮಣದಿಂದ ತೆರವು ಮಾಡಲು ಅಣಿಯಾದನು. ಗಂಗವಾಡಿಯ ರಾಜಧಾನಿ ತಲಕಾಡನ್ನು ಮುತ್ತಲು ನಿರ್ಧರಿಸಿ ಗಂಗರಾಜನನ್ನು ಮುಖ್ಯ ದಂಡನಾಯಕನನ್ನಾಗಿ ನೇಮಿಸಿದನು.

### *24.4.1 ರಾಜ್ಯ ವಿಸ್ತರಣೆ*

ವಿಷ್ಣುವರ್ಧನನ ರಾಜ್ಯವಿಸ್ತರಣೆಯು ತಲಕಾಡು ಕದನದಿಂದ ಆರಂಭವಾಗುತ್ತದೆ. ಆದಿಯಮ ಎಂಬುವನು ಆ ಸಮಯದಲ್ಲಿ ಚೋಳ ಸಾಮ್ರಾಟನ ಪ್ರಾಂತ್ಯಾಧಿಕಾರಿಯಾಗಿ ಗಂಗವಾಡಿಯ ಆಡಳಿತಕ್ಕೆ ಸೀಮಿತನಾಗಿದ್ದನು. ಚೋಳರು ಗಂಗವಾಡಿಯನ್ನು 'ರಾಜರಾಜ ಚೋಳಮಂಡಲ' ಎಂಬುದಾಗಿಯೂ, ತಲಕಾಡನ್ನು 'ರಾಯರಾಯಪುರ' (ರಾಜರಾಜಪುರ) ಎಂಬುದಾಗಿಯೂ ಕರೆಯುತ್ತಿದ್ದರು. ರಾಜನೀತಿಜ್ಞನಾದ ಹೊಯ್ಸಳ ಸೈನ್ಯದ ದಂಡಾಧಿಪತಿಯಾದ ಗಂಗರಾಜನು ರಕ್ತಪಾತಕ್ಕೆ ಎಡೆಯಿಲ್ಲದಂತೆ ಗಂಗವಾಡಿಯನ್ನು ಬಿಟ್ಟುಕೊಡಬೇಕೆಂದು ದೂತರ ಮೂಲಕ ಆದಿಯಮನಿಗೆ ಹೇಳಿಕಳುಹಿಸಿದನು. ಆದರೆ ಯುದ್ಧ ಮಾಡಿ ತಲಕಾಡನ್ನು ವಶಪಡಿಸಿಕೊಳ್ಳುವಂತೆ ಆದಿಯಮನು ದರ್ಪದಿಂದ ಉತ್ತರಿಸಿದನು. ಇದರಿಂದ ಯುದ್ಧ ಅನಿವಾರ್ಯವಾಯಿತು. ವಿಷ್ಣುವರ್ಧನ ಮತ್ತು ಗಂಗರಾಜನು ಹೊಯ್ಸಳ ಸೈನ್ಯವನ್ನು ಕನ್ನಂಬಾಡಿ ಮತ್ತು ಶ್ರೀರಂಗಪಟ್ಟಣದ ಮುಖಾಂತರ ತಲಕಾಡಿನತ್ತ ನಡೆಸಿದರು. ಮೊದಲೇ ಸಿದ್ಧರಾಗಿದ್ದ ಚೋಳ ಅಧಿಕಾರಿಗಳಾದ ಆದಿಯಮ, ದಾಮೋದರ, ನರಸಿಂಗವರ್ಮನ್ ಮೊದಲಾದವರು ತಲಕಾಡಿನ ಹೊರವಲಯದಲ್ಲಿ ಹೊಯ್ಸಳ ಸೈನ್ಯವನ್ನು ಎದುರಿಸಿದರು. ತಲಕಾಡು ಯುದ್ಧವು ಕ್ರಿ.ಶ. 1114 ರಲ್ಲಿ ನಡೆಯಿತು. ಕ್ರಿ.ಶ. 1114 ರ ಪ್ರಾರಂಭದಿಂದ ಚೋಳರ ಶಾಸನಗಳು ಗಂಗವಾಡಿ ಪ್ರದೇಶದಲ್ಲಿ ದೊರಕದಿರುವುದರಿಂದಲೂ ಹಾಗೂ ವಿಷ್ಣುವರ್ಧನನು ಕ್ರಿ.ಶ. 1115 ರ ಆದಿಯಲ್ಲೆ ಮೊದಲನೆ ಬಾರಿಗೆ "ತಲಕಾಡುಗೊಂಡ" ಎಂಬ ಬಿರುದನ್ನು ಧರಿಸಿದ್ದುದರಿಂದಲೂ ತಲಕಾಡು ಕದನವು ಕ್ರಿ.ಶ. 1114 ರಲ್ಲಿಯೇ ನಡೆಯಿತ್ತೆಂದು ಖಚಿತವಾಗಿ ತಿಳಿದು ಬರುತ್ತದೆ. ತಲಕಾಡಿನ ಹೊರವಲಯದಲ್ಲಿ ಹೊಯ್ಸಳ ಮತ್ತು ಚೋಳ ಸೈನ್ಯಗಳಿಗೆ ಭೀಕರ ಕದನವು ಜರುಗಿತು.

ಹೊಯ್ಸಳ ಸೇನೆಯ ಆಕ್ರಮಣವನ್ನು ಆದಿಯಮನು ತಡೆಗಟ್ಟಲಾಗಲಿಲ್ಲ. ಚೋಳರ ಸೈನ್ಯದಲ್ಲಿ ಹೆಚ್ಚು ಸಾವು ನೋವುಗಳುಂಟಾದವು. ಚೋಳ ಸೈನ್ಯವು ಸೋತು, ಕಂಗೆಟ್ಟು, ಹಿಮ್ಮೆಟ್ಟಿ ತಲಕಾಡಿನ ಕೋಟೆಯೊಳಗೆ ರಕ್ಷಣೆ ಪಡೆಯಲು ಧಾವಿಸಿತು. ವಿಷ್ಣುವರ್ಧನ ಮತ್ತು ಗಂಗ ರಾಜರ ನಾಯಕತ್ವದ ಹೊಯ್ಸಳ ಸೈನ್ಯವು ಶತ್ರು ಸೈನ್ಯವನ್ನು ಬೆನ್ನಟ್ಟಿ ಕೋಟೆಯನ್ನು ಪ್ರವೇಶಿಸಿ ವೀರಾವೇಶದಿಂದ ಹೋರಾಡಿತು. ವೈರಿ ಸೇನೆಯು ಸೋತು ರಕ್ಷಣೆಗಾಗಿ ಬೇರೆ ಬೇರೆ ದಿಕ್ಕಿಗೆ ಓಡಿತು. ಗಂಗರಾಜನು ಆದಿಯಮನ ನಿವಾಸವನ್ನು ಹೊಕ್ಕು ಅವನನ್ನು ಇರಿದು ಕೊಂದನು. ಅಳಿದುಳಿದ ಚೋಳ ಸೈನ್ಯವು ಎರಡು ಗುಂಪುಗಳಾಗಿ ತಮಿಳುನಾಡಿನತ್ತ ಧಾವಿಸಿತು. ಒಂದು ಕಡೆಯು ಕೊಂಗು ನಾಡಿನತ್ತ ಪಲಾಯನ ಮಾಡಿತು. ವಿಷ್ಣುವರ್ಧನನ ಸೈನ್ಯ ಅದನ್ನು ಬೆನ್ನಟ್ಟಿ ಕೊಂಗು ನಾಡನ್ನು ವಶಪಡಿಸಿಕೊಂಡಿತು. ಮತ್ತೊಂದು ಪಡೆಯು ಕೋಲಾರದ ಮಾರ್ಗವಾಗಿ ಪಲಾಯನ ಮಾಡಿತು. ವಿಷ್ಣುವರ್ಧನನೇ ಸ್ವತಃ ಇದನ್ನು ಬೆನ್ನಟ್ಟಿ ನೋಳಂಬವಾಡಿಯನ್ನು ಆಕ್ರಮಿಸಿ ಕೋಲಾರ ಮತ್ತು ನಾಂಗಲಿಯವರೆಗಿನ ಪ್ರದೇಶಗಳನ್ನು ವಶಪಡಿಸಿಕೊಂಡನು. ಗಂಗವಾಡಿಯು ಚೋಳರಿಂದ ವಿಮುಕ್ತವಾಯಿತು. ವಿಷ್ಣುವರ್ಧನನ ಸೈನ್ಯ ತಮಿಳುನಾಡಿನ ಗಡಿಯನ್ನು ಪ್ರವೇಶಿಸಿತು. ಆಂತರಿಕ ತೊಂದರೆಗೆ ಒಳಗಾಗಿದ್ದ ಚೋಳ ಚಕ್ರವರ್ತಿ ಕುಲೋತ್ತುಂಗನು ಮತ್ತೆ ಗಂಗವಾಡಿಯನ್ನು ಸ್ವಾಧೀನ ಪಡಿಸಿಕೊಳ್ಳುವ ಅಥವಾ ಹೊಯ್ಸಳರ ಮೇಲೆ ಯುದ್ಧ ಮಾಡುವ ಸಾಹಸಕ್ಕೆ ಕೈಹಾಕಲಿಲ್ಲ.

ತಲಕಾಡಿನ ವಿಜಯವು ಹೊಯ್ಸಳ ಅಭ್ಯುದಯಕ್ಕೆ ಸಂಬಂಧಿಸಿದಂತೆ ಒಂದು ಮಹತ್ತರ ಘಟನೆಯಾಗಿದೆ. ಕ್ರಿ.ಶ. 1004 ರಲ್ಲಿ ಗಂಗ ಸಂತತಿ ಅವನತಿ ಹೊಂದಿದ ತರುವಾಯ ಸುಮಾರು ಒಂದು ನೂರ ವರ್ಷಗಳ ಕಾಲ ಚೋಳರ ಆಳ್ವಿಕೆಗೆ ಒಳಗಾಗಿದ್ದ ಕನ್ನಡ ಪ್ರದೇಶಗಳು ವಿಮೋಚನೆ ಪಡೆದವು. ಹೊಯ್ಸಳ ರಾಜ್ಯವು ವಿಸ್ತಾರವಾಯಿತು. ಗಂಗವಾಡಿ, ನೊಳಂಬವಾಡಿ, ಕೊಂಗುನಾಡು ಹೊಯ್ಸಳ ರಾಜ್ಯಕ್ಕೆ ಸೇರಿದವು. ವಿಷ್ಣುವರ್ಧನನು 'ತಲಕಾಡುಗೊಂಡ' ಹಾಗೂ ಗಂಗ ವಂಶದ ಉತ್ತರಾಧಿಕಾರಿ ಎಂಬರ್ಥದಲ್ಲಿ 'ವಿಕ್ರಮಗಂಗ' ಎಂಬ ಬಿರುದುಗಳನ್ನು ಧರಿಸಿದನು. ತನ್ನ ಈ ವಿಜಯದ ಜ್ಞಾಪಕಾರ್ಥವಾಗಿ ಬೇಲೂರಿನ ಚೆಲುವ ನಾರಾಯಣ, ತಲಕಾಡಿನ ಕೀರ್ತಿನಾರಾಯಣ ಮೊದಲಾದ ದೇವಾಲಯಗಳನ್ನು ನಿರ್ಮಿಸಿದನು. 'ತಲಕಾಡುಗೊಂಡ' 'ನೊಳಂಬವಾಡಿಗೊಂಡ' 'ಮಲೆಪರೋಳ್‌ಗಂಡ' ಎಂಬ ಬಿರುದುಗಳನ್ನು ಟಂಕಿಸಿದ ಚಿನ್ನದ ನಾಣ್ಯಗಳನ್ನು ಅಚ್ಚು ಹಾಕಿಸಿದನು. ತನ್ನ ವಿಜಯಕ್ಕೆ ಬಹುಮಟ್ಟಿಗೆ ಕಾರಣನಾದ ಗಂಗರಾಜನಿಗೆ 'ಮಹಾಪ್ರಚಂಡ ದಂಡನಾಥ' ಮುಂತಾದ ಬಿರುದುಗಳನ್ನು ನೀಡಿ, ಗ್ರಾಮಗಳನ್ನು ದಾನವಾಗಿ ಕೊಟ್ಟು ಗೌರವಿಸಿದನು. ತಲಕಾಡಿನ ವಿಜಯ ಹೊಯ್ಸಳರ ಪ್ರಾಬಲ್ಯವನ್ನು ಸಾರಿತು. ದಕ್ಷಿಣ ಭಾರತದ ಇತರ ರಾಜಮನೆತನಗಳಲ್ಲಿ ವಿಷ್ಣುವರ್ಧನನ ಕೀರ್ತಿ ಪರಾಕ್ರಮಗಳು ಏಕಕಾಲದಲ್ಲಿ ಭಯಾಶ್ಚರ್ಯಗಳನ್ನು ಮೂಡಿಸಿದವು.

ಚೋಳರನ್ನು ಸೋಲಿಸಿ ಗಂಗವಾಡಿಯ ಮೇಲೆ ತನ್ನ ಆಳ್ವಿಕೆಯನ್ನು ಸ್ಥಾಪಿಸಿದ ಅನಂತರ ವಿಷ್ಣುವರ್ಧನನು ಸ್ವತಂತ್ರವಾಗಿ ಆಳಲು ಪ್ರಾರಂಭಿಸಿದನು. ಪುಣಿಸಮಯ್ಯನ ನೇತೃತ್ವದಲ್ಲಿ ಹೊಯ್ಸಳ ಸೇನೆಯು ನೀಲಗಿರಿಯನ್ನು ವಶಪಡಿಸಿಕೊಂಡು ನೀಲಾದ್ರಿಯ ಮೇಲೆ ಹೊಯ್ಸಳ ಧ್ವಜವನ್ನು ಹಾರಿಸಿತು. ವಿಷ್ಣುವರ್ಧನನು ಸ್ವತಃ ಸೈನ್ಯ ಸಮೇತನಾಗಿ ಹೋಗಿ ಚಾಳುಕ್ಯರ ಸಾಮಂತರಾದ ಶಾಂಕಾರರನ್ನು ಹಾನಂಗಲ್ಲಿನ ಕದಂಬರನ್ನು ಸೋಲಿಸಿದನು. ಕ್ರಿ.ಶ. 1117 ರಲ್ಲಿ ಉಚ್ಚಂಗಿಯ ಪಾಂಡ್ಯರನ್ನು ಚಿತ್ರದುರ್ಗ ಜಿಲ್ಲೆಯ 'ದುಮ್ಮೆ' ಎಂಬಲ್ಲಿ ಸೋಲಿಸಿ ಕಪ್ಪ ಕಾಣಿಕೆಯನ್ನು ಪಡೆದು ತನ್ನ ರಾಜ್ಯದ ಗಡಿಯನ್ನು ವಿಸ್ತರಿಸಿದನು.

ಹೊಯ್ಸಳರ ಪ್ರಾಬಲ್ಯ ಕ್ರಮೇಣ ಬೆಳೆಯುತ್ತಿದ್ದುದನ್ನು ಗಮನಿಸಿದ ಚಾಳುಕ್ಯ ಚಕ್ರವರ್ತಿ ಆರನೇ ವಿಕ್ರಮಾದಿತ್ಯನು (1075-1127) ವಿಷ್ಣುವರ್ಧನನ ಪ್ರಭಾವವನ್ನು ತಡೆಹಿಡಿಯಲು ತವಕಿಸಿದನು. ತನ್ನ ಸಾಮ್ರಾಜ್ಯದ ಎಲ್ಲಾ ಸೇನೆಗಳನ್ನು ಒಟ್ಟುಗೂಡಿಸಿ, ಅನುಭವಿಯೂ, ಸಮರ್ಥನೂ ಆದ ಸಾಮಂತ ಆಚುಗಿಯನ್ನು ಸೈನ್ಯದ ಮುಖಂಡನನ್ನಾಗಿ ನೇಮಿಸಿ ದೋರಸಮುದ್ರವನ್ನು ಆಕ್ರಮಿಸಲು ಕಳುಹಿಸಿದನು. 1118 ರಲ್ಲಿ ಚಾಳುಕ್ಯ ಸೈನ್ಯವು ಹಾಸನ ಜಿಲ್ಲೆಯ ಕಣ್ಣೆಗಾಲ ಗ್ರಾಮವನ್ನು ತಲುಪಿತು.

ವಿಷ್ಣುವರ್ಧನ ಮತ್ತು ದಂಡನಾಯಕ ಗಂಗರಾಜನು ಚಾಳುಕ್ಯ ಸೈನ್ಯವನ್ನು ದೂರದಲ್ಲೇ ಎದುರಿಸಲು ತೀರ್ಮಾನಿಸಿದರು. ಗಂಗರಾಜನು ಚಾಳುಕ್ಯ ಸೈನ್ಯವನ್ನು ಕಣ್ಣೆಗಾಲದ ಬಳಿಯಲ್ಲಿ ತಡೆಗಟ್ಟಿದನು. ಅಪಾರ ಚಾಳುಕ್ಯ ಸೈನ್ಯದ ಮೇಲೆ ರಾತ್ರಿ ವೇಳೆಯಲ್ಲಿ ಎರಗಿದನು. ಹೊಯ್ಸಳ ಸೈನ್ಯದ ಈ ಅನಿರೀಕ್ಷಿತ ಧಾಳಿಗೀಡಾದ ಚಾಳುಕ್ಯ ಸೈನ್ಯವು ಸೋತು ಯುದ್ಧ ಸಾಮಗ್ರಿಗಳನ್ನು ರಣರಂಗದಲ್ಲೇ ಬಿಟ್ಟು ಓಡಿತು. ಗಂಗರಾಜನು ಹೊಯ್ಸಳರ ಗಡಿಯವರೆಗೂ ವೈರಿಗಳನ್ನು ಬೆನ್ನಟ್ಟಿ ಹೋದನು. ಶತ್ರುಸೈನ್ಯ ಬಿಟ್ಟು ಹೋದ ಯುದ್ಧ ಸಾಮಗ್ರಿಗಳನ್ನು ಸಂಗ್ರಹಿಸಿ ತಂದು ವಿಷ್ಣುವರ್ಧನನಿಗೆ ಒಪ್ಪಿಸಿದನು. ಚಾಳುಕ್ಯ ವಿಕ್ರಮಾದಿತ್ಯನು ಬದುಕಿರುವವರೆಗೂ ಹೊಯ್ಸಳರಿಗೂ

ಚಾಳುಕ್ಯರಿಗೂ ಯುದ್ಧ ಪುನಃ ಸಂಘಟಿಸಲಿಲ್ಲ. ಕ್ರಿ.ಸ. 1127 ರಲ್ಲಿ ವಿಕ್ರಮಾದಿತ್ಯ ಮರಣದ ನಂತರ ವಿಷ್ಣುವರ್ಧನನ ರಾಜ್ಯ ವಿಸ್ತರಣಾ ನೀತಿಗೆ ಅವಕಾಶ ದೊರೆಯಿತು. ಕೃಷ್ಣ ನದಿಯವರೆಗೂ ತನ್ನ ಅಧಿಕಾರವನ್ನು ಸ್ಥಾಪಿಸಲು ಇಚ್ಛಿಸಿದನು. ಆದರೆ ಆ ವೇಳೆಗೆ ಅವನು ಹಲವು ಕೌಟಂಬಿಕ ಆಘಾತಕ್ಕೀಡಾದನು. ಅವನ ಏಕಮಾತ್ರ ಪುತ್ರನೂ, ಯುವರಾಜನೂ ಆಗಿದ್ದ ಕುಮಾರ ಬಲ್ಲಾಳನು 1129 ರಲ್ಲಿ ಅಕಾಲ ಮರಣಕ್ಕೀಡಾದನು. ತನ್ನ ಮೆಚ್ಚಿನ ರಾಣಿ ಶಾಂತಲಾ ದೇವಿಯು ಸಲ್ಲೇಖನ ವಿಧಿಯನ್ನು ಅನುಸರಿಸಿ ಮರಣ ಹೊಂದಿದಳು. ಹಾಗೆಯೇ ತನ್ನ ಬಲಭುಜದಂತಿದ್ದ ಅಮಾತ್ಯ ಗಂಗರಾಜನು 1130 ರಲ್ಲಿ ಮರಣ ಹೊಂದಿದನು. ತನ್ನ ಆಪ್ತೇಷ್ಟರ ಅಗಲಿಕೆಯಿಂದ ಚೇತರಿಸಿಕೊಂಡು ಲಕ್ಷ್ಮೀದೇವಿ ಎಂಬುವಳನ್ನು ವರಿಸಿ ಅವಳಿಂದ ಪುತ್ರನನ್ನು ಪಡೆದು ಅವನಿಗೆ ಕೂಡಲೆ ಯುವರಾಜಪಟ್ಟ ಕಟ್ಟಿ ಸಂತುಷ್ಟನಾದನು.

ಉತ್ತರಾಧಿಕಾರಿಯ ಜನನದಿಂದ ಹರ್ಷಗೊಂಡ ವಿಷ್ಣುವರ್ಧನನು ಪುನಃ ರಾಜ್ಯ ವಿಸ್ತರಣೆಗೆ ತೊಡಗಿದನು. ತನ್ನ ರಾಜ್ಯದ ಗಡಿಗಳನ್ನು ದಾಟಿ ಶಾಂತಾರರನ್ನು, ಸಿಂಧರನ್ನು, ಕದಂಬರನ್ನು ಮತ್ತು ಉಚ್ಚಂಗಿ ಪಾಂಡ್ಯರನ್ನು ಯುದ್ಧಗಳಲ್ಲಿ ಸೋಲಿಸಿ ಅವರಿಂದ ಕಾಣಿಕೆಯನ್ನು ಪಡೆದನು. ಚಾಳುಕ್ಯ ವಿಕ್ರಮಾದಿತ್ಯನ ಉತ್ತರಾಧಿಕಾರಿಯಾಗಿದ್ದ ಭೂಲೋಕ ಮಲ್ಲನು ತನ್ನ ಸಾಮ್ರಾಜ್ಯ ಪರಿಸ್ಥಿತಿಯನ್ನು ನಿಭಾಯಿಸಲು ಅಸಮರ್ಥನಾಗಿದ್ದನು. ವಿಷ್ಣುವರ್ಧನನು ರಾಜ್ಯ ವಿಸ್ತರಿಸಲು ಒಳ್ಳೆಯ ಅವಕಾಶ ಉಂಟಾಯಿತು. ಅವನು ಕ್ರಿ.ಶ. 1137 ರ ವೇಳೆಗೆ ತುಂಗಭದ್ರ ನದಿಯ ಪ್ರದೇಶಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಿ ಕೃಷ್ಣಾ ನದಿಯವರೆಗೂ ದಂಡೆತ್ತಿ ಹೋದನೆಂದೂ ದಣಿದ ಕುದುರೆಗಳು ಪೆರ್ದೊರೆ (ಪೆದ್ದೊರೆ) ಯಲ್ಲಿ ಜಲಪಾನ ಮಾಡಿದವೆಂದೂ ಶಾಸನಗಳಲ್ಲಿ ವರ್ಣಿಸಲಾಗಿದೆ. ಬನವಾಸಿ, ಹಾನಂಗಲ್ ಹಲಸೀಗೆ ಮತ್ತು ಬೆಳ್ವೊಲ ಪ್ರದೇಶಗಳ ಮೇಲೆ ತನ್ನ ಅಧಿಕಾರ ಸ್ಥಾಪಿಸಿ ಹಾನಂಗಲ್ಲನ್ನು ತನ್ನ ಉಪರಾಜಧಾನಿಯನ್ನಾಗಿ ಮಾಡಿಕೊಂಡನು. ಆ ಪ್ರದೇಶದ ಬಿರುದುಗಳನ್ನು ಧರಿಸಿದನು. ಪುನಃ 1142 ರಲ್ಲಿ ತನ್ನ ಉಪರಾಜಧಾನಿಯಾದ ಬಂಕಾಪುರದಲ್ಲಿದಲ್ಲಿದ್ದನು. ಆ ವೇಳೆಗೆ ವೃದ್ಧಾಪ್ಯವನ್ನು ಸಮೀಪಿಸಿದ್ದ ಅವನು ಅಲ್ಲಿಯೇ ಸ್ವರ್ಗಸ್ಥನಾದನು. ಅವನ ಅಂತ್ಯಕ್ರಿಯೆಯನ್ನು ದೋರಸಮುದ್ರದಲ್ಲಿಯೇ ನೆರವೇರಿಸಲಾಯಿತು. ಇನ್ನೂ ಬಾಲಕನಾಗಿದ್ದ ಅವನ ಪುತ್ರ ವಿಜಯ ನರಸಿಂಹನಿಗೆ ಪಟ್ಟಾಭಿಷೇಕ ಮಾಡಿದರು.

### *24.4.2 ವಿಷ್ಣುವರ್ಧನನ ಧಾರ್ಮಿಕ ನೀತಿ ಮತ್ತು ಸಾಂಸ್ಕೃತಿಕ ಸಾಧನೆ:*

ವಿಷ್ಣುವರ್ಧನನ ಆಳ್ವಿಕೆಯು ಧಾರ್ಮಿಕ ಪುರೋಭಿವೃದ್ಧಿಯ ಕಾಲವಾಗಿತ್ತು. ಜೈನ, ವೈಷ್ಣವ, ಶೈವ ಪಂಥಗಳು ಕನ್ನಡ ನಾಡಿನಲ್ಲಿ ಪರಸ್ಪರ ಅಭಿವೃದ್ಧಿ ಸ್ಥಿತಿಯಲ್ಲಿದ್ದವು. ವಿಷ್ಣುವರ್ಧನನು ಪ್ರಾರಂಭದಲ್ಲಿ ಜೈನಮತಾವಲಂಬಿಯಾಗಿದ್ದನೆಂದೂ ಅನಂತರ ವೈಷ್ಣವ ಪಂಥವನ್ನು ಸ್ವೀಕರಿಸಿನೆಂದೂ ಪ್ರತೀತಿಯಾಗಿದೆ. ಈಘಟನೆಗೆ ಸಂಬಂಧಿಸಿದ ಹಾಗೆ ವಿಭಿನ್ನ ಹೇಳಿಕೆಗಳಿವೆ. ಒಂದು ಐತಿಹ್ಯದ ಪ್ರಕಾರ ಅವನ ಕುಮಾರಿಯಾದ ಹರಿಯಲದೇವಿಯೂ ಕ್ರೂರ ಗ್ರಹ ದೋಷದಿಂದ ನರಳುತ್ತಿದ್ದಳೆಂದೂ, ಅವರ ತಪಶ್ಯಕ್ತಿಗೆ ಮಾರು ಹೋದ ವಿಷ್ಣುವರ್ಧನನು ವೈಷ್ಣವ ಪಂಥವನ್ನು ಸ್ವೀಕರಿಸಿದನೆಂದೂ ತಿಳಿದು ಬರುತ್ತದೆ. ಇನ್ನೊಂದು ಹೇಳಿಕೆಯ ಪ್ರಕಾರ ವಿಷ್ಣುವರ್ಧನನಿಗೆ ಲಕ್ಷ್ಮಿದೇವಿ ಎಂಬ ಶ್ರೀ ವೈಷ್ಣವ ಪಂಥಕ್ಕೆ ಸೇರಿದ ರಾಣಿಯಿದ್ದಳೆಂದೂ, ಅವಳು ಪ್ರಾರಂಭದಿಂದಲೂ ತನ್ನ ಗಂಡನನ್ನು ವೈಷ್ಣವ ಮತವನ್ನು ಸ್ವೀಕರಿಸುವಂತೆ ಪ್ರೇರೇಪಿಸುತ್ತಿದ್ದಳೆಂದೂ ಕೊನೆಗೆ ವಿಷ್ಣುವರ್ಧನನು ಶ್ರೀರಾಮಾನುಜಚಾರ್ಯರ ಸಂದರ್ಶನವಾದ ಮೇಲೆ ವೈಷ್ಣವ ಧರ್ಮಕ್ಕೆ ಮತಾಂತರ ಹೊಂದಿದನೆಂದು ವರ್ಣಿಸಲಾಗಿದೆ. ಮತ್ತೊಂದು ಐತಿಹ್ಯ ಪ್ರಕಾರ ವಿಷ್ಣುವರ್ಧನನು ತನ್ನ ಪೂರ್ವಿಕರಂತೆ ಮೊದಲಿಗೆ ಜೈನನಾಗಿದ್ದನೆಂದೂ, ಯುದ್ಧವೊಂದರಲ್ಲಿ ತನ್ನ ಬೆರಳೊಂದನ್ನು ಕಳೆದುಕೊಂಡಿದ್ದರಿಂದ ಸಹದರ್ಮೀಯರು ಅವನೊಡನೆ ಸಹ ಭೋಜನ ನಿರಾಕರಿಸಿದರೆಂದೂ ಇದರಿಂದ ಖೇದಗೊಂಡ ರಾಜನು ಕನ್ನಡ ನಾಡಿಗೆ ರಾಮಾನುಜರು ಬಂದ ಮೇಲೆ ವೈಷ್ಣವ ಮತಕ್ಕೆ ಸೇರಿದನೆಂದು ಹೇಳಲಾಗಿದೆ.

ವಿಷ್ಣುವರ್ಧನನಿಗೆ ಮೊದಲು ಬಿಟ್ಟಿ ಎಂಬ ಹೆಸರಿತ್ತೆಂದೂ ವೈಷ್ಣವ ಮತಕ್ಕೆ ಸೇರಿದ ಮೇಲೆ ವಿಷ್ಣುವರ್ಧನ ಎಂಬ ಹೊಸ ನಾಮಾಂಕಿತ ಎಂಬ ಅಭಿಪ್ರಾಯವಿದ್ದರೂ ಬಿಟ್ಟಿ ವಿಠಲ - ವಿಷ್ಣು ರೂಪಾಂತರವೆಂಬುವುದು ನಿಜ. ಅವರಿಗೆ ಮೊದಲಿನಿಂದಲೂ ವಿಷ್ಣುವರ್ಧನ ಎಂಬ ಹೆಸರಿತ್ತೆಂದು ಹೇಳಲು 1096 ರ ಶಾಸನ ನಿದರ್ಶನವಾಗಿದೆ. ಶ್ರೀರಂಗಪಟ್ಟಣದ ಬೆಳಗೊಳದ ಸುತ್ತಮುತ್ತಲ ಪ್ರದೇಶಕ್ಕೆ ಪ್ರಾಂತ್ಯಾಧಿಕಾರಿಯಾಗಿದ್ದಾಗ ಅವನು ವಿಷ್ಣುವರ್ಧನನೆಂದು ಪ್ರಖ್ಯಾತಿ ಪಡೆದಿದ್ದನು. ಅವನು ಮತಾಂತರದ ವಿಷಯಕ್ಕೆ ಸಂಬಂಧಿಸಿದ ವಿಭಿನ್ನ ಹೇಳಿಕೆಗಳಿಗೆ ಮುಖ್ಯ ಕಾರಣವೆಂದರೆ ಶ್ರೀ ರಾಮಾನುಜರನ್ನು ಗೌರವಿಸಿ, ಅವನು ವೈಷ್ಣವ ಮತವನ್ನು ಸ್ವೀಕರಿಸಿದುದು ಅದರ ಅನುಯಾಯಿಗಳು ತರುವಾಯ ಈ ಕಟ್ಟುಕಥೆಗಳನ್ನು ಹೆಣೆದಿದ್ದಾರೆ. ಎಲ್ಲಕ್ಕೂ ಮಿಗಿಲಾಗಿ ಮತಾಂತರಕ್ಕೆ ಸಂಬಂಧಿಸಿದಂತೆ ಸಮಕಾಲೀನ ದಾಖಲೆಗಳಲ್ಲಿ ಯಾವ ವಿಧವಾದ ಗೊಂದಲವು ಕಾಣಬರುವುದಿಲ್ಲ.

ಮತ್ತೆ ಕೆಲವು ವಿಪರ್ಯಾಸ ಹೇಳಿಕೆಗಳೆಂದರೆ ವಿಷ್ಣುವರ್ಧನನು ವೈಷ್ಣವ ಮತಕ್ಕೆ ಮತಾಂತರ ಹೊಂದಿದ ಮೇಲೆ ಜೈನ ಬಸದಿಗಳನ್ನು ನಾಶಗೊಳಿಸಿ ಆ ಸಾಮಗ್ರಿಗಳಿಂದಲೇ ವೈಷ್ಣವ ದೇವಾಲಯಗಳನ್ನು ಮಾಡಿದನೆಂಬ ಹೇಳಿಕೆ ನಿಜಕ್ಕೂ ಹಾಸ್ಯಾಸ್ಪದವಾದುದು. ಇದಕ್ಕೆ ಯಾವ ಶಾಸನಾಧಾರಗಳು ಇಲ್ಲ. ತನ್ನ ಅರಮನೆಗೆ ಸ್ವಲ್ಪ ದೂರದಲ್ಲೇ ಜೈನ ಬಸದಿಗಳನ್ನು ನಿರ್ಮಿಸಿದುದು ಮತ್ತು ಜಿನಾಲಯಗಳ ಪ್ರಸಾದವನ್ನು ಭಕ್ತಿಯಿಂದ ಸ್ವೀಕರಿಸುತ್ತಿದ್ದುದು ಅವನು ಜೈನ ಮತವನ್ನು ಕಡೆಗಣಿಸಲಿಲ್ಲ ಎಂಬುವುದಕ್ಕೆ ನಿದರ್ಶನಗಳಾಗಿವೆ. ಅಲ್ಲದೆ ಅವನ ಪಟ್ಟದ ರಾಣಿ ಶಾಂತಲಾದೇವಿ, ದಂಡನಾಯಕರಾದ ಗಂಗರಾಜ, ಹುಲ್ಲ, ಪುಣಿಸ, ಬಾಹುಬಲಿ, ಮೊದಲಾದವರು ಜಿನೋಪಾಸಕರಾಗಿದ್ದರು. ಜೈನ ಮತೀಯ ದಂಡನಾಯಕನೊಬ್ಬನ ಹಸುಗೂಸನ್ನು ತಾನೇ ಸಾಕಿ ಜೈನ ವಿಧಿಯಂತೆ ಉಪನಯನ, ಇತರ ಸಂಸ್ಕಾರಗಳನ್ನು ನೆರವೇರಿಸಿ ಮುಂದೆ ದಂಡನಾಯಕನನ್ನಾಗಿ ವಿಷ್ಣುವರ್ಧನನು ನೇಮಿಸಿಕೊಂಡಿದ್ದನು. ಅನೇಕ ಜೈನ ಕವಿಗಳೂ, ವಿದ್ವಾಂಸರೂ, ವಿಷ್ಣುವರ್ಧನನ ಆಸ್ಥಾನವನ್ನು ಅಲಂಕರಿಸಿದ್ದರು. ಆದುದರಿಂದ ವಿಷ್ಣುವರ್ಧನನು ಮತೀಯ ಸಂಕುಚಿತ ಭಾವನೆಯನ್ನು ಹೊಂದಿರಲಿಲ್ಲ ಎಂಬುದು ನಿಸ್ಸಂದೇಹ.

ವಿಷ್ಣುವರ್ಧನನು ಕಲೆ ಮತ್ತು ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಿದ್ದನು. ಬೇಲೂರಿನ ಚೆನ್ನಕೇಶವ, ದೊಡ್ಡ ಗದ್ದವಳ್ಳಿಯ ಮಹಾಲಕ್ಷ್ಮಿ ದೇವಾಲಯ, ತೊಣ್ಣೂರಿನ ನಾರಾಯಣ, ಕನೌಜಿನ ಕೀರ್ತಿ ನಾರಾಯಣ, ದೋರಸಮುದ್ರ ಹೊಯ್ಸಳೇಶ್ವರ ಮೊದಲಾದವು ಇವನ ಕಾಲದಲ್ಲಿ ನಿರ್ಮಾಣವಾದವು. ಇವನು ಸಮರ್ಥ ಯೋಧ ಮಾತ್ರವಲ್ಲದೆ ದಕ್ಷ ಆಡಳಿತಗಾರನು ಆಗಿದ್ದನು. 'ಪಂಚ ಪ್ರಧಾನ' ರೆಂದು ಅವನ ಮಂತ್ರಿ ಮಂಡಲಕ್ಕೆ ಹೆಸರಾಗಿತ್ತು. ಕೇಂದ್ರೀಯ ಪ್ರಾಂತೀಯ ಮತ್ತು ಸ್ಥಳೀಯ ಆಡಳಿತವನ್ನು ಸುವ್ಯವಸ್ಥಿತವಾಗಿ ಏರ್ಪಡಿಸಿದವು. ಯುವರಾಜ ಮತ್ತು ಪಟ್ಟದ ರಾಣಿಯರು ಆಡಳಿತದಲ್ಲಿ ಭಾಗವಹಿಸುವ ಏರ್ಪಾಡು ಮಾಡಿದನು. ವೀರರಿಗೆ ದಾನದತ್ತಿಗಳನ್ನು ನೀಡುವ ಪದ್ಧತಿಯನ್ನು ಇಟ್ಟುಕೊಂಡು ಆ ಮೂಲಕ ಅವರಲ್ಲಿ ರಣೋತ್ಸಾಹವನ್ನು ಹೆಚ್ಚಿಸುತ್ತಿದ್ದನು. ಹಾಗೆಯೇ ಸಾಮಾಜಿಕ ನೆಮ್ಮದಿಗಾಗಿ ವ್ಯಾಪಾರ ವ್ಯವಸಾಯವನ್ನು ಪ್ರೋತ್ಸಾಹಿಸಿದನು. ಕೆರೆಕಟ್ಟೆಗಳು ನಿರ್ಮಾಣವಾದವು. ಜ್ಞಾನಾಭಿವೃದ್ಧಿಗಾಗಿ ಮತ್ತು ಬ್ರಾಹ್ಮಣರ ಸಂರಕ್ಷಣೆಗಾಗಿ ಹಲವಾರು ಅಗ್ರಹಾರಗಳನ್ನು ನಿರ್ಮಿಸಿದನು. ನಾಗವರ್ಮ, ಕಂತಿ ಮೊದಲಾದ ವಿದ್ವನ್ಮಣಿಗಳು ಇವನ ಆಸ್ಥಾನದಲ್ಲಿದ್ದರು. ಸ್ವಾತಂತ್ರ್ಯ ಪ್ರಿಯತೆ, ರಾಜ್ಯ ವಿಸ್ತರಣೆ, ದಕ್ಷ ಆಡಳಿತ, ಅನುಕರಣೀಯ ಧಾರ್ಮಿಕ ನೀತಿ, ಕಲೆ ಮತ್ತು ಸಾಹಿತ್ಯಕ್ಕೆ ನೀಡಿದ ಪ್ರೋತ್ಸಾಹ ಮೊದಲಾದ ಸಾಧನೆಗಳಿಂದ ವಿಷ್ಣುವರ್ಧನನು ಹೊಯ್ಸಳ ಸಂತತಿಯ ಅಷ್ಟೇಕೆ ಕರ್ನಾಟಕದ ಅತಿಮುಖ್ಯ ಕೀರ್ತಿ ಶ್ರೇಷ್ಠ ಪ್ರಭುಗಳಲ್ಲಿ ಒಬ್ಬನಾಗಿದ್ದಾನೆ.

## 24.5 ಸಾರಾಂಶ

ಈ ಘಟಕದಲ್ಲಿ ಹೊಯ್ಸಳರ ರಾಜಕೀಯ ಇತಿಹಾಸವನ್ನು ಆರಂಭದಿಂದ ಅಂದರೆ ಸಳನಿಂದ ವಿಷ್ಣುವರ್ಧನನವರೆಗೆ ಪರಿಚಯಿಸಿಕೊಡಲು ಯತ್ನಿಸಲಾಗಿದೆ. ಹೊಯ್ಸಳರ ರಾಜಕೀಯ ಹಿನ್ನೆಲೆ ಮಲೆನಾಡಿನ ಗುಡ್ಡಗಾಡಿನ ಪ್ರದೇಶದಿಂದ ಬುಡಕಟ್ಟು ಹಂತದಿಂದ ಆರಂಭಗೊಂಡು ಹಾಸನದ ಬಯಲು ನಾಡಿನಲ್ಲಿ ಪ್ರಬಲ ರಾಜ್ಯವಾಗಿ ರೂಪುಗೊಂಡ ಬಗೆಯನ್ನು ನಿಮ್ಮ ಗಮನಕ್ಕೆ ತರಲಾಗಿದೆ. ಸಳನ ಮತ್ತು ಅವರ ಮೂಲದ ಬಗ್ಗೆ ಲಭ್ಯವಿರುವ ಮಾಹಿತಿಗಳನ್ನು ವಿದ್ವಾಂಸರು ಚರ್ಚಿಸಿ ಅವನು ಚಾರಿತ್ರಿಕ ವ್ಯಕ್ತಿಯಾಗಿದ್ದು ಹೊಯ್ಸಳ ವಂಶದ ಮೂಲಪುರುಷ ಮತ್ತು ಹೊಯ್ಸಳ ರಾಜ್ಯದ ಸಂಸ್ಥಾಪಕನೆಂದು ಪರಿಗಣಿಸಿರುವ ವಿಷಯವನ್ನು ನಿಮ್ಮ ಅರಿವಿಗೆ ತರಲಾಗಿದೆ. ಸಳನ ತರುವಾಯ ಬಂದ ಹೊಯ್ಸಳ ಅರಸರು ಪ್ರಮುಖವಾಗಿ, ೧ನೆ ವಿನಯಾದಿತ್ಯ, ನೃಪಕಾಮ, ಇಮ್ಮಡಿ ವಿನಯಾದಿತ್ಯ, ಒಂದನೇ ಬಲ್ಲಾಳರು ಕಲ್ಯಾಣಿ ಚಾಳುಕ್ಯರ ಸಾರ್ವಭೌಮತ್ವವನ್ನು ಒಪ್ಪಿಕೊಂಡು ತಮ್ಮ ಸುತ್ತಮುತ್ತ ಇದ್ದ ತಮ್ಮ ಸಮಕಾಲೀನ ಸಾಮಂತರೊಡನೆ ಹೋರಾಡಿ ಹೊಯ್ಸಳ ರಾಜ್ಯವನ್ನು ವಿಸ್ತರಿಸಿ, ಪ್ರಬಲ ರಾಜಕೀಯ ಶಕ್ತಿಯಾಗಿ ರೂಪಿಸುವಲ್ಲಿ ಅವರ ಪಾತ್ರ ಶ್ಲಾಘನೀಯವಾದುದು.

ವಿಷ್ಣುವರ್ಧನನ ಕಾಲದಲ್ಲಿ ಹೊಯ್ಸಳ ರಾಜ್ಯ ರಾಜಕೀಯವಾಗಿ ಸ್ವತಂತ್ರ ಪ್ರಭುತ್ವವಾಗಿ ರೂಪುಗೊಳ್ಳುವಲ್ಲಿ ಯಶಸ್ವಿಯಾಯಿತು. ಇವನ ರಾಜಕೀಯ ಸಾಧನೆ ಮತ್ತು ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಾಧನೆಗಳನ್ನು ವಿವರವಾಗಿ ಚಿತ್ರಿಸಿ ನಿಮ್ಮ ಗಮನ ಸೆಳೆಯಲಾಗಿದೆ.

## 24.6 ಸ್ವಪರೀಕ್ಷೆ ಪ್ರಶ್ನೆಗಳು

1. ಹೊಯ್ಸಳರ ಮೂಲಕ್ಕೆ ಸಂಬಂಧಿಸಿದ ಜಿಜ್ಞಾಸೆಗಳನ್ನು ಕುರಿತು ಚರ್ಚಿಸಿ. ಸಳನನ್ನು ಪೌರಾಣಿಕ ವ್ಯಕ್ತಿಯಾಗಿ ಪರಿಗಣಿಸಿವಿರೋ ಅಥವಾ ಐತಿಹಾಸಿಕ ವ್ಯಕ್ತಿಯಾಗಿ ಪರಗಣಿಸುವಿರೊ ? ಸ್ಪಷ್ಟೀಕರಿಸಿ.
2. ಹೊಯ್ಸಳ ರಾಜ್ಯದ ವಿಸ್ತರಣೆಯಲ್ಲಿ ಮತ್ತು ಸಂರಕ್ಷಣೆಯಲ್ಲಿ ೧ನೇ ಬಲ್ಲಾಳನವರೆಗಿನ ಆರಂಭದ ಅರಸರ ಸಾಧನೆಯನ್ನು ವಿವರಿಸಿ.
3. ಹೊಯ್ಸಳರ ಇತಿಹಾಸದಲ್ಲಿ ವಿಷ್ಣುವರ್ಧನನ ಸ್ಥಾನವನ್ನು ನಿರ್ಧರಿಸಿ.
4. ವಿಷ್ಣುವರ್ಧನನ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ವಿವರಿಸಿ.

## 24.7 ಹೆಚ್ಚಿನ ಅಭ್ಯಾಸಕ್ಕಾಗಿ ಗ್ರಂಥಗಳು


1. ಡಾ. ಸುರೇಂದ್ರರಾವ್ (ಸಂ) : ಕರ್ನಾಟಕ ಇತಿಹಾಸ (ಸಂ 2), ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.
2. ಆರ್.ಆರ್. ದಿವಾಕರ್ (ಸಂ) : ಕರ್ನಾಟಕ ಪರಂಪರೆ (ಸಂ 1 & 2)
3. ಬಿ. ಷೇಕ್ಅಲಿ (ಸಂ) : **The Hoysala dynasty**
4. C. Hayavardana Rao : **The Mysore Gazetter,** Vol. II, Part- 2
5. W. Coelho : **The Hosala Vamser**
6. K.A. Nilakanta Sastry : **A History of South India**
7. ಶ್ರೀ. ಜಿ. ಆರ್. ರಂಗಸ್ವಾಮಿ : **ಕರ್ನಾಟಕದ ಸಂಕ್ಷಿಪ್ತ ಇತಿಹಾಸ**
8. Dr. P.B. Desai : **A History of Karnataka**

## ಟಿಪ್ಪಣಿಗಳು

# ಟಿಪ್ಪಣಿಗಳು

# ಘಟಕ - 25

## ಹೊಯ್ಸಳರು : ವಿಷ್ಣುವರ್ಧನನ ತರುವಾಯದ ರಾಜರು

### ವಿಷಯಕ್ರಮ


25.0 ಘಟಕದ ಉದ್ದೇಶ

25.1 ಪೀಠಿಕೆ

25.2 ಒಂದನೇ ನರಸಿಂಹ (ಕ್ರಿ.ಶ. 1143-1172)

25.3 ಇಮ್ಮಡಿ ಬಲ್ಲಾಳ

25.3.1 ರಾಜ್ಯ ವಿಸ್ತರಣೆ

25.3.2 ಸಾಂಸ್ಕೃತಿಕ ಸಾಧನೆ

25.4 ಎರಡನೆ ವೀರ ನರಸಿಂಹ (ಮ 1220-1235)

25.5 ವೀರ ಸೋಮೇಶ್ವರ ಮತ್ತು ಹೊಯ್ಸಳ ಸಾಮ್ರಾಜ್ಯದ ವಿಭಜನೆ

25.6 ಮೂರನೇ ಬಲ್ಲಾಳ ಮತ್ತು ರಾಜಕೀಯ ಸಮಸ್ಯೆಗಳು (ಕ್ರಿ.ಶ.1292-1343)

25.6.1 ದೇವಗಿರಿ ಸೇವುಣರೊಡನೆ ಸೆಣಸಾಟ

25.6.2 ತಮಿಳುನಾಡಿನ ರಾಜಕೀಯ ಸಮಸ್ಯೆಗಳು ಮತ್ತು ದೆಹಲಿ ಸುಲ್ತಾನರೊಡನೆ ಸಂಘರ್ಷ - ಮಧುರ ಸುಲ್ತಾನನಿಂದ ಇವನ ಅಂತ್ಯ

25.7 ಸಾರಾಂಶ

25.8 ಸ್ವಪರೀಕ್ಷೆ ಪ್ರಶ್ನೆಗಳು

25.9 ಹೆಚ್ಚಿನ ಅಭ್ಯಾಸಕ್ಕಾಗಿ ಗ್ರಂಥಗಳು

## 25.0 ಘಟಕದ ಉದ್ದೇಶ

ಈ ಘಟಕದ ಉದ್ದೇಶ ಹೊಯ್ಸಳರ ಇತಿಹಾಸದ ಎರಡನೆ ಹಂತದ ಅಥವಾ ವಿಷ್ಣುವರ್ಧನನ ತರುವಾಯ ಬರುವ ರಾಜಕೀಯ ಇತಿಹಾಸವನ್ನು ಪರಿಚಯಿಸುಕೊಡುವುದಾಗಿದೆ. ಈ ಘಟಕವನ್ನು ಅಭ್ಯಾಸಿಸಿದ ಮೇಲೆ ಕೆಳಗಿನ ವಿಷಯಗಳನ್ನು ಕಲಿಯುವಿರಿ.

* ಸಮರ್ಥ ವಿಷ್ಣುವರ್ಧನನ ತರುವಾಯ ಅಧಿಕಾರಕ್ಕೆ ಬಂದ ಅವನ ಮಗ ಒಂದನೇ ನರಸಿಂಹ ಅದಕ್ಷ, ಅಸಮರ್ಥನಾಗಿದ್ದು, ಅವನ ಪರವಾಗಿ ಮಂತ್ರಿ, ದಂಡನಾಯಕರು ಹೊಯ್ಸಳ ರಾಜಕೀಯ ಪರಂಪರೆಯನ್ನು ರಕ್ಷಿಸಿ ಮುಂದುವರಿಸಿದರು.
* ಇವನ ತರುವಾಯ ಅಧಿಕಾರಕ್ಕೆ ಬಂದ ಇಮ್ಮಡಿ ಬಲ್ಲಾಳ ಎರಡನೇ ವೀರ ನರಸಿಂಹ ವೀರಸೋಮೇಶ್ವರ ಮತ್ತು ಮುಮ್ಮಡಿ ಬಲ್ಲಾಳರು ಹೊಯ್ಸಳ ರಾಜ್ಯದ ಗೌರವ ಪ್ರತಿಷ್ಠೆ ಕಾಪಾಡಲು ಶ್ರಮಿಸಿದರು. ಎರಡನೇ ವೀರ ಬಲ್ಲಾಳನ ಕಾಲದಲ್ಲಿ ಹೊಯ್ಸಳ ರಾಜ್ಯದ ಸರ್ವ ಸ್ವತಂತ್ರ ಸಾರ್ವಭೌಮ ಸ್ಥಾನವನ್ನು ಪಡೆಯಿತು.
* ಮೂರನೇ ಬಲ್ಲಾಳನ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯವು ಅನೇಕ ರಾಜಕೀಯ ಸವಾಲನ್ನು ಎದುರಿಸಬೇಕಾಯಿತು. ಸೇವುಣರು ಮತ್ತು ತಮಿಳುನಾಡಿನ ರಾಜಕೀಯ ಸಮಸ್ಯೆಗಳ ಜೊತೆಗೆ ಉತ್ತರದ ದೆಹಲಿ ಸುಲ್ತಾನರ ಆಕ್ರಮಣವನ್ನು ಎದುರಿಸಬೇಕಾಯಿತು. ಕೊನೆಗೆ ದಕ್ಷಿಣದಲ್ಲಿ ಸ್ಥಾಪಿಸಲ್ಪಟ್ಟ ಮದುರ ಸುಲ್ತಾನರ ಕುತಂತ್ರಕ್ಕೆ ಬಲಿಯಾಗಿ ಹುತಾತ್ಮನಾದನು. ಇವನ ರಾಜಕೀಯ ಧ್ಯೇಯ ಆದರ್ಶಗಳನ್ನು ಇವನ ಕಾಲದಲ್ಲೆ ಸ್ಥಾಪಿಸಲ್ಪಟ್ಟ ವಿಜಯನಗರ ಸಾಮ್ರಾಜ್ಯ ಮುಂದುವರಿಸಿತು.

## 25.1 ಪೀಠಿಕೆ

ವಿಷ್ಣುವರ್ಧನನ ತರುವಾಯ ಪಟ್ಟಕ್ಕೆ ಬಂದ ಸಮರ್ಥ ಹೊಯ್ಸಳ ಅರಸರಲ್ಲಿ ಎರಡನೆ ಬಲ್ಲಾಳ ಅತ್ಯಂತ ಸಮರ್ಥ ದೊರೆ. ಇವನ ಕಾಲದಲ್ಲಿ ಹೊಯ್ಸಳರ ಸಾರ್ವಭೌಮ ಅಧಿಕಾರ ಸ್ಥಾಪನೆಯಾಯಿತು. ಇವನ ತರುವಾಯ ಬಂದ ಎರಡನೇ ವೀರನರಸಿಂಹ, ವೀರಸೋಮೇಶ್ವರ, ಮೂರನೇ ಬಲ್ಲಾಳನು ಸಮರ್ಥವಾಗಿ ಹೊಯ್ಸಳ ರಾಜ್ಯದ ವಿಸ್ತರಣೆ ಮತ್ತು ಸಂರಕ್ಷಣೆ ಕಾರ್ಯದಲ್ಲಿ ಯಶಸ್ವಿಯಾದರು. ಆದರೆ ಮೂರನೆ ಮಲ್ಲಾಳನ ಕಾಲದಲ್ಲಿ ಹೊಸ ರಾಜಕೀಯ ಮತ್ತು ಮಿಲಿಟರಿ ಸವಾಲುಗಳನ್ನು ಎದುರಿಸಬೇಕಾಯಿತು. ಉತ್ತರದ ದೆಹಲಿ ಸುಲ್ತಾನರ ಮಿಲಿಟರಿ ಕಾರ್ಯಾಚರಣೆ ಮತ್ತು ದಕ್ಷಿಣದ ಮಧುರ ಸುಲ್ತಾನರ ಕುತಂತ್ರಕ್ಕೆ ಬಲಿಯಾದನು. ಆದರೆ ಅವನ ಧ್ಯೇಯ ಆದರ್ಶಗಳನ್ನು ವಿಜಯನಗರ ಅನೇಕ ಶತಮಾನಗಳ ಕಾಲ ಮುಂದುವರಿಸಿತು.

## 25.2 ಒಂದನೇ ನರಸಿಂಹ (1143-1172)

ವಿಷ್ಣುವರ್ಧನನು 1142 ರಲ್ಲಿ ಸ್ವರ್ಗಸ್ಥನಾದ ಮೇಲೆ ಅವನ ಮಂತ್ರಿಗಳು ಇನ್ನೂ ಬಾಲಕನಾಗಿದ್ದ ವಿಜಯವೀರ ನರಸಿಂಹನಿಗೆ ಪಟ್ಟ ಕಟ್ಟಿ ಪ್ರಾಪ್ತ ವಯಸ್ಕನಾಗುವವರೆಗೂ ನಿಷ್ಠೆಯಿಂದ ಆಡಳಿತ ಮುಂದುವರಿಸಿಕೊಂಡು ಹೋದರು. ವಿಷ್ಣುವರ್ಧನನಿಂದ ಪರಾಜಿತರಾಗಿದ್ದ ಹೊಯ್ಸಳರ ಶತ್ರುಗಳು ನರಸಿಂಹನ ಕಾಲದಲ್ಲಿ ಚುರುಕಾದರು. ಕಲ್ಯಾಣ ಚಾಳುಕ್ಯರು ಹೊಯ್ಸಳರನ್ನು ಸೋಲಿಸಿ ನರಸಿಂಹನು ಪುನಃ ತಮ್ಮ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳುವಂತೆ ಮಾಡಿದರು. ತುಂಗಭದ್ರ ನದಿಯ ಪ್ರದೇಶವು ಕೈಬಿಟ್ಟು ಹೋದವು. ನರಸಿಂಹನು ಪ್ರಾಪ್ತ ವಯಸ್ಕನಾದ ಮೇಲೆ ಅಧಿಕಾರವನ್ನು ವಹಿಸಿಕೊಂಡನು. ಸುಖಲೋಲುಪ್ತನೂ, ವಿಲಾಸಪ್ರಿಯನೂ ಆದ ನರಸಿಂಹನು ತಂದೆಯಂತೆ ದಕ್ಷನಾಗಿರಲಿಲ್ಲ. ರಾಜ್ಯ ವಿಸ್ತರಣೆಗೆ ಆಸಕ್ತಿ ತೋರಿಸಲಿಲ್ಲ. ಕ್ರಿ.ಶ. 1156 ರಲ್ಲಿ ಕಲ್ಯಾಣದಲ್ಲಿ 'ರಕ್ತ ರಹಿತ ವಿಪ್ಲವ' ನಡೆಯಿತು. ಕಲ್ಯಾಣಿ ಚಾಳುಕ್ಯರ ಬಲ ಕುಗ್ಗಿತು. ಕಳಚೂರಿ ಬಿಜ್ಜಳನು ಚಾಳುಕ್ಯ ಸಿಂಹಾಸನವನ್ನು ಆಕ್ರಮಿಸಿ ಕಳಚೂರಿ ಸಂತತಿಯನ್ನು ಸ್ಥಾಪಿಸಿದನು. ಕಳಚೂರಿಯರ ಪ್ರಾಬಲ್ಯವನ್ನು ಹತ್ತಿಕ್ಕಿ ಹೊಯ್ಸಳ ಉನ್ನತಿಯನ್ನು ಏರಿಸುವ ಅವಕಾಶ ದೊರಕಿದರು ಅದನ್ನು ಸದುಪಯೋಗ ಪಡಿಸಿಕೊಳ್ಳದೆ ಅಸಡ್ಡೆ ತೋರಿಸಿ ವ್ಯರ್ಥವಾಗಿ ಕಾಲ ಕಳೆದನು. ಉಚ್ಚಂಗಿಯ ಪಾಂಡ್ಯರು ಚೆಂಗಾಳ್ವರು ತಾವು ಕಳೆದುಕೊಂಡಿದ್ದ ಪ್ರದೇಶಗಳನ್ನು ವಾಪಸ್ ಪಡೆದುಕೊಂಡರು. ಹಾಗೆಯೇ ತುಂಗ ಭದ್ರ ಪ್ರದೇಶವು ಬಿಜ್ಜಳನ ವಶವಾದವು. ವಿಷಯಲಂಪಟನಾದ ನರಸಿಂಹನ ಆರೋಗ್ಯ ಕ್ರಮೇಣ ಕೆಡುತ್ತಾ ಬಂತು. ಆಡಳಿತದಲ್ಲಿ ಅನಾಸಕ್ತನಾಗಿ, ಪಟ್ಟಣದ ರಾಣಿ ಏಚಲದೇವಿ ಮತ್ತು ಯುವರಾಜ ಕುಮಾರು ಬಲ್ಲಾಳನನ್ನು ಆಡಳಿತದಲ್ಲಿ ನೇಮಿಸಿಕೊಂಡು ಅಧಿಕಾರದಲ್ಲಿ ಮುಂದುವರಿದು ಕ್ರಿ.ಶ. 1173 ರ ಆದಿ ಭಾಗದಲ್ಲಿ ಮರಣ ಹೊಂದಿದನು.

## 25.3 ಇಮ್ಮಡಿ ಬಲ್ಲಾಳ (ಕ್ರಿ.ಶ. 1173-1220)

ಇಮ್ಮಡಿ ಬಲ್ಲಾಳನು ಚಿಕ್ಕವಯಸ್ಸಿನಲ್ಲಿಯೇ ತನ್ನ ತಾತನಾದ ವಿಷ್ಣುವರ್ಧನನ ರಾಜಕೀಯ ಧ್ಯೇಯಗಳನ್ನು ಅರ್ಥಮಾಡಿಕೊಂಡು ಅವನ ಸಾಮ್ರಾಜ್ಯ ಸ್ಥಾಪನೆಯ ಗುರಿಯನ್ನು ಸಾಧಿಸಲು ಸಂಕಲ್ಪ ಮಾಡಿದನು. ಇವನ ಆಳ್ವಿಕೆಯ ಕಾಲವು ಬಹುಮುಖ್ಯ ಘಟನಾವಳಿಗಳಿಂದ ಕೂಡಿವೆ. ಇವನ ಆಳ್ವಿಕೆ ಕಾಲದಲ್ಲಿ ಕಲ್ಯಾಣಿ ಚಾಳುಕ್ಯ ಮತ್ತು ಕಳಚೂರಿ ಮನೆತನಗಳು ಇತಿಹಾಸದಿಂದ ನಿರ್ಗಮಿಸಿದವು. ಸೇವುಣರ ವಿಸ್ತರಣಾ ನೀತಿಯನ್ನು ಕುಂಟಿತಗೊಳಿಸಿದನು. ಪಾಂಡ್ಯರ ಆಕ್ರಮಣದಿಂದ ಚೋಳರಿಗೆ ಮತ್ತೆ ಸಿಂಹಾಸನ ದೊರಕಿಸಿಕೊಟ್ಟು 'ಚೋಳರಾಜ್ಯ ಪ್ರತಿಷ್ಠಾಪನಾ ಚಾರ್ಯ' ಎಂಬ ಬಿರುದು ಧರಿಸಿದನು. ಇವನ ಕಾಲದಲ್ಲಿ ಹೊಯ್ಸಳ ರಾಜ್ಯವು ವಿಶಾಲ ಸಾಮ್ರಾಜ್ಯವಾಗಿ ಮಾರ್ಪಾಡಾಯಿತು.

### *25.3.1 ರಾಜ್ಯ ವಿಸ್ತರಣೆ*

ಅಧಿಕಾರವಹಿಸಿಕೊಂಡ ಕೂಡಲೇ ರಾಜ್ಯದಲ್ಲಿ ತಲೆದೋರಿದ್ದ ಅರಾಜಕತೆಯನ್ನು ಹೋಗಲಾಡಿಸಿ ರಾಜ್ಯ ವಿಸ್ತರಣಾ ಕಾರ್ಯದಲ್ಲಿ ತೊಡಗಿದನು. ಸಮರ್ಥರಾದವರನ್ನು ಮಂತ್ರಿ ಮತ್ತು ದಂಡನಾಯಕರನ್ನಾಗಿ ನೇಮಿಸಿಕೊಂಡು ತನ್ನ ಗುರಿಯನ್ನು ಸಾಧಿಸಲು ಕಾರ್ಯೋನ್ಮುಕನಾದನು. ವಿಷ್ಣುವರ್ಧನನ ಕಾಲದಲ್ಲಿ ಅನೇಕ ಸಣ್ಣ ಪುಟ್ಟ ರಾಜರು ನರಸಿಂಹನ ಕಾಲದಲ್ಲಿ ಸ್ವತಂತ್ರರಾದರು. ಕೊಡಗಿನ ಚಂಗಾಳ್ವರ ಮೇಲೆ ಯುದ್ಧ ಅನಿವಾರ್ಯವಾಗಿ ತನ್ನ ದಂಡನಾಯಕ ಬೆಟ್ಟರಸನು ಕ್ರಿ.ಶ. 1173 ರಲ್ಲಿ ಚಂಗಾಳ್ವರನ್ನು ಸೋಲಿಸಿದನು. ಆದರೆ ಮತ್ತೆ ಕೆಲವು ದಿನಗಳಲ್ಲಿ ಚೆಂಗಾಳ್ವರು ಬೆಟ್ಟರಸನ ಸೈನ್ಯವನ್ನು ಮುತ್ತಿದರು. ತಕ್ಷಣವೇ ವೀರ ಬಲ್ಲಾಳನು ಬೆಟ್ಟರಸರ ಸಹಾಯಕ್ಕೆ ಹೆಚ್ಚು ಸೈನ್ಯ ಕಳುಹಿಸಿದನು. ಚೆಂಗಾಳ್ವರು ಬಲ್ಲಾಳನ ಪರಮಾಧಿಕಾರವನ್ನು ಒಪ್ಪಿಕೊಳ್ಳಬೇಕಾಯಿತು. ಚೆಂಗಾಳ್ವ ರಾಜಕುಮಾರಿಯನ್ನು ಬಲ್ಲಾಳನು ವರಿಸಿದನೆಂದು ತಿಳಿದು ಬರುತ್ತದೆ.

ಅನಂತರ ಅಭೇದ್ಯ ಕೋಟೆಯಾಗಿದ್ದ ಉಚ್ಚಂಗಿಗೆ ಲಗ್ಗೆ ಹಾಕಲಾಯಿತು. ಪಾಂಡ್ಯ ರಾಜ ಕಾಮದೇವನು ಸೋತು ಶರಣನಾದನು. ಹೇರಳ ಕಪ್ಪ ಕಾಣಿಕೆಯನ್ನು ಪಡೆದು 'ಪಾಂಡ್ಯ ರಾಜ ಪ್ರತಿಷ್ಠಾಪನ ಚಾರ್ಯ " ಎಂಬ ಬಿರುದನ್ನು ಧರಿಸಿದನು. ಅನಂತರ ಶಾಂತಾರರನ್ನು, ಹಾನಂಗಲ್ಲಿನ ಕದಂಬರನ್ನು ತುಳುರಾಜರನ್ನು ಸೋಲಿಸಿದನು. ಆ ವೇಳೆಗೆ ಚಾಳುಕ್ಯರ ಸಾಮಂತ ಪಕ್ಷವನ್ನು ವಹಿಸಿದ್ದ ಉಚ್ಚಂಗಿಯ ಕಾಮದೇವನನ್ನು ಪುನಃ ಸದೆಬಡಿಯಬೇಕಾಯಿತು. ಈ ವಿಜಯ ಸ್ಮರಣೆಗಾಗಿ 'ಪಾಂಡ್ಯರಾಜ ನಿರ್ಮೂಲನ' ಎಂಬ ಬಿರುದನ್ನು ಧರಿಸಿದನು.

ತನ್ನ ಮಾಂಡಲೀಕನನ್ನು ಸೋಲಿಸಿದ್ದರಿಂದ ಕುಪಿತನಾದ ಕಳಚೂರಿ ಚಕ್ರವರ್ತಿ ಸಂಕಮನು ಕ್ರಿ.ಶ. 1180 ರಲ್ಲಿ ಬಲ್ಲಾಳನ ವಿರುದ್ಧ ಸೈನ್ಯ ಕಳುಹಿಸಿದನು. ವೀರ ಬಲ್ಲಾಳನು ಕಳಚೂರಿ ಸೇನೆಗಳನ್ನು ಸೋಲಿಸಿ ಉದ್ರಿಕೋಟೆಯನ್ನು ಆಕ್ರಮಿಸಿದನು. ಸಂಕಮನು ಬಲ್ಲಾಳನೊಡನೆ ಸಂಧಾನ ಮಾಡಿಕೊಳ್ಳಬೇಕಾಯಿತು. ಅದೇ ಕಾಲದಲ್ಲಿ ಚಾಳುಕ್ಯರ 30 ನೇ ಸೋಮೇಶ್ವರನು ಕೆಲವು ಮಾಂಡಲಿಕರ ಸಹಾಯದಿಂದ ಕಳಚೂರಿಗಳನ್ನು ಕ್ರಿ.ಶ. 1184 ರಲ್ಲಿ ಸೋಲಿಸಿ ಪುನಃ ಅಧಿಕಾರ ಸ್ಥಾಪಿಸಿದನು. ಆದರೂ ಅವನತಿ ಹೊಂದುತ್ತಿದ್ದ ಚಾಳುಕ್ಯ ಸಾಮ್ರಾಜ್ಯವನ್ನು ತಡೆಹಿಡಿಯಲು ಶಕ್ತನಾಗಿರಲಿಲ್ಲ. ಸೋಮೇಶ್ವರನು ತನಗೆದುರಾಗಿದ್ದ ಶಕ್ತಿಗಳನ್ನು ಹತ್ತಿಕ್ಕುವಷ್ಟು ದಕ್ಷನಾಗಿರಲಿಲ್ಲ. ದಕ್ಷಿಣದಿಂದ ಹೊಯ್ಸಳರು ಚಾಲುಕ್ಯರ ಪರಮಾಧಿಕಾರವನ್ನು ಕಿತ್ತೆಸೆದು ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಲು ಹವಣಿಸುತ್ತಿದ್ದರು. ಕೊನೆಗೆ ವೀರ ಬಲ್ಲಾಳನು 1189 ರಲ್ಲಿ ಕಲ್ಯಾಣಿವರೆಗೂ ದಂಡೆತ್ತಿ ಹೋಗಿ ಸೋಮೇಶ್ವರನ ಪ್ರಧಾನ ದಂಡನಾಯಕನಾದ ಬ್ರಹ್ಮದಂಡೇಶನನ್ನು ಸೋಲಿಸಿದನು. ಸೋಮೇಶ್ವರನ ಬಲಗೈಯಂತಿದ್ದ ಬ್ರಹ್ಮದಂಡೇಶನು ಸೋತ ಮೇಲೆ ದಿಕ್ಕು ತೋಚದ ಚಾಳುಕ್ಯ ದೊರೆ ತಲೆ ಮರೆಸಿಕೊಂಡನು. ಬಲ್ಲಾಳನು ಚಾಳುಕ್ಯ ಸಾಮ್ರಾಜ್ಯದ ದಕ್ಷಿಣ ಭಾಗದ ಮೇಲೆ ತನ್ನ ಆಳ್ವಿಕೆಯನ್ನು ಸ್ಥಾಪಿಸಿದನು.

ಅನಂತರ ಕುಂತಳದ ಒಡೆತನಕ್ಕಾಗಿ ದೇವಗಿರಿಯ ಸೇವುಣರಿಗೂ ಹೊಯ್ಸಳರಿಗೂ ಯುದ್ಧಗಳು ಪ್ರಾರಂಭವಾದವು. ಸೇವುಣರಾಜ 5ನೇ ಭಿಲ್ಲಮನು ವೀರಬಲ್ಲಾಳನಂತೆ ಸಮರ್ಥನೂ, ದಕ್ಷನೂ ಆಗಿದ್ದನು. ಭಿಲ್ಲಮನು 1190 ರಲ್ಲಿ ಕಲ್ಯಾಣಿಯನ್ನು ಆಕ್ರಮಿಸಿ ಧಾರವಾಡ ಜಿಲ್ಲೆಯ ಸೊರಟೂರಿನವರೆಗೂ ಮುಂದುವರಿದನು. ಆ ವೇಳೆಗೆ ಬಲ್ಲಾಳನು ಭಿಲ್ಲಮನನ್ನು ಎದುರಿಸಲು ಸೈನ್ಯದೊಡನೆ ಸಜ್ಜಾದನು. ಧಾರವಾಡ ಜಿಲ್ಲೆಯ ಸೊರಟೂರಿನ ಬಳಿಯಲ್ಲಿ ಭೀಕರ ಕದನ ನಡೆಯಿತು. ವೀರ ಬಲ್ಲಾಳನೇ ಸೈನ್ಯದ ಮುಖಂಡತ್ವವನ್ನು ವಹಿಸಿದ್ದನು. ಭಿಲ್ಲಮನ ಸೈನ್ಯವು ಅಸಂಖ್ಯಾತ ಸೈನಿಕರಿಂದಲೂ ಚದುರಂಗ ಬಲದಿಂದಲೂ ಕೂಡಿತ್ತು. ಬಲ್ಲಾಳನು ಸೇವುಣ ಸೈನ್ಯದ

ಮುಖಂಡ ನಾಯಕ ಜೈತುಂಗಿಯನ್ನು ಕೊಂದನು. ಸೇವುಣ ಬಲವು ಹೊಡೆತಗಳನ್ನು ತಾಳಲಾರದೆ ರಕ್ಷಣೆಗಾಗಿ ಓಡಿತು. ಸೇವುಣ ಭಿಲ್ಲಮನು ಪ್ರಾಣ ರಕ್ಷಣೆಗಾಗಿ ರಣರಂಗದಿಂದ ಸೈನ್ಯದೊಡನೆ ಲೊಕ್ಕಿಗುಂಡಿ ಕೋಟೆ ಸೇರಿದನು. ಹೊಯ್ಸಳ ಸೈನ್ಯವು ಲೊಕ್ಕಿಗುಂಡಿಯ ಕೋಟೆಗೆ ನುಗ್ಗಿತು. ಸೇವುಣ ಸೈನ್ಯ ಪುನಃ ಸೋತಿತು. ಸಮಕಾಲೀನ ಕವಿಯಾದ ರಾಜಾದಿತ್ಯನು ತನ್ನ ವ್ಯವಹಾರ ಗಣಿತದಲ್ಲಿ ಸೇವುಣ ಸೈನ್ಯದಲ್ಲಿ ಅಪಾರ ಸಾವು ನೋವುಗಳುಂಟಾದವು ಎಂದು ಉಲ್ಲೇಖಿಸಿದ್ದಾನೆ. ಸೋತು ಪಲಾಯನ ಮಾಡುತ್ತಿದ್ದಾಗ ಭಿಲ್ಲಮನು ಬಲ್ಲಾಳನಿಂದ ಹತನಾದನೆಂದು ತಿಳಿದು ಬರುತ್ತದೆ. ಕೃಷ್ಣ ನದಿಯವರೆಗೂ ಶತ್ರುವನ್ನು ಬೆನ್ನಟ್ಟಿ ಅಲ್ಲಿಯವರೆಗಿನ ಪ್ರದೇಶಗಳ ಮೇಲೆ ಬಲ್ಲಾಳನು ತನ್ನ ಆಳ್ವಿಕೆಯನ್ನು ಸ್ಥಾಪಿಸಿದನು. ಸೊರಟೂರು ಮತ್ತು ಲೊಕ್ಕಿಗುಂಡಿ ಕದನಗಳ ವಿಜಯಗಳಿಂದ ಹೊಯ್ಸಳ ರಾಜ್ಯವು, ಸಾಮ್ರಾಜ್ಯವಾಗಿ ರೂಪುಗೊಂಡಿತು. ಈ ಯುದ್ಧದ ಸೋಲಿನಿಂದ ಚೇತರಿಸಿಕೊಳ್ಳಲು ಸೇವುಣರಿಗೆ ಎರಡು ದಶಕಗಳೇ ಬೇಕಾಯಿತು. ಈ ವಿಜಯಗಳ ಕುರುಹಾಗಿ ಬಲ್ಲಾಳನು ಕ್ರಿ.ಶ. 1191 ರಿಂದ 'ಬಲ್ಲಾಳ ಶಕೆ' ಎಂಬ ಹೆಸರಿನಿಂದ ಕಾಲಗಣನೆಯನ್ನು ಆಚರಣೆಗೆ ತಂದನು. ಈವಿಜಯದಿಂದ ಹೊಯ್ಸಳರ ಅಧಿಕಾರವು ಬನವಾಸಿ ಹಾನಂಗಲ್, ಬೆಳುಹೊಲ, ಹಲಸಿಗೆ ಮೊದಲಾದ ಪ್ರದೇಶಗಳ ಮೇಲೆ ಸ್ಥಾಪಿತವಾಯಿತು. ಹೊಯ್ಸಳ ಸಂತತಿಯ ಪ್ರಾಬಲ್ಯ ಇಮ್ಮಡಿಯಾಯಿತು.

ಕ್ರಿ.ಶ. 1215 ರ ನಂತರ ಬಲ್ಲಾಳನ ಗಮನ ತಮಿಳುನಾಡಿನತ್ತ ತಿರುಗಿತು. ಬಲ್ಲಾಳನ ಜೀವನದ ಸಂಧ್ಯಾ ಕಾಲದಲ್ಲಿ ಚೋಳರಿಗೂ ಅವರ ಸಾಮಂತರಾದ ಪಾಂಡ್ಯರಿಗೂ ವೈರತ್ವ ಪ್ರಾರಂಭವಾಗಿದ್ದಿತು. ಮೂರನೇ ರಾಜರಾಜನು ಪಾಂಡ್ಯರಿಂದ ಸಿಂಹಾಸನವನ್ನು ಕಳೆದುಕೊಂಡು ಬಲ್ಲಾಳನ ಸಹಾಯವನ್ನು ಯಾಚಿಸಿದನು. ಬಲ್ಲಾಳನು ಯುವರಾಜ ನರಸಿಂಹನ ನೇತೃತ್ವದಲ್ಲಿ ಹೊಯ್ಸಳ ಸೈನ್ಯವನ್ನು ತಮಿಳುನಾಡಿಗೆ ಕಳುಹಿಸಿದನು. ಅದು ಚೋಳರ ಶತ್ರುಗಳನ್ನು ಸೋಲಿಸಿ ರಾಜರಾಜನಿಗೆ ಪುನಃ ಸಿಂಹಾಸನವನ್ನು ದೊರಕಿಸಿಕೊಟ್ಟಿತು. ರಾಜರಾಜನು ಬಲ್ಲಾಳನಿಗೆ ಹೇರಳ ಕಾಣಿಕೆಯನ್ನು ಸಲ್ಲಿಸಿದನು. ಬಲ್ಲಾಳನು 'ಚೋಳರಾಜ್ಯ ಪ್ರತಿಷ್ಠಾಪನ ಚಾರ್ಯ' ಎಂಬ ಬಿರುದನ್ನು ಧರಿಸಿದನು.

### 25.3.2 *ಸಾಂಸ್ಕೃತಿಕ ಸಾಧನೆ*

ಇಮ್ಮಡಿ ವೀರಬಲ್ಲಾಳನ ಕಾಲದಲ್ಲಿ ಸಾಹಿತ್ಯ ಮತ್ತು ಕಲೆಯಲ್ಲಿ ಅಸಾಧಾರಣ ಪ್ರಗತಿಯಾಯಿತು. ಸುಪ್ರಸಿದ್ಧ ಕವಿಗಳಾದ ಜನ್ನ, ರುದ್ರಭಟ್ಟ, ರಾಜಾದಿತ್ಯ, ವಿದ್ಯಾ ಚಕ್ರವರ್ತಿ ಮೊದಲಾದವರು ವೀರ ಬಲ್ಲಾಳನ ಸಮಕಾಲೀನರಾಗಿದ್ದರು. ಜನ್ನನಿಗೆ ಬಲ್ಲಾಳನು 'ಉಭಯ ಕವಿ ಚಕ್ರವರ್ತಿ' ಎಂಬ ಬಿರುದನ್ನು ನೀಡಿ ಗೌರವಿಸಿದನು. ಬಲ್ಲಾಳದ ಮಂತ್ರಿಗಳಾದ ಚಂದ್ರಮೌಳಿ, ಬೂಚಿರಾಜ, ಅಮಿತ್ಯ ಮತ್ತಿತರರು ಪಾಂಡಿತ್ಯ ಮತ್ತು ಸಾಹಿತ್ಯದಲ್ಲಿ ವಿಶೇಷ ಅಭಿರುಚಿ ಹೊಂದಿದ್ದರು. ವಿದ್ಯಾಭ್ಯಾಸದ ಪ್ರಗತಿಗಾಗಿ ಅಗ್ರಹಾರಗಳನ್ನು, ಬ್ರಹ್ಮಪುರಿಗಳನ್ನು ಸ್ಥಾಪಿಸಲಾಯಿತು. ಅವನ ದಂಡನಾಯಕ ಎರೆಯಣ್ಣನು ತಿರಮಕೂಡಲ ನರಸಿಪುರದ ಬಳಿ ಒಂದು ಪಾಠಶಾಲೆಯನ್ನು ಸ್ಥಾಪಿಸಿ ಅಲ್ಲಿ ಕನ್ನಡ, ಸಂಸ್ಕೃತ, ತಮಿಳು ಭಾಷೆಗಳಲ್ಲಿ ಬಾಲಶಿಕ್ಷಣ ವ್ಯವಸ್ಥೆ ಮಾಡಿದನು. ಕೃಷಿಯ ಅಭಿವೃದ್ಧಿಗಾಗಿ ಬಲ್ಲಾಳನು ಕೆರೆ, ಕಟ್ಟೆ, ಕಾಲುವೆಗಳನ್ನು ನಿರ್ಮಿಸಿದನು. ಕೃಷಿ ಭೂಮಿಯನ್ನು ವಿಸ್ತರಿಸಿದನು. ಸ್ಥಳೀಯ ದೊಡ್ಡ ವ್ಯಾಪಾರಿಗಳನ್ನು ಪುರಸಭೆ ಮತ್ತು ನಾಡುಗಳ ಮುಖಂಡರನ್ನಾಗಿ ನೇಮಿಸಿ ಗೌರವಿಸಿದನು. ಹಳೆಬೀಡು, ಬೇಲೂರು, ಆಸಂದಿ, ಬಂಕಾಪುರ, ಬಟ್ಕಲ್, ಶ್ರವಣ ಬೆಳಗೊಳ, ಮೇಲ್ಕೋಟೆ, ತಲಕಾಡು ಮತ್ತು ಇತರ ಸ್ಥಳಗಳು ವ್ಯಾಪಾರ ಕೇಂದ್ರಗಳಾಗಿದ್ದವು. ರೈತರ ಅಭಿವೃದ್ಧಿಗಾಗಿ ಸರ್ಕಾರದ ಮತ್ತು ದೇವಾಲಯದ ಖಜಾನೆಯಿಂದ ಮುಂಗಡ ಸಾಲ ನೀಡುವ ಪದ್ಧತಿ ಬಲ್ಲಾಳನ ಕಾಲದಲ್ಲಿ ಆಚರಣೆಯಲ್ಲಿತ್ತೆಂದು ಬೇಲೂರು ಶಾಸನವೊಂದು ತಿಳಿಸುತ್ತದೆ.

ವೀರ ಬಲ್ಲಾಳನ ಕಾಲದಲ್ಲಿ ಕಲೆ ವಿಶೇಷ ಪುರೋಭಿವೃದ್ಧಿ ಪಡೆಯಿತು. ವಿಷ್ಣುವರ್ಧನನ ಕಾಲದಲ್ಲಿ ನಿರ್ಮಿಸಲ್ಪಟ್ಟ ಬೇಲೂರು ಚನ್ನಕೇಶವ ದೇವಾಲಯವನ್ನು ವಿಸ್ತರಿಸಿ ಸುಂದರವಾಗಿ ಮಾಡಿದನಲ್ಲದೆ ಜಾಲಂಧ್ರಗಳನ್ನು, ಶಿಲಾ ಬಾಲಿಕಾ ವಿಗ್ರಹಗಳನ್ನು ವಾಸುದೇವ ತೀರ್ಥವನ್ನು ನಿರ್ಮಿಸಿದನು. ಅವನ ಕಾಲದಲ್ಲಿ ಹಳೆಬೀಡಿನ ಕೇದಾರೇಶ್ವರ, ಅಮೃತಾಪುರದ ಅಮೃತೇಶ್ವರ, ಬೆಳವಾಡಿಯ ವೀರ ನಾರಾಯಣ, ಅರಸೀಕೆರೆಯ ಈಶ್ವರ ಹಾಗೂ ಸಹಸ್ರಕೂಟ ಜಿನಾಲಯ,ಸಿಂಧಗಟ್ಟದ ಲಕ್ಷ್ಮೀನಾರಾಯಣ ಮೊದಲಾದ ದೇವಾಲಯಗಳು ನಿರ್ಮಾಣವಾದವು. ವೀರಬಲ್ಲಾಳನು ವೈಷ್ಣವ ಪಂಥಾವಲಂಬಿಯಾಗಿದ್ದಾಗ್ಯೂ ಜೈನ ಮತ್ತು ಶೈವ ಪಂಥಗಳಿಗೂ ಸಮಾನವಾದ ಪ್ರೋತ್ಸಾಹ ನೀಡಿದನು. ಉದಾರ ನೀತಿಯ ಪ್ರತಿಪಾದಕನಾದ ಬಲ್ಲಾಳ ಶೌರ್ಯ, ಸಾಮರ್ಥ್ಯಕ್ಕೆ ಆದ್ಯತೆ ನೀಡಿದ್ದನೆಂಬುದಕ್ಕೆ ಸಮಾಜದ ನಾಲ್ಕನೇ ವರ್ಣದ ಅಮಿತಯ್ಯನನ್ನು ಸಚಿವ ಮತ್ತು ದಂಡನಾಯಕನಾಗಿ ನೇಮಿಸಿಕೊಂಡ ನಿದರ್ಶನವು ಸಾಕ್ಷಿಯಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಇವನು ಕ್ರಿ.ಶ. 1220 ರಲ್ಲಿ ಮರಣ ಹೊಂದಿದನು. ಇವನ ಮರಣ ವಾರ್ತೆಯನ್ನು ತಿಳಿದ ಕೂಡಲೇ ಅವರ

ನೆಚ್ಚಿನ ಭಟರೂ, ಗರುಡರೂ (ಲೆಂಕರು) ಪ್ರಾಣಾರ್ಪಣೆ ಮಾಡಿಕೊಂಡರು. ಮಲೆಪರೋಳ್‌ಗಂಪ, ಗಿರಿದುರ್ಗ ಮಲ್ಲ, ಶನಿವಾರ ಸಿದ್ಧಿ, ಛಲದಂಕಮಲ್ಲ, ಸಮಸ್ತ ಭೂವಾಶ್ರಯ, ಯಾದವ ನಾರಾಯಣ, ತೆಂಕಣ ಚಕ್ರವರ್ತಿ, ಗಂಡ ಬೇರುಂಡ ಮೊದಲಾದವು ಅವರ ಬಿರುದುಗಳು. ಕರ್ನಾಟಕ ಚಕ್ರವರ್ತಿಗಳಲ್ಲಿ 'ಗಂಡ ಬೇರುಂಡ' ಎಂಬ ಬಿರುದನ್ನು ಧರಿಸಿದವರಲ್ಲಿ ವೀರ ಬಲ್ಲಾಳನೇ ಮೊದಲಿಗನೆಂದು ತಿಳಿದು ಬಂದಿದೆ. ಎರಡನೇ ಬಲ್ಲಾಳನ ಕಾಲದಲ್ಲಿ ಹೊಯ್ಸಳರ ಕೀರ್ತಿಯು ತನ್ನ ಉನ್ನತಿಯ ಉತ್ತುಂಗ ಶಿಖರವನ್ನು ಮುಟ್ಟಿತು. ಅವರ ಸಾಧನೆಗಳಿಂದ ಈ ಸಂತತಿಗೆ ಹೊಯ್ಸಳ ಬಲ್ಲಾಳ ಸಂತತಿ ಎಂಬ ಹೆಸರು ರೂಢಿ ನಾಮವಾಯಿತು.

## 25.4 ಎರಡನೇ ವೀರ ನರಸಿಂಹ (ಕ್ರಿ.ಶ. 1220-1235)

ಇವನಿಗೆ ಪ್ರತಾಪ ನರಸಿಂಹ, ವೀರ ನರಸಿಂಹ ಎಂಬ ಹೆಸರುಗಳಿಂದಲೂ ಕರೆಯಲಾಗಿದೆ. ಇವನಿಗೆ ಯುವ ರಾಜಾಭಿಷೇಕವನ್ನು ನೆರವೇರಿಸಿ ಬಾಲ್ಯದಲ್ಲಿ ರಾಜಯೋಗ್ಯವಾದ ಶಿಕ್ಷಣವನ್ನು ಒದಗಿಸಲಾಯಿತು. ಪ್ರಾಪ್ತ ವಯಸ್ಕನಾದ ಮೇಲೆ ನರಸಿಂಹನು, ವೀರಬಲ್ಲಾಳನು ಕೈಗೊಂಡ ಯುದ್ಧಗಳಲ್ಲಿ ಪಾಲ್ಗೊಂಡು ದಕ್ಷ ಯೋಧನೆನಿಸಿಕೊಂಡನು. ಪ್ರಾಂತ್ಯಾಧಿಕಾರಿಯಾಗಿ ಆಡಳಿತದ ಅನುಭವಗಳಿಸಿದ್ದನು. ಯುವರಾಜನಾಗಿದ್ದಾಗಲೇ ತಂದೆಯ ಆಜ್ಞೆಯ ಮೇರೆಗೆ ಸೈನ್ಯ ಸಮೇತ ತಮಿಳುನಾಡಿಗೆ ಹೋಗಿ ಚೋಳರ ಶತ್ರುಗಳನ್ನು ಸೋಲಿಸಿ ರಾಜರಾಜನಿಗೆ ಸಿಂಹಾಸನವನ್ನು ದೊರಕಿಸಿ ಕೊಟ್ಟಿದ್ದನು. 1220 ರಲ್ಲಿ ವೀರ ಬಲ್ಲಾಳನ ಮರಣದ ತರುವಾಯ ಹೊಯ್ಸಳ ಚಕ್ರವರ್ತಿಯಾದನು.

ಇವನ ಆಳ್ವಿಕೆ ಕಾಲದಲ್ಲಿ ಉತ್ತರದಲ್ಲಿ ದೇವಗಿರಿಯ ಸೇವುಣನು ತಮ್ಮ ಹಿಂದಿನ ಸೋಲಿನ ಸೇಡನ್ನು ತೀರಿಸಿಕೊಳ್ಳಲು ನಿರಂತರವಾಗಿ ಹವಣಿಸುತ್ತಿದ್ದರು. ದಕ್ಷಿಣದಲ್ಲಿ ತಮಿಳು ನಾಡಿನ ರಾಜಕೀಯವು ಗೊಂದಲಮಯವಾಗಿತ್ತು. ನರಸಿಂಹನು ಅಧಿಕಾರ ವಹಿಸಿಕೊಂಡ ಕೂಡಲೇ ತಮಿಳು ನಾಡಿಗೆ ಧಾವಿಸಬೇಕಾಯಿತು. ಮಧುರೆಯ ಪಾಂಡ್ಯ ಸಂತತಿಯ ಮಾರವರ್ಮ ಸುಂದರ ಪಾಂಡ್ಯನು ತನ್ನ ಇತರ ಅನುಯಾಯಿಗಳೊಡನೆ ಸೇರಿ ರಾಜರಾಜನನ್ನು ಪುನಃ ಸೋಲಿಸಿದನು. ನರಸಿಂಹನು ಕೂಡಲೇ ತಮಿಳು ನಾಡಿಗೆ ಧಾವಿಸಿ ಪಾಂಡ್ಯ ರಾಜನನ್ನು ಅವನ ಮಿತ್ರರನ್ನು ಸೋಲಿಸಿ ರಾಜರಾಜನನ್ನು ಸಂತೈಯಿಸಿ ಅವರ ಸಿಂಹಾಸನವನ್ನು ಪುನಃ ದೊರಕಿಸಿ ಕೊಟ್ಟನು. ಆದರೆ ನರಸಿಂಹನು ಹೆಚ್ಚು ಕಾಲ ತಮಿಳು ನಾಡಿನಲ್ಲಿರಲು ಅವಕಾಶವಾಗಲಿಲ್ಲ.

ಹೊಯ್ಸಳ ಚಕ್ರವರ್ತಿಯು ತಮಿಳುನಾಡಿಗೆ ಧಾವಿಸಿದ ಅವಕಾಶವನ್ನು ಉಪಯೋಗಿಸಿಕೊಂಡು ಸೇವುಣ ರಾಜನು ಪ್ರಬಲ ಸೈನ್ಯದೊಡನೆ ಹೊಯ್ಸಳರ ಉತ್ತರದ ಗಡಿಗಳನ್ನು ಮುತ್ತಿದನು. ಹೊಯ್ಸಳರ ರಾಜಧಾನಿಗೆ ಮುತ್ತಿಗೆ ಹಾಕುವುದು ಸೇವುಣರ ಗುರಿಯಾಗಿದ್ದಿತು. ಆದರೆ ಸೇವುಣರ ಆಕ್ರಮಣದ ಸುದ್ದಿ ತಿಳಿದ ಕೂಡಲೇ ಇಮ್ಮಡಿ ನರಸಿಂಹನು ತಮಿಳು ನಾಡಿನಿಂದ ಧಾವಿಸಿ ಬಂದು ಸೇವುಣರನ್ನು ಬಳ್ಳಾರಿ ಜಿಲ್ಲೆಯಲ್ಲಿ ತುಂಗ ಭದ್ರಾ ಪ್ರದೇಶದಲ್ಲಿ ಎದುರಿಸಿದನು. ಪ್ರಬಲ ಹೋರಾಟವು ನಡೆದು ಸೇವುಣ ಬಲವು ಸೋತು ಹೋಯಿತು. ಸೇವುಣ ದಂಡ ನಾಯಕರಾದ ಪಾವುಸ ಮತ್ತು ವಿಕ್ರಮಪಾಲ ಎಂಬುವರು ಯುದ್ಧದಲ್ಲಿ ಮಡಿದರು. ಅಳಿದುಳಿದ ಸೇವುಣ ಬಲವು ಕಂಗೆಟ್ಟು ಓಡಿತು. ಈ ಯುದ್ಧವು ಸುಮಾರು ಕ್ರಿ.ಶ. 1222 ರಲ್ಲಿ ನಡೆಯಿತೆಂದು ತಿಳಿದು ಬರುತ್ತದೆ. ನರಸಿಂಹ ಮತ್ತು ಅವನ ದಂಡನಾಯಕ ಅಡ್ಡಾಯದ ಹರಿಹರನು ಸೇವುಣ ಸೈನ್ಯದ ಮೇಲೆ ನಡೆಸಿದ ಅಪ್ರತಿಮ ಹೋರಾಟವನ್ನು ಅನೇಕ ಶಾಸನಗಳು ವರ್ಣಿಸುತ್ತವೆ. ತೀವ್ರ ಸೋಲನ್ನನುಭವಿಸಿದ ಸೇವುಣರು ಪ್ರತಾಪ ನರಸಿಂಹನ ಆಳ್ವಿಕೆಯ ಕಾಲದಲ್ಲಿ ಪುನಃ ಯುದ್ಧ ಹೂಡುವ ಸಾಹಸ ಮಾಡಲಿಲ್ಲ.

ಆ ವೇಳೆಗೆ ಪುನಃ ತಮಿಳು ನಾಡಿನ ರಾಜಕೀಯವು ಗೊಂದಲಮಯವಾಗಿತ್ತು. ಕ್ರಿ.ಶ. 1224 ರಲ್ಲಿ ಪಾಂಡ್ಯ, ಮಗರ ಮತ್ತು ಕಡವ ಸಂತತಿಗಳ ರಾಜರು ಐಕ್ಯಮತ್ಯದಿಂದ ಯುದ್ಧಹೂಡಿ ದುರ್ಬಲನಾದ ಮೂರನೇ ರಾಜರಾಜ ಚೋಳನನ್ನು ಸೋಲಿಸಿದರು. ಅವನು ತಲೆ ತಪ್ಪಿಸಿಕೊಂಡು ಹೋಗುವ ಪ್ರಯತ್ನದಲ್ಲಿದ್ದಾಗ ಅವನನ್ನು ಬಂಧಿಸಲಾಯಿತು. ಪ್ರತಾಪ ನರಸಿಂಹ ಮತ್ತು ಅವನ ದಂಡನಾಯಕರಾದ ಅಪ್ಪಯ್ಯ ಮತ್ತು ಗೋಪಯ್ಯ ಎಂಬುವರು ತಮಿಳು ನಾಡಿಗೆ ಹೋಗಿ ಪಾಂಡ್ಯರನ್ನು, ಮಗರ ಮತ್ತು ಇತರ ಮಾಂಡಲಿಕರನ್ನು ಸೋಲಿಸಿ ರಾಜರಾಜನಿಗೆ ಅಧಿಕಾರವನ್ನು ದೊರಕಿಸಿ ಕೊಟ್ಟರು. ಕಂಚಿಯು ಸ್ವಲ್ಪಕಾಲ ನರಸಿಂಹನ ವಶವಾಗಿತ್ತು. ಅವನು ರಾಮೇಶ್ವರದವರೆಗೂ ದಂಡೆತ್ತಿ ಹೋಗಿ ವಿಜಯ ಸ್ತಂಭವನ್ನು ಸ್ಥಾಪಿಸಿದುದಾಗಿ ತಿಳಿದು ಬರುತ್ತದೆ. ಆ ವೇಳೆಗೆ ನರಸಿಂಹನ ಸಹೋದರಿಯಾದ ಸೋವಲ ದೇವಿಯನ್ನು ಮೂರನೇ ರಾಜರಾಜನು ವರಿಸಿದ್ದನು. ಹೊಯ್ಸಳ ಮತ್ತು ಚೋಳ ರಾಜಮನೆತನಗಳ

ಮಧ್ಯೆ ನಿಕಟವಾದ ಬಾಂದವ್ಯ ಏರ್ಪಟ್ಟಿತು. ಪುನಃ 1227 ರಲ್ಲಿ ಪಾಂಡ್ಯರಿಂದ ರಾಜರಾಜನು ತೊಂದರೆಗೆ ಗುರಿಯಾದುದು. ಆದರೆ ನರಸಿಂಹನು ರಾಜರಾಜ ಚೋಳನ ಸಹಾಯಕ್ಕೆ ಧಾವಿಸಿದನು. ರಾಜರಾಜನ ಸಂರಕ್ಷಣೆಗಾಗಿ ಬಂದು ಹೊಯ್ಸಳ ಸೈನ್ಯದ ತುಕಡಿಯನ್ನು ತಮಿಳುನಾಡಿನ ಶ್ರೀರಂಗಂ ಸುತ್ತಮುತ್ತಲಿನ ಫಲವತ್ತಾದ ವಿಶಾಲ ಪ್ರದೇಶವನ್ನು ಹೊಯ್ಸಳರ ಆಳ್ವಿಕೆಗೆ ವಹಿಸಿದನು. ನರಸಿಂಹನ ಪುತ್ರನೂ ಯುವರಾಜನೂ ಆದ ವೀರ ಸೋಮೇಶ್ವರನು ಅಲ್ಲಿ ಒಂದು ರಾಜಧಾನಿಯನ್ನು ಸ್ಥಾಪಿಸಿಕೊಂಡು ಅಧಿಕಾರ ನಡೆಸುತ್ತಿದ್ದನು. ತಮಿಳುನಾಡಿನಲ್ಲಿ ಹೊಯ್ಸಳರ ಪ್ರಭಾವವು ವ್ಯಾಪಾರವಾಗಿ ವಿಸ್ತರಿಸಿತು. ಇಮ್ಮಡಿ ನರಸಿಂಹನು ಚೋಳ ರಾಜ್ಯ ಪ್ರತಿಷ್ಠಾಪನಾಚಾರ್ಯ, ಪಾಂಡ್ಯರಾಜ ಗಜಕೇಸರಿ, ಮಗದ ರಾಜ್ಯ ನಿರ್ಮೂಲನ ಎಂಬ ಬಿರುದುಗಳನ್ನು ಧರಿಸಿದನು. ಇವನ ಕಾಲದಲ್ಲಿ ಪೊಲಾಳ್ವ ದಂಡನಾಥನು ವೈಷ್ಣವ ಪಂಥಾವಲಂಬಿಯಾಗಿದ್ದು ಹರಿಹರದ ಪ್ರಸಿದ್ಧ ಹರಿಹರೇಶ್ವರ ದೇವಾಲಯವನ್ನು ಕಟ್ಟಿಸಿದನು. ನರಸಿಂಹನು ಕ್ರಿ.ಶ. 1235 ರಲ್ಲಿ ಮರಣ ಹೊಂದಿದನು.

## 25.5 ವೀರಸೋಮೇಶ್ವರ ಮತ್ತು ಹೊಯ್ಸಳ ಸಾಮ್ರಾಜ್ಯದ ವಿಭಜನೆ (ಕ್ರಿ.ಶ. 1236-1255)

ಇವನ ತರುವಾಯ ವೀರ ಸೋಮೇಶ್ವರನು ಸಿಂಹಾಸನವನ್ನೇರಿದನು. ತಮಿಳು ನಾಡಿನ ಸ್ಥಿತಿಗತಿಗಳು ಇವನಿಗೆ ಬಾಲ್ಯದಿಂದಲೂ ಪರಿಚಿತವಾಗಿದ್ದವು. ತನ್ನ ತಂದೆಯ ಕಾಲದಲ್ಲಿ ವೀರಸೋಮೇಶ್ವರನು ತಮಿಳು ಪ್ರದೇಶದ ಮೇಲ್ವಿಚಾರಣೆಗೆ ನೇಮಕಗೊಂಡನು. ಇವನು ಶ್ರೀರಂಗಂ ಬಳಿಯ ಕಣ್ಣಾನೂರಿನ ಸಮೀಪದಲ್ಲಿ ಹೊಸ ರಾಜಧಾನಿಯನ್ನು ಕಟ್ಟಿ ಅದನ್ನು ವಿಕ್ರಮಪುರ ಎಂದು ಕರೆದನು. ಅಲ್ಲಿ ಸುಂದರವಾದ ಒಂದು ಹೊಯ್ಸಳೇಶ್ವರ ದೇವಾಲಯವನ್ನು ಕಟ್ಟಿಸಿದನು. ಇವನು ಅಧಿಕಾರ ವಹಿಸಿಕೊಂಡ ಮೇಲೆ ತಮಿಳುನಾಡಿನ ರಾಜಕೀಯವು ಹೊಸ ತಿರುವು ಮುರುವುಗಳಾಗಿ ಕೂಡಿ ಪ್ರಕ್ಷುಬ್ಧ ಸ್ಥಿತಿಯುಂಟಾಯಿತು.

ಮೂರನೇ ರಾಜರಾಜ ಚೋಳನು ಮರಣ ಹೊಂದಿದ ಮೇಲೆ ಮೂರನೇ ರಾಜೇಂದ್ರ ಚೋಳ ರಾಜನಾದನು. ಮೂರನೇ ರಾಜೇಂದ್ರನು ತೆಲುಗು ಚೋಡಗಂಡ ಗೋಪಾಲ ಮತ್ತು ಕಡವ ಕೋಪೆರುಂಜುಂಗನೊಡನೆ ಮೈತ್ರಿಯೇರ್ಪಡಿಸಿಕೊಂಡು ಹೊಯ್ಸಳ ಪರಮಾಧಿಕಾರವನ್ನು ಧಿಕ್ಕರಿಸಿದುದಲ್ಲದೆ ಪಾಂಡ್ಯ ರಾಜನಾದ ಮಾರವರ್ಮ ಸುಂದರ ಪಾಂಡ್ಯನನ್ನು ಸೋಲಿಸಿ ಸ್ವತಂತ್ರವಾಗಿ ಆಳಲು ಸಕ್ರಮಿಸಿದನು. ಯುದ್ಧದಲ್ಲಿ ಸೋತ ಮಾರವರ್ಮನ್ ಸುಂದರ ಪಾಂಡ್ಯನು ವೀರ ಸೋಮೇಶ್ವರನ ಸಹಾಯವನ್ನು ಯಾಚಿಸಿದನು. ಸೋಮೇಶ್ವರನು ಚೋಳ ರಾಜೇಂದ್ರನನ್ನು ಅವನ ಪಕ್ಷದ ಮಾಂಡಲಿಕರನ್ನು ಸೋಲಿಸಿ ಪಾಂಡ್ಯ ರಾಜನನ್ನು ಸಂತೈಸಿದನು. ವೀರಸೋಮೇಶ್ವರನು "ಪಾಂಡ್ಯರಾಜ ಸ್ಥಾಪನಾ ಚಾರ್ಯ" ಮತ್ತು ಪಾಂಡ್ಯ ಕುಲ ಸಂರಕ್ಷಣಾ ದಕ್ಷಿಣ ಭುಜ' ಎಂಬ ಬಿರುದನ್ನು ಧರಿಸಿದನು. ಚೋಳ ಮತ್ತು ಪಾಂಡ್ಯ ಸಂತತಿಗಳು ಹೊಯ್ಸಳ ಸಂತತಿಯೊಡನೆ ರಕ್ತ ಸಂಬಂಧವನ್ನೇರ್ಪಡಿಸಿಕೊಂಡಿದ್ದವು. ತಿರುಮಾಯಲಾದ ಮತ್ತು ತಿನ್ನವೇಲಿ ಶಾಸನಗಳಲ್ಲಿ ಮೂರನೇ ರಾಜೇಂದ್ರ ಚೋಳನೂ, ಮಾರವರ್ಮ ಸುಂದರ ಪಾಂಡ್ಯನೂ ಸೋಮೇಶ್ವರನನ್ನು ಮಾಮಾದಿಗಳ್" ಎಂಬುದಾಗಿ ಸಂಬೋಧಿಸಿದ್ದಾರೆ. ಕನ್ನಡನಾಡಿನ ಹೆಚ್ಚು ಮಂದಿ ದಂಡನಾಯಕರೂ, ಅಧಿಕಾರಿಗಳೂ ತಮಿಳುನಾಡಿನಲ್ಲಿ ಆಡಳಿತ ಮತ್ತು ಇತರ ಕಾರ್ಯಗಳಲ್ಲಿ ನಿಯೋಜಿತರಾಗಿದ್ದರು. ಆ ಕಾಲವು ತಮಿಳು ನಾಡಿನಲ್ಲಿ ಹೊಯ್ಸಳರ ಪ್ರಭಾವ ಮತ್ತು ಅಧಿಕಾರದ ಉತ್ತುಂಗ ಕಾಲವಾಗಿತ್ತು. ಕ್ರಿ.ಶ. 1251 ರವರೆಗೂ ತಮಿಳು ನಾಡಿನಲ್ಲಿ ಹೊಯ್ಸಳರ ಅಧಿಕಾರಕ್ಕೆ ಯಾವ ವಿಧವಾದ ಚ್ಯುತಿಯೂ ಒದಗಲಿಲ್ಲ.

ವೀರ ಸೋಮೇಶ್ವರನು ತಮಿಳು ನಾಡಿನ ರಾಜಕೀಯದಲ್ಲಿ ತೊಡಗಿದ್ದಾಗ ಹೊಯ್ಸಳ ಸಾಮ್ರಾಜ್ಯದ ಉತ್ತರ ಗಡಿಗಳನ್ನು ಸೇವುಣ ಕೃಷ್ಣಕಾಂಧಾರನು ಮುತ್ತಿದನು. ಅವನು ದೋರ ಸಮುದ್ರವನ್ನು ಮುತ್ತುವ ಹವಣಿಕೆಯಲ್ಲಿದ್ದನು. ಆದರೆ ಸುದ್ದಿ ತಿಳಿದ ಕೂಡಲೇ ವೀರಸೋಮೇಶ್ವರನು ಸೇವುಣ ಬಲವನ್ನು ಸೋಲಿಸಿ ಕೃಷ್ಣಾ ನದಿಯವರೆಗೂ ಹಿಮ್ಮೆಟ್ಟಿಸಿದನು. ಸೋಮೇಶ್ವರನು ಸೇವುಣರನ್ನು ಹಿಮ್ಮೆಟ್ಟಿಸಿದ ಕೂಡಲೇ ಪುನಃ ತಮಿಳುನಾಡಿಗೆ ಪ್ರಯಾಣ ಮಾಡಿದನು. ಇಲ್ಲಿ ಪುನಃ ರಾಜಕೀಯ ಏರುಪೇರುಗಳುಂಟಾದವು. ಪಾಂಡ್ಯ ರಾಜನಾದ ಮಾರವರ್ಮನ್ ಸುಂದರ ಪಾಂಡ್ಯನು ಮಡಿದ ಮೇಲೆ ಜಟಾವರ್ಮನ್ ಸುಂದರ ಪಾಂಡ್ಯನು ರಾಜನಾದನು. ಅವನು ಪಾಂಡ್ಯ ಸಂತತಿಯಲ್ಲಿ ಅತಿಪರಾಕ್ರಮಿ ರಾಜರಲ್ಲೊಬ್ಬನು. ಅವನು ಪಟ್ಟಕ್ಕೆ ಬಂದ ಕೂಡಲೇ ದಿಗ್ವಿಜಯದಲ್ಲಿ ತೊಡಗಿ ಚೋರ ಚೋಳ, ಮೊದಲಾದ ರಾಜರನೆಲ್ಲಾ ಸೋಲಿಸಿ ಪಾಂಡ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಅವನು ಹೊಯ್ಸಳ ಸೈನ್ಯವನ್ನು ಸೋಲಿಸಿದನು. ಆದರೆ ಸೋಮೇಶ್ವರನು ತಮಿಳು ರಾಜಕೀಯದಲ್ಲಿ ಮೊದಲಿನಷ್ಟು ಪ್ರಭಾವವನ್ನು ಹೊಂದಲಾಗದಿದ್ದರೂ ಶ್ರೀರಂಗಂ ಸುತ್ತಮುತ್ತಲಿನ

ಪ್ರದೇಶದ ಮೇಲೆ ತನ್ನ ಆಳ್ವಿಕೆಯನ್ನು ಮುಂದುವರಿಸಿದನು. ಹೊಯ್ಸಳರು ತಮಿಳು ನಾಡಿನಲ್ಲಿ ಹೊಂದಿದ್ದ ಪ್ರಭಾವವು ಕಡಿಮೆಯಾಯಿತು. ಸೋಮೇಶ್ವರನು ಕ್ರಿ.ಶ. 1254 ರಲ್ಲಿ ದೋರ ಸಮುದ್ರಕ್ಕೆ ಹಿಂದಿರುಗಿದನು. ಕೊನೆಗಾಲದಲ್ಲಿ ತಮಿಳು ನಾಡಿನ ರಾಜಕೀಯದುಲ್ಲುಂಟಾದ ಪರಾಜಯ ಮತ್ತು ಅನಾರೋಗ್ಯದ ಜೊತೆಗೆ ಕೌಟುಂಬಿಕ ತೊಂದರೆಯನ್ನು ಅನುಭವಿಸಬೇಕಾಯಿತು. ವೀರ ಸೋಮೇಶ್ವರನಿಗೆ ಇಬ್ಬರು ಹೆಂಡಂದಿರಿಂದ ಇಬ್ಬರು ಪುತ್ರರಿದ್ದರು. ಬಿಜ್ಜಳ ದೇವಿಗೆ ವೀರ ನರಸಿಂಹ ಎಂಬುವನು ದೇವಲ ದೇವಿಗೆ ವೀರರಾಮನಾಥನನೆಂಬ ಪುತ್ರರಿದ್ದರು. ಸಿಂಹಾಸನಕ್ಕಾಗಿ ಅವರಿಬ್ಬರೂ ಸ್ಪರ್ಧೆಯಲ್ಲಿ ತೊಡಗಿದರು. ಅವರ ಕಾದಾಟವನ್ನು ನಿವಾರಿಸಲು ವೀರ ಸೋಮೇಶ್ವರರಲ್ಲಿ ಹೊಯ್ಸಳ ಸಾಮ್ರಾಜ್ಯವನ್ನು ವಿಭಜಿಸಿ ಅವರಿಗೆ ಹಂಚಿ ಕ್ರಿ.ಶ. 1255 ರಲ್ಲಿ ಮರಣ ಹೊಂದಿದನು. ಅವನ ಮರಣದ ನಂತರ ದೋರಸಮುದ್ರದಲ್ಲಿ 36 ನೇ ವೀರ ನರಸಿಂಹನು (1256-1291 ರ ) ವರೆಗೂ ಆಳಿದದ್ದು, ಹಾಗೆಯೇ ತಮಿಳು ನಾಡಿನಲ್ಲಿ ವೀರರಾಮನಾಥನು 1256 ರಿಂದ 1294 ರವರೆಗೂ ಅಧಿಕಾರ ರೂಢನಾಗಿದ್ದನು.

ಸಾಮ್ರಾಜ್ಯ ವಿಭಜನೆಯಾದ ನಂತರ 3ನೇ ನರಸಿಂಹನಿಗೂ ಮತ್ತು ವೀರ ರಾಮನಾಥನಿಗೂ ಸತತವಾಗಿ ದಾಯಾದಿ ಕಲಹಗಳು ನಡೆದವು. ರಾಜ್ಯದ ಹಂಚಿಕೆಯಿಂದ ಅತೃಪ್ತನಾದ ರಾಮನಾಥನು ಬೆಂಗಳೂರು ತುಮಕೂರಿನತ್ತ ರಾಜ್ಯ ವಿಸ್ತರಿಸಲು ಹವಣಿಸಿದನು. ಭ್ರಾತೃ ಕಲಹದಿಂದ ಬಲಹೀನಗೊಂಡಿದ್ದ ದೋರಸಮುದ್ರ ಮೂರನೇ ವೀರನರಸಿಂಹನ ರಾಜ್ಯವನ್ನು ಆಕ್ರಮಿಸಲು ಸೇವುಣರು ಮುಂದಾದರು. ನರಸಿಂಹನು ರಾಮನಾಥನನ್ನು ಸೋಲಿಸಿ ಹಿಮ್ಮೆಟ್ಟಿಸುವ ವೇಳೆಗೆ 1271 ರಲ್ಲಿ ಸೇವುಣ ಮಹಾದೇವನು ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳ ಮೇಲೆ ಆಕ್ರಮಣ ನಡೆಸಿದನು. ಆದರೆ ನರಸಿಂಹನೂ ಅವನ ದಂಡನಾಯಕನಾದ ಪೆರುಮಾಳನೂ ಸೇವುಣರನ್ನು ಎದುರಿಸಿ ಸೋಲಿಸಿದರು. ಸೇವುಣ ಮಹದೇವನ ತರುವಾಯ ಅಧಿಕಾರಕ್ಕೆ ಬಂದ ರಾಮಚಂದ್ರನು ಕ್ರಿ.ಶ. 1276 ರಲ್ಲಿ ಪ್ರಬಲ ಸೈನ್ಯದೊಂದಿಗೆ ಮುಂದುವರಿದು ದೋರ ಸಮುದ್ರವನ್ನು ಮುತ್ತುವ ಹಂಚಿಕೆಯಲ್ಲಿದ್ದನು. ಸೇವುಣ ಬಲವು ಬೆಳವಾಡಿಯವರೆಗೂ ಬಂದಿತು. ಆ ವೇಳೆಯಲ್ಲಿ ರಾಮನಾಥನೊಡನೆ ಯುದ್ಧದಲ್ಲಿ ತೊಡಗಿದ್ದ ನರಸಿಂಹನು ಸೇವುಣರನ್ನು ಎದುರಿಸಲು ಧಾವಿಸಿದನು. ಸೈನ್ಯದ ನಾಯಕತ್ವವನ್ನು ವಹಿಸಿ ವೀರವೇಶದಿಂದ ಹೋರಾಡಿ ಜಯಗಳಿಸಿದನು. ಶತೃ ಸೈನ್ಯವು ಸೋತು ಓಡಿತು. ನರಸಿಂಹನ ದಳಪತಿಗಳಾದ ಚಿಕ್ಕ ಕೇತಯ್ಯ ಮತ್ತು ಅಂಕಯ್ಯ ಮೊದಲಾದವರು ಜೀವನದ ಹಂಗು ತೊರೆದು ಸೇವುಣರ ಮೇಲೆ ಬಿದ್ದು ಹೋರಾಡಿದರು. ಹೊಯ್ಸಳರ ಸೆನ್ಯವು ಅವರನ್ನು ಚಿತ್ರದುರ್ಗದವರೆಗೂ ಬೆನ್ನಟ್ಟಿತು. ಅನಂತರ ನರಸಿಂಹನು ಸೇವುಣರೊಡನೆ ಸಹಕರಿಸಿದ ನಿಡಗಲ್ ಚೋಳ ಮೊದಲಾದ ಸಾಮಂತರನ್ನು ಶಿಕ್ಷಿಸಿದನು. ಹೀಗೆ ಮೂರನೇ ನರಸಿಂಹನ ಕಾಲದಲ್ಲೂ ಸೇವುಣರ ಆಕ್ರಮಣದಿಂದ ಹೊಯ್ಸಳ ರಾಜ್ಯ ಪಾರಾಯಿತು. ಆದರೆ ಸತತ ದಾಯಾದಿ ಕಲಹ ಮತ್ತು ಸೇವುಣರ ಆಕ್ರಮಣದಿಂದಾಗಿ ಹೊಯ್ಸಳರ ಪ್ರಾಬಲ್ಯವು ಬಲಹೀನಗೊಂಡಿತು.

## 25.6 ಮೂರನೇ ಬಲ್ಲಾಳ ಮತ್ತು ರಾಜಕೀಯ ಸಮಸ್ಯೆಗಳು (ಕ್ರಿ.ಶ. 1292-1343)

ಮೂರನೇ ನರಸಿಂಹನ ಮಗನಾದ ಮೂರನೇ ಬಲ್ಲಾಳನು ಹೊಯ್ಸಳ ಸಂತತಿಯ ಸಮರ್ಥ ರಾಜರಲ್ಲಿ ಒಬ್ಬನೂ ಹಾಗೂ ಆ ಸಂತತಿಯ ಕೊನೆಯ ಚಕ್ರವರ್ತಿಯೂ ಆಗಿದ್ದಾನೆ. ಅವನು ಪರಾಕ್ರಮಿಯೂ, ರಾಜತಂತ್ರ ನಿಪುಣನೂ ಆಗಿದ್ದನು. ಆದರೆ ಅವನ ಆಳ್ವಿಕೆಯ ಕಾಲವು ದಕ್ಷಿಣ ಭಾರತದ ಇತಿಹಾಸದಲ್ಲಿ ಜಟಿಲವೂ, ಸಂದಿಗ್ಧ ಕಾಲಾವಾಗಿದ್ದಿತು. ಪ್ರಸಿದ್ಧವಾದ ಚೋಳ ಮನೆತನವು ಆ ವೇಳೆಗೆ ವಿನಾಶವಾಗಿತ್ತು. ಮಧುರೆಯ ಪಾಂಡ್ಯರ ಮನತನವು ವಿನಾಶದ ಅಂಚಿನಲ್ಲಿತ್ತು. ಆಂಧ್ರದ ಕಾಕತೀಯ ಮನೆತನವು ದುರ್ಬಲವಾಗಿತ್ತು. ದೇವಗಿರಿಯ ಸೇವುಣ ಸಂತತಿಯೂ ಸಹ ರಾಜಕೀಯ ಚಂಡಮಾರುತಕ್ಕೆ ಒಳಗಾಗಿತ್ತು. ದೆಹಲಿ ಸುಲ್ತಾನರು ದಕ್ಷಿಣ ಭಾರತದ ಮೇಲೆ ಸತತವಾಗಿ ಆಕ್ರಮಣ ನಡೆಸತೊಡಗಿದರು. ದಕ್ಷಿಣದ ರಾಜ್ಯಗಳೆಲ್ಲವೂ ಒಂದೊಂದಾಗಿ ದೆಹಲಿ ಸುಲ್ತಾನರ ಆಕ್ರಮಣಕ್ಕೆ ತುತ್ತಾಗಿ ನಿರ್ನಾಮವಾಗತೊಡಗಿದವು. ವೀರ ಬಲ್ಲಾಳನು ಪರಾಕ್ರಮ ಹಾಗೂ ಜಾಣ್ಮೆಯಿಂದ ಆಗ ಸಂಭವಿಸಿದ ವಿಪ್ಲವದಿಂದ ತನ್ನ ಮನೆತನದ ಕೀರ್ತಿಯನ್ನು ಹೆಚ್ಚಿಸಿ ದಕ್ಷಿಣ ಭಾರತವನ್ನು ಉತ್ತರ ದಂಡಯಾತ್ರೆಗಳಿಂದ ಪಾರು ಮಾಡಲು ಹೋರಾಡಿದ ಚಿತ್ರ ಅವಿಸ್ಮರಣೀಯ ಘಟನೆಯಾಗಿದೆ. ಹೊಯ್ಸಳ ಸಾಮ್ರಾಜ್ಯವೂ ಇತಿಹಾಸದಿಂದ ನಿರ್ಗಮಿಸಿ ವಿಜಯನಗರ ಸ್ಥಾಪನೆಗೆ ಸಹಕಾರಿಯಾದುದು ಮೂರನೇ ಬಲ್ಲಾಳನ ಕಾಲದ ಮತ್ತೊಂದು ಮರೆಯಲಾಗದ ಘಟನೆಯಾಗಿದೆ.

ಮೂರನೇ ಬಲ್ಲಾಳನು ಪಟ್ಟಕ್ಕೆ ಬರುವ ವೇಳೆಗೆ 28 ವರ್ಷಗಳಾಗಿದ್ದು ಯುವರಾಜನಾಗಿದ್ದಾಗಲೇ ಆಡಳಿತದಲ್ಲಿ ಅನುಭವ ಪಡೆದಿದ್ದನು ಮತ್ತು ರಾಜ್ಯ ಎದುರಿಸುತ್ತಿದ್ದ ಸಮಸ್ಯೆಗಳ ಅರಿವುಯಿದ್ದಿತು. ತನ್ನ ಮನೆತನದ ಗತಿಸಿದ ಪ್ರಾಬಲ್ಯವನ್ನು ಪುನರುಜ್ಜೀವನಗೊಳಿಸಲು ಸಂಕಲ್ಪಿಸಿದನು. ದಯಾದಿ ಕಲಹದಿಂದ ರಾಜ್ಯವನ್ನು ಪಾರುಮಾಡುವುದು ಅವನ ಮೊದಲ ಕರ್ತವ್ಯವಾಗಿತ್ತು.

ಚಿಕ್ಕಪ್ಪನಾದ ರಾಮನಾಥನು ಸೀರೆನಾಡು ಮತ್ತು ಚಿತ್ರದುರ್ಗ ಜಿಲ್ಲೆಯವರೆಗೂ ಆಕ್ರಮಣವನ್ನು ಮುಂದುವರಿಸಿದನು. ಬಲ್ಲಾಳನು ಕ್ರಿ.ಶ. 1294 ರಲ್ಲಿ ಅವನ ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಿದನು. ಆ ವೇಳೆಗೆ ರಾಮನಾಥನು ಗತಿಸಿ ಅವನ ಮಗನಾದ ವಿಶ್ವನಾಥನು ಅಧಿಕಾರ ವಹಿಸಿಕೊಂಡನು. ಬಲ್ಲಾಳನಿಗೂ ವಿಶ್ವನಾಥನಿಗೂ ನಡೆದ ಯುದ್ಧಗಳ ಮಾಹಿತಿ ಲಭ್ಯವಿಲ್ಲ. ಆದರೆ ಕ್ರಿ.ಶ. 1300 ರ ವೇಳೆಗೆ ವಿಶ್ವನಾಥನ ಅಧಿಕಾರವು ಕೊನೆಗೊಂಡು ವೀರಬಲ್ಲಾಳನು ಹೋಳಾಗಿದ್ದ ಈ ಹೊಯ್ಸಳ ರಾಜ್ಯವನ್ನು ಪುನಃ ಒಂದು ಗೂಡಿಸಿದನು. ಅನಂತರ ರಾಜ್ಯದ ಪಶ್ಚಿಮ ಹಾಗೂ ಉತ್ತರದ ಗಡಿಯಲ್ಲಿ ತಲೆದೋರಿದ್ದ ಅಭದ್ರತೆಯನ್ನು ಸರಿಪಡಿಸಲು ತೊಡಗಿದನು.

### 25.6.1 *ದೇವಗಿರಿ ಸೇವುಣರೊಡನೆ ಸೆಣೆಸಾಟ*

ದೇವಗಿರಿಯ ಸೇವುಣರು ಹೊಯ್ಸಳ ರಾಜ್ಯದ ಉತ್ತರ ಗಡಿಗಳನ್ನು ಆಕ್ರಮಿಸಿ ಉಪದ್ರವನ್ನು ಮುಂದುವರಿಸುತ್ತಿದ್ದರು. ಬಲ್ಲಾಳನು ಸೇವುಣರ ಆಕ್ರಮಣವನ್ನು ಕೊನೆಗಾಣಿಸಲು ಕ್ರಿ.ಶ. 1301 ರಲ್ಲಿ ತನ್ನ ಸೈನ್ಯವನ್ನು ಕಳುಹಿಸಿದನು. ಸೇವುಣರನ್ನು ಎದುರಿಸಿ ಹೋರಾಡುತ್ತಿದ್ದ ಹೊಯ್ಸಳ ಮಾಂಡಲಿಕರಾದ ಹೊಸಗುಂದದ ಶಾಂತಾರರ ಸಹಾಯಕ್ಕೆ ಹೊಯ್ಸಳ ಸೈನ್ಯವು ಧಾವಿಸಿತು. ಈ ಸೈನ್ಯವು ವಿರೋಧಿಗಳನ್ನು ಹಾನಂಗಲ್ಲಿನ ಕದಂಬ ಮೋದಲ ಸೇವುಣ ಮಾಂಡಲಿಕರನ್ನು ಸೋಲಿಸಿ ಸಿರಸಿಯವರೆಗೂ ಹೊಯ್ಸಳ ರಾಜ್ಯದ ಗಡಿಯನ್ನು ವಿಸ್ತರಿಸಲಾಯಿತು. ಕ್ರಿ.ಶ. 1303 ರಲ್ಲಿ ಸೇವುಣ ದಂಡನಾಯಕ ಮುಮ್ಮಡಿ ಸಿಂಗೇಯ ನಾಯಕನ ಮಗ ಕಂಪಿಲನು ತುಂಗಭದ್ರ ತೀರದಲ್ಲಿ ಹೊಯ್ಸಳ ಸೈನ್ಯವನ್ನು ಎದುರಿಸಿದನು..ಬಲ್ಲಾಳನ ಭಾವಮೈದ ಸೋಮೇಶ್ವರನನ ದಂಡನಾಯಕನು ಕಂಪಿಲನನ್ನು ಎದುರಿಸಿ, ಸೇವುಣ ಪಡೆಗಳನ್ನು ಸೋಲಿಸಿ ತಾನು ರಣರಂಗದಲ್ಲಿ ಮಡಿದನು. ಕೂಡಲೇ ಬಲ್ಲಾಳನು ಸೈನ್ಯದ ನಾಯಕತ್ವವನ್ನು ವಹಿಸಿ ಸೇವುಣ ಬಲವನ್ನು ಹಿಮ್ಮೆಟ್ಟಿಸಿದನು. ಕ್ರಿ.ಶ. 1305 ರ ವೇಳೆಗೆ ಪುನಃ ಸೇವುಣ ರಾಜ ರಾಮಚಂದ್ರ ದೇವನು ಹೊಯ್ಸಳ ರಾಜ್ಯದ ಮೇಲೆ ಆಕ್ರಮಣಕ್ಕಾಗಿ ಸೈನ್ಯ ಕಳುಹಿಸಿದನು. ಬಲ್ಲಾಳನನ್ನು ಸೆರೆಹಿಡಿದು ತರಬೇತಿ ಬೇಕೆಂದು ತನ್ನ ದಳಪತಿಗಳಿಗೆ ಆದೇಶ ನೀಡಿದನು. ಬಲ್ಲಾಳನು ಆ ವೇಳೆಗೆ ತುಂಗಭದ್ರ ತೀರದ ಕಂಪಿಲೆಯಲ್ಲಿಅಧಿಕಾರ ಸ್ಥಾಪಿಸಿದ್ದ ಕಂಪಿಲರಾಯನನ್ನು ಸೇವುಣ ಸೈನ್ಯವನ್ನು ಸೋಲಿಸಿ ಓಡಿಸಿ ಬೆಳುವೊಲ ಪ್ರದೇಶವನ್ನು ಆಕ್ರಮಿಸಿ ಮೊಕ್ಕಿಗುಂಡಿಯವರೆಗೂ ರಾಜ್ಯವನ್ನು ವಿಸ್ತರಿಸಿದನು. ತನ್ನ ತಾತ ಮುತ್ತಾತಂದಿರ ಕಾಲದ ಹೊಯ್ಸಳ ವೈಭವವನ್ನು ಸ್ಥಾಪಿಸುವ ಪ್ರಯತ್ನದಲ್ಲಿ ತಮಿಳು ನಾಡಿನತ್ತ ಗಮನ ಹರಿಸಿದನು.

### 25.6.2 *ತಮಿಳು ನಾಡಿನ ರಾಜಕೀಯ ಸಮಸ್ಯೆಗಳು ಮತ್ತು ದೆಹಲಿ ಸುಲ್ತಾನರೊಡನೆ ಸಂಘರ್ಷ ಮತ್ತು ಮಧುರ ಸುಲ್ತಾನನಿಂದ ಜೀವನ ಅಂತ್ಯ*

ವೀರ ಬಲ್ಲಾಳನು ತಮಿಳು ನಾಡಿನಲ್ಲಿ ಹೊಯ್ಸಳರ ಪ್ರಭಾವವನ್ನು ಸ್ಥಾಪಿಸುವ ಪ್ರಯತ್ನದಲ್ಲಿರುವಾಗ ದಕ್ಷಿಣ ಭಾರತಕ್ಕೆ ಹೊಸ ಉಪದ್ರವವು ತಲೆದೋರಿತು. ಕ್ರಿ.ಶ. 1311 ರಲ್ಲಿ ಅಲ್ಲಾವುದ್ದೀನನ ದಳಪತಿಯಾದ ಮಲ್ಲಿಕಾಫರನು ದಕ್ಷಿಣ ರಾಜಮನೆತನಗಳನ್ನು ಸೋಲಿಸಿ ಅಪರಿಮಿತ ಐಶ್ವರ್ಯವನ್ನು ದೋಚುವ ಉದ್ದೀಶ್ಯಕ್ಕಾಗಿ ನೇಮಕಗೊಂಡು ದೇವಗಿರಿಯ ಸೇವುಣರನ್ನು ಸೋಲಿಸಿ ದೋರಸಮುದ್ರ ಮತ್ತು ಮಧುರದತ್ತ ಮುಂದುವರಿದನು. ಕಾಫರನು ಹೊಯ್ಸಳ ಗಡಿಗಳನ್ನು ಪ್ರವೇಶಿಸುವ ವೇಳೆಯಲ್ಲಿ ವೀರ ಬಲ್ಲಾಳನು ಸೈನ್ಯ ಸಮೇತನಾಗಿ ತಮಿಳು ನಾಡಿನಲ್ಲಿದ್ದನು. ಪಾಂಡ್ಯ ರಾಜ ಕುಮಾರರು ಸಿಂಹಾಸನಕ್ಕಾಗಿ ಕಲಹದಲ್ಲಿ ತೊಡಗಿ ಅವರಲ್ಲೊಬ್ಬನು ಬಲ್ಲಾಳನ ಸಹಾಯವನ್ನು ಯಾಚಿಸಿದನು. ಇಂತಹ ಸಂದರ್ಭಕ್ಕಾಗಿ ಕಾಯುತ್ತಿದ್ದ ಬಲ್ಲಾಳನು ಮದುರೆಯತ್ತ ಧಾವಿಸಿದನು. ಮಲ್ಲಿಕಾಫರನು ದಂಡಯಾತ್ರೆಯ ಸುದ್ದಿ ತಿಳಿದೊಡನೆ ಅವನು ದೋರ ಸಮುದ್ರಕ್ಕೆ ಪ್ರಯಾಣ ಕೈಗೊಂಡು ಶತ್ರುವನ್ನು ತಡೆಯುವ ವಿಧಾನವನ್ನು ಯೋಚಿಸಿದನು. ಆ ವೇಳೆಗೆ ಹೊಯ್ಸಳ ಸೈನ್ಯವು ಗಡಿ ಪ್ರದೇಶದಲ್ಲಿ ಕಾಫರನಿಂದ ಪರಾಜಯಗೊಂಡಿತು. ಮಹಮ್ಮದೀಯ ಸೈನ್ಯವು ರಾಜಧಾನಿಯನ್ನು ಸಮೀಪಿಸಿತು. ಸುತ್ತಮುತ್ತಿನ ಪ್ರದೇಶಗಳು ಶತ್ರು ಸೈನ್ಯದ ಧಾಳಿಗೆ ಸಿಕ್ಕಿ ಪಾಳು ಬಿದ್ದವು. ಬಲ್ಲಾಳನು ಅನಿರೀಕ್ಷಿತವಾಗಿ ಒದಗಿದ ಈ ದುರ್ಭರ ಸ್ಥಿತಿಯಿಂದ ರಾಜ್ಯವನ್ನು ರಕ್ಷಿಸಲು ಕಾಫರನೊಡನೆ ಒಪ್ಪಂದಕ್ಕೆ ಒಡಂಬಡಬೇಕಾಯಿತು. ಅವನಿಗೆ ವಿಶೇ ಯುದ್ಧವನ್ನು ಮತ್ತು ಅದರ ಭೀಕರ ಪರಿಣಾಮವನ್ನು ಐಶ್ವರ್ಯವನ್ನು ನೀಡುವುದರ ಮೂಲಕ ಪರಿಹರಿಸಿದನು. ಅನಂತರ ಮಹಮದೀಯ ಸೈನ್ಯವು ಮಧುರ ಮತ್ತು ರಾಮೇಶ್ವರದವರೆಗೂ ದಾಳಿ ಮಾಡಿ ಶ್ರೀಮಂತಿಕೆಯ ಬೀಡಾಗಿದ್ದ ದೇವಾಲಯಗಳನ್ನು ಸೂರೆಮಾಡಿ ವಿಶೇಷ ಐಶ್ವರ್ಯದೊಡನೆ ಹಿಂದಿರುಗಿತು. ಹಿಂದಿರುಗಿ ಹೋಗುವಾಗ ಕಾಫರನ ಅಪೇಕ್ಷೆಯಂತೆ ವೀರ ಬಲ್ಲಾಳನು ತನ್ನ ಕುಮಾರನಾದ ನಾಲ್ಕುನೇ ಬಲ್ಲಾಳನನ್ನು ಕಾಫರನೊಡನೆ ದೆಹಲಿಗೆ ಕಳುಹಿಸಿದನು. ಅಲ್ಲಾವುದ್ದೀನ್ ಖಿಲ್ಜಿಯು ಕುಮಾರ ಬಲ್ಲಾಳನನ್ನು ಗೌರವದಿಂದ ಬರಮಾಡಿಕೊಂಡು ಅವನಿಗೆ ಉಚಿತ ಉಡುಗೊರೆಯನ್ನು ನೀಡಿ ಹಿಂದಕ್ಕೆ ಕಳುಹಿಸಿದನು. ಮಹಮ್ಮದೀಯ ದಾಳಿಯಿಂದ ದೇವಗಿರಿಯ ಸೇವುಣ ಹಾಗೂ ಮಧುರ ಪಾಂಡ್ಯ ರಾಜ ಮನೆತನಗಳು ಅಂತ್ಯಗೊಂಡವು.

ದೆಹಲಿಗೆ ಕರೆದೊಯ್ಯಲಾಗಿದ್ದ ತನ್ನ ಕುಮಾರನ ಆಗಮನದಿಂದ ವೀರಬಲ್ಲಾಳನು ಸಂತೋಷಗೊಂಡು ತನ್ನ ರಾಜ್ಯ ರಕ್ಷಣೆ ಮತ್ತು ಬಲಸಂವರ್ಧನೆಯ ಕಾರ್ಯದಲ್ಲಿ ವಿಶೇಷ ಆಸಕ್ತಿ ವಹಿಸಿದನು. ದಾಳಿಗೆ ಸಿಕ್ಕಿದ ಪ್ರದೇಶಗಳಿಗೆ ಭೇಟಿ ನೀಡಿ ಜನರಲ್ಲಿ ನೆಮ್ಮದಿಯನ್ನು ಮೂಡಿಸಿದನು. ತಮಿಳು ನಾಡಿನಲ್ಲಿ ಕೈಬಿಟ್ಟು ಹೋಗಿದ್ದ ಪ್ರದೇಶಗಳ ಮೇಲೆ ಹೊಯ್ಸಳರ ಅಧಿಕಾರವನ್ನು ಪುನಃ ಸ್ಥಾಪಿಸಿ, ಸ್ಥಿರಗೊಳಿಸುವ ಪ್ರಯತ್ನದಲ್ಲಿರುವಾಗಲೆ ಮತ್ತು ಉತ್ತರದಿಂದ ಉಪದ್ರವ ತಲೆದೋರಿತು. ಆ ವೇಳೆಗೆ ಖಿಲ್ಜಿ ಮನೆತನದ ಆಳ್ವಿಕೆ ಕೊನೆಗೊಂಡು ತುಘಲಕ್ ಮನೆತನದ ಆಳ್ವಿಕೆ ಉತ್ತರ ಭಾರತದಲ್ಲಿ ಪ್ರಾರಂಭವಾಯಿತು. ಮಹಮ್ಮದ್ ಬಿನ್ ತೊಘಲಕ್‌ನು ದಖಿನ್ ಪ್ರಸ್ಥಭೂಮಿಯವರೆಗೂ ರಾಜ್ಯವನ್ನು ವಿಸ್ತರಿಸಿದನು. ಅವನು ತನ್ನ ಹತ್ತಿರದ ಸಂಬಂಧಿ ಬಹಾವುದ್ದೀನ್‌ನನ್ನು ತನ್ನ ರಾಜ್ಯದ ದಕ್ಷಿಣ ಪ್ರದೇಶಗಳ ಮಾಂಡಲಿಕನಾಗಿ ನೇಮಿಸಿದನು. ಕ್ರಿ.ಶ. 1326 ರಲ್ಲಿ ಬಹಾವುದ್ದೀನ್ ಗುರ್ಷಾಪ್ಪನು ಮಹಮ್ಮದ್ ಬಿನ್ ತೊಘಲಕ್‌ನ ವಿರುದ್ಧ ದಂಗೆಯೆದ್ದುದರಿಂದ ಅವನನ್ನು ಶಿಕ್ಷಿಸಲು ತೊಘಲಕ್‌ನು ದೊಡ್ಡ ಸೈನ್ಯವನ್ನು ಕಳುಹಿಸಿದನು. ಬಹಾವುದ್ದೀನನು ತೊಘಲಕ್‌ನ ಸೈನ್ಯದಿಂದ ಪರಾಜಿತನಾಗಿ ರಕ್ಷಣೆಗಾಗಿ ವಾರಂಗಲ್ಲಿಗೆ ಓಡಿ ಹೋದನು. ತೊಘಲಕ್‌ನ ಸೈನ್ಯವು ಅವನನ್ನು ಹಿಂಬಾಲಿಸಿ ವಾರಂಗಲ್ಲನ್ನು ಮುತ್ತಿ ನಾಶಪಡಿಸಿತು. ಬಹಾವುದ್ದೀನನು ಅಲ್ಲಿಂದ ಕಂಪಿರಾಯನ ಆಸ್ಥಾನಕ್ಕೆ ಓಡಿಬಂದನು. ತೊಘಲಕ್‌ನ ಸೈನ್ಯ ಕಂಪಲಿಯನ್ನು ಸರ್ವನಾಶ ಪಡಿಸಿತು. ಅನಂತರ ಬಹಾವುದ್ದೀನನು ಬಲ್ಲಾಳನ ರಾಜಧಾನಿಗೆ ಧಾವಿಸಿದನು. ವಾರಂಗಲ್ ಮತ್ತು ಕಂಪಿಲಿ ಮನೆತನಗಳಿಗೆ ಒದಗಿದ ವಿನಾಶವನ್ನರಿತ ಬಲ್ಲಾಳನು ಬಹಾಮದ್ದೀನನನ್ನು ಬಂಧಿಸಿ ತೊಘಲಕ್‌ನ ಸೈನ್ಯಕ್ಕೆ ಒಪ್ಪಿಸಿದನು. ಬಹಾವುದ್ದೀನನನ್ನು ದೆಹಲಿಗೆ ಕರೆದುಕೊಂಡು ಹೋಗಿ ಅಲ್ಲಿ ಅವನನ್ನು ಚರ್ಮ ಸುಲಿಸಿ ಕೊಲ್ಲಲಾಯಿತು.

ತೊಗಲಕ್‌ನ ಆಳ್ವಿಕೆಯ ಕಾಲದಲ್ಲಿ ಹೊಯ್ಸಳ ಸಂತತಿಯ ಹೊರತಾಗಿ ದಕ್ಷಿಣ ಭಾರತದ ಎಲ್ಲ ಪ್ರಸಿದ್ಧ ರಾಜಮನೆತನಗಳೂ ನಿರ್ನಾಮವಾದವು. ದಕ್ಷಿಣ ಭಾರತವನ್ನು ಮಹಮ್ಮದೀಯರ ದಾಳಿಯಿಂದ ರಕ್ಷಿಸಲು ಬಲ್ಲಾಳನು ಪ್ರಯತ್ನಿಸಿದನು. ರಾಜ್ಯದ ಅನೇಕ ಕಡೆಗಳಲ್ಲಿ ಸುಗಮ ರಕ್ಷಣಾ ವ್ಯವಸ್ಥೆಗಾಗಿ ಅನೇಕ ಉಪರಾಜಧಾನಿಗಳನ್ನು ಸ್ಥಾಪಿಸಿದನು. ತುಳು ನಾಡಿನ ಬಾರಕನೂರು, ತಮಿಳು ನಾಡಿನ ತಿರುವಣ್ಣಾ ಮಲೈ ಮತ್ತು ತುಂಗಭದ್ರ ತೀರದ ಹೊಸ ಪಟ್ಟಣಗಳನ್ನು ಉಪರಾಜಧಾನಿಗಳಾಗಿ ಮಾಡಿಕೊಂಡು ಅಲ್ಲಿ ಬಲವಾದ ರಕ್ಷಣಾ ಪಡೆಯನ್ನು ಸ್ಥಾಪಿಸಿದನು. ಇವನು ತುಂಗಭದ್ರಾತೀರದಲ್ಲಿ ಸ್ಥಾಪಿಸಿದ ಪಟ್ಟಣವನ್ನು ಹೊರಪಟ್ಟಣ, ವಿಜಯ ವಿರೂಪಾಕ್ಷಪುರ, ಹೊಸವೀದಿ, ಹೊಸದುರ್ಗ ಎಂಬುದಾಗಿ ಶಾಸನಗಳಲ್ಲಿ ಹೆಸರಿಸಲಾಗಿದೆ. ಈ ಹೊಸ ಪಟ್ಟಣವೇ ಮುಂದೆ ವಿಜಯನಗರವೆಂದು ಪ್ರಸಿದ್ಧಿಗೆ ಬಂದಿತೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಕ್ರಿ.ಶ. 1330 ರ ವೇಳೆಗೆ ಮಧುರೆಯಲ್ಲಿ ಮಹಮ್ಮದೀಯರ ಆಳ್ವಿಕೆ ಸ್ಥಾಪನೆಯಾಯಿತು. ಅಲ್ಲಿ ಹಲವೇ ವರ್ಷಗಳಲ್ಲಿ ಅನೇಕ ಸುಲ್ತಾನರು ಅಧಿಕಾರ ಲಾಲಸೆಯಿಂದ ಕೊಲೆಗೀಡಾದರು. ಕ್ರಿ.ಶ. 1342 ರ ವೇಳೆಗೆ ಅಲ್ಲಿ ಗಯಾಸುದ್ದೀನ್ ಎಂಬುವನು ಸುಲ್ತಾನನಾದನು. ಅವನು ಹಿಂದುಗಳಿಗೆ ಉಗ್ರ ದಂಡನೆ ನೀಡುತ್ತ ಮತಾಂಧನಾಗಿದ್ದನು. ಅವನ ಉಪದ್ರವನ್ನು ಕುರಿತಾದ ವರದಿಗಳು ಬಲ್ಲಾಳನಿಗೆ ತಲುಪಿದವು. ಬಲ್ಲಾಳನು ದೊಡ್ಡ ಸೈನ್ಯದೊಡನೆ ಮಧುರದತ್ತ ಧಾವಿಸಿದನು. ಕೊಪ್ಪಂ ಕಣ್ಣಾನೂರಿನ ಬಳಿಯಲ್ಲಿ ಸುಲ್ತಾನನ ಸೈನ್ಯ ಬಲ್ಲಾಳನನ್ನು ಎದುರಿಸಿ ಸಂಪೂರ್ಣವಾಗಿ ಸೋತು ಶರಣಾಗತವಾಗಿ ಅಲ್ಲಿಂದ ಹೊರಟು ಹೋಗಲು ಹದಿನಾಲ್ಕು ದಿವಸಗಳ ಅವಧಿಯನ್ನು ಬೇಡಿತು.

ಬಲ್ಲಾಳನು ಉದಾರವಾಗಿ ಅವರ ಬೇಡಿಕೆಗೆ ಒಪ್ಪಿಗೆ ನೀಡಿದನು. ಈ ಅವಧಿಯಲ್ಲಿ ಪಕ್ಕದ ಅರಣ್ಯದಲ್ಲಿ ಹೊಯ್ಸಳ ಸೈನ್ಯವು ಶಿಬಿರವನ್ನೇರ್ಪಡಿಸಿಕೊಂಡಿತ್ತು. ಶತ್ರುಗಳ ಭೀತಿ ನಿವಾರಣೆಯಾಯಿತೆಂದು ಹೊಯ್ಸಳ ಸೈನ್ಯ ಅಜಾಗರೂಕತೆಯಿಂದಿತ್ತು. ಅಂತಹ ಸಮಯವನ್ನು ಉಪಯೋಗಿಸಿಕೊಂಡು ಸುಲ್ತಾನನ ಸೈನ್ಯ ಆಕ್ರಮಣ ಮಾಡಿತು. ಮುಂದಿನ ದುರಂತವನ್ನು ಪ್ರತ್ಯಕ್ಷದರ್ಶಿಯಾದ ಇಬಾನ್ ಯಥಾವತ್ತಾಗಿ ವಿವರಿಸಿದ್ದಾನೆ. ಇವನ ಪ್ರಕಾರ ಮಧ್ಯಾಹ್ನದ ವೇಳೆಯಲ್ಲಿ ಹೊಯ್ಸಳ ಸೈನಿಕರು ಕುದುರೆಗಳನ್ನು ಮೇಯಲು ಬಿಟ್ಟು, ವಿಶ್ರಾಂತಿ ಪಡೆಯುತ್ತಿದ್ದಾಗ ಈ ದಾಳಿ ನಡೆಯಿತು. ಮಹಮ್ಮದೀಯ ಸೈನ್ಯದ ಅನಿರೀಕ್ಷಿತ ದಾಳಿಯಿಂದ ಕಂಗೆಟ್ಟ ಹೊಯ್ಸಳ ಸೈನ್ಯವು ದಿಕ್ಕು ದಿಕ್ಕಿಗೆ ಓಡತೊಡಗಿತು. ಸುಮಾರು 80 ವರ್ಷ ವಯಸ್ಸಿನ ವೀರ ಬಲ್ಲಾಳ ಚಕ್ರವರ್ತಿ ಕುದುರೆಯೇರಿ ಸೈನ್ಯದಲ್ಲಿ ಸ್ಥೈರ್ಯ ಮೂಡಿಸುವ ಪ್ರಯತ್ನದಲ್ಲಿದ್ದಾಗ ವೈರಿಗಳಿಗೆ ಸೆರೆ ಸಿಕ್ಕಿದನು. ವೃದ್ಧ ಬಲ್ಲಾಳನನ್ನು ಮಧುರೆಗೆ ಕರೆದುಕೊಂಡು ಹೋಗಿ ಸುಲ್ತಾನನ ಮುಂದೆ ನಿಲ್ಲಿಸಲಾಯಿತು. ಸುಲ್ತಾನನು ಹೇರಳವಾದ ಧನ ಕನಕವನ್ನು ದೋರ ಸಮುದ್ರದಿಂದ ತರಿಸಿಕೊಟ್ಟರೆ ಅವನನ್ನು ಬಿಡುಗಡೆ ಮಾಡುವುದಾಗಿ ತಿಳಿಸಿದನು. ಅಪರಿಮಿತ ಐಶ್ವರ್ಯವನ್ನು ಬಲ್ಲಾಳನಿಂದ ಪಡೆದ ಕೂಡಲೇ ವೃದ್ಧ ಚಕ್ರವರ್ತಿಯನ್ನು

ಕೊಲ್ಲಿಸಿ ಅವನ ಚರ್ಮವನ್ನು ತೆಗೆಸಿ ಅದಕ್ಕೆ ದ್ರಾವಣವನ್ನು ಸಿಂಪಡಿಸಿ ಮಧುರೆಯ ಕೋಟೆಯ ಗೋಡೆಯ ಮೇಲೆ ನೇತು ಹಾಕಿಸಲಾಯಿತು. ಮೂರನೇ ವೀರ ಬಲ್ಲಾಳನು ಕೊಲೆಯಾದ ನಂತರ ಅವನ ಮಗ ವಿಜಯ ವಿರುಪಾಕ್ಷ ಬಲ್ಲಾಳನು ನಾಲ್ಕನೇ ಬಲ್ಲಾಳ ಎಂಬ ಹೆಸರಿನಿಂದ ಸಿಂಹಾಸನಕ್ಕೆ ಬಂದರೂ ಹೊಯ್ಸಳ ರಾಜ್ಯ ಅವಾಗಲೆ ಅದೃಶ್ಯವಾಗಿ ಹೋಗಿದ್ದಿತು.

ಮುಮ್ಮಡಿ ವೀರ ಬಲ್ಲಾಳನು ಪ್ರರಾಕ್ರಮದಿಂದಲೂ ವಿಚಕ್ಷಣತೆಯಿಂದಲೂ ಸಾಮ್ರಾಜ್ಯದ ರಕ್ಷಣೆಗಾಗಿ ಕೊನೆಯವರೆಗೂ ಹೋರಾಡಿ ಹೊಳಾಗಿದ್ದ ರಾಜ್ಯವನ್ನು ಒಂದು ಗೂಡಿಸಿದನು. ದಕ್ಷಿಣ ಭಾರತವನ್ನು ಮಹಮ್ಮದೀಯರ ದಾಳಿಯಿಂದ ರಕ್ಷಿಸುವುದು ಅವನ ಸಂಕಲ್ಪವಾಗಿದ್ದಿತು. ಅವನ ಸಂಕಲ್ಪ ನೆರವೇರಿತು ಎನ್ನುವಷ್ಟರಲ್ಲಿ ಅವನು ಹುತಾತ್ಮಾನಾದನು. ಆದರೆ ಅವನ ಸಂಕಲ್ಪಕ್ಕೆ ಚ್ಯುತಿ ಬರಲಿಲ್ಲ. ಅವನ ಧ್ಯೇಯ ವಿಜಯನಗರ ಸ್ಥಾಪನೆಯ ಮೂಲಕ ನೆರವೇರಿದಂತಾಯಿತು.

ಸಾಮ್ರಾಜ್ಯದ ವೈಶಾಲ್ಯವೂ, ತಮಿಳು ನಾಡಿನ ರಾಜಕೀಯದಲ್ಲಿ ಹೊಯ್ಸಳ ಸಾಮ್ರಾಟರ ವ್ಯಾಪಕವಾಗಿ ತೊಡಗಿಸಿಕೊಂಡಿದ್ದಿದು, ಸೇವುಣ-ಹೊಯ್ಸಳರ ಸಂತತಿಗಳ ನಡುವೆ ನಿರಂತರವಾಗಿ ನಡೆದ ಘರ್ಷಣೆಗಳೂ, ಸಾಮ್ರಾಜ್ಯದ ವಿಭಜನೆಯಾದುದು ಮಿಗಿಲಾಗಿ ಉತ್ತರದಿಂದ ಪ್ರಾರಂಭವಾದ ಮಹಮ್ಮದೀಯರ ಆಕ್ರಮಣಗಳೂ ಹೊಯ್ಸಳ ಸಾಮ್ರಾಜ್ಯದ ಮತ್ತು ಸಂತತಿಯ ಅವನತಿಗೆ ಪ್ರಮುಖ ಕಾರಣಗಳಾಗಿ ಪರಿಣಮಿಸಿದವು.

## 25.7 ಸಾರಾಂಶ

ಈ ಮೇಲಿನ ಘಟಕದಲ್ಲಿ ಹೊಯ್ಸಳರ ಎರಡನೆ ಹಂತದ ರಾಜಕೀಯ ಇತಿಹಾಸವನ್ನು ತಮ್ಮ ಗಮನಕ್ಕೆ ತರಲಾಗಿದೆ. ಈ ಹಂತದಲ್ಲಿ ಕಾಣಬರುವ ಅರಸರುಗಳಾದ ೧ನೇ ವೀರನರಸಿಂಹ, ಎರಡನೇ ಬಲ್ಲಾಳ, ಎರಡನೇ ವೀರ ನರಸಿಂಹ, ವೀರಸೋಮೇಶ್ವರ ಮತ್ತು ಅವನ ಕಾಲದಲ್ಲಿ ಹೊಯ್ಸಳರ ಸಾಮ್ರಾಜ್ಯದ ವಿಭಜನೆ ಹಾಗೂ ಮೂರನೇ ಬಲ್ಲಾಳನ ರಾಜಕೀಯ ಸವಾಲುಗಳನ್ನು ಪರಿಚಯಿಸಿಕೊಡಲಾಗಿದೆ. ಈ ಅವಧಿಯ ರಾಜಕೀಯ ಇತಿಹಾಸದಲ್ಲಿ ಹೊಯ್ಸಳ ರಾಜ್ಯವು ಸಾಮ್ರಾಜ್ಯವಾಗಿ ರೂಪುಗೊಂಡು ದಕ್ಷಿಣ ಭಾರತದಲ್ಲಿ ಬಲಿಷ್ಠ ರಾಜಕೀಯ ಶಕ್ತಿಯಾಗಿ ಕಾಣಿಸಿಕೊಂಡಿರುವ ವಿಷಯವನ್ನು ನೀವು ಗಮನಿಸಿದ್ದೀರಿ. ಉತ್ತರದಲ್ಲಿ ತುಂಗಭದ್ರ ನದಿಯ ಬಯಲು ಪ್ರದೇಶ ಮತ್ತು ದಕ್ಷಿಣದಲ್ಲಿ ತಮಿಳುನಾಡಿನ ಪ್ರದೇಶದ ಮೇಲೆ ಹೊಯ್ಸಳರು ತಮ್ಮ ರಾಜಕೀಯ ಪ್ರಾಬಲ್ಯವನ್ನು ಸ್ಥಾಪಿಸಿದುದನ್ನು ನಿಮ್ಮ ಗಮನಕ್ಕೆ ತರಲಾಗಿದೆ. ಆದರೆ ಮೂರನೇ ಬಲ್ಲಾಳನ ಕಾಲದಲ್ಲಿ ಸಂಭವಿಸಿದ ಉತ್ತರ ಭಾರತದ ದೆಹಲಿ ಸುಲ್ತಾನರ ಆಕ್ರಮಣವು ದೊಡ್ಡ ಸವಾಲಾಗಿ ಪರಿಣಮಿಸಿ ಕೊನೆಗೆ ದಕ್ಷಿಣದಲ್ಲಿ ಸ್ಥಾಪಿಸಲ್ಪಟ್ಟ ಮಧುರ ಸುಲ್ತಾನೇತರು ಹೊಯ್ಸಳರ ನಿರ್ಗಮನಕ್ಕೆ ಕಾರಣವಾದ ವಿಷಯವನ್ನು ನಿಮ್ಮ ಗಮನಕ್ಕೆ ತರಲಾಗಿದೆ. ಉತ್ತರದ ಮತ್ತು ದಕ್ಷಿಣದ ರಾಜಕೀಯ ಸಂಘರ್ಷದಲ್ಲಿ ಮೂರನೇ ಬಲ್ಲಾಳನು ಹೇಗೆ ಮಧುರ ಸುಲ್ತಾನರ ಮೋಸಕ್ಕೆ ಬಲಿಯಾದನೆಂಬ ಧಾರುಣ ಕತೆಯನ್ನು ಗಮನಿಸಿದ್ದೀರಿ. ಮೂರನೇ ಬಲ್ಲಾಳನ ಆದರ್ಶವನ್ನು ವಿಜಯನಗರವು ಮೈಗೂಡಿಸಿಕೊಂಡು ಜನ್ಮತಾಳಿ ತನ್ನ ರಾಜಕೀಯ ಮತ್ತು ಸಾಂಸ್ಕೃತಿಕ ಸಂಘರ್ಷವನ್ನು ಮುಂದುವರಿಸಿದ ವಿಷಯವನ್ನು ನಿಮಗೆ ಮನದಟ್ಟು ಮಾಡಿಕೊಡಲು ಈ ಘಟಕದಲ್ಲಿ ಯತ್ನಿಸಲಾಗಿದೆ.

## 25.8 ಸ್ವಪರೀಕ್ಷೆ ಪ್ರಶ್ನೆಗಳು

1. ಎರಡನೇ ವೀರ ಬಲ್ಲಾಳನ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ವಿವರಿಸಿರಿ.
2. ತಮಿಳುನಾಡಿನೊಡನೆ ಹೊಯ್ಸಳರ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ವಿವರಿಸಿರಿ.
3. ಮೂರನೇ ಬಲ್ಲಾಳನ ರಾಜಕೀಯ ಸವಾಲುಗಳನ್ನು ವಿವರಿಸಿ ಮತ್ತು ಅವುಗಳನ್ನು ಎದುರಿಸುವಲ್ಲಿ ವೈಪಲ್ಯನಾದುದೇಕೆ? ಸ್ಪಷ್ಟೀಕರಿಸಿ.

## 25.9 ಹೆಚ್ಚಿನ ಅಭ್ಯಾಸಕ್ಕಾಗಿ ಗ್ರಂಥಗಳು


1. K.R. Venkataraman : **The Hoysalas in Tamil Country**
2. R.R. Diwakar (Ed) : **Karnataka through the Ages**
   ಕರ್ನಾಟಕ ಪರಂಪರೆ (ಕನ್ನಡ)
3. ಸುರೇಂದ್ರರಾವ್ (ಸಂ) : ಕರ್ನಾಟಕ ಇತಿಹಾಸ ಸಂ2.
4. ರಂಗಸ್ವಾಮಯ್ಯ : ಕರ್ನಾಟಕದ ಸಂಕ್ಷಿಪ್ತ ಚರಿತ್ರೆ
5. D.M. Derrett : **The Hoysalas**
6. B. SheikAli (Ed) : **The Hoysalas**
7. C. Hayavadana Rao : **The Mysore Gazetteer,** Vol- II, Part- 2.

## ಟಿಪ್ಪಣಿಗಳು

# ಘಟಕ - 26

## ಹೊಯ್ಸಳರು - ಆಡಳಿತ ಮತ್ತು ಆರ್ಥಿಕ ಪರಿಸ್ಥಿತಿ

*ವಿಷಯಕ್ರಮ*


26.0 ಘಟಕದ ಉದ್ದೇಶ

26.1 ಪೀಠಿಕೆ

26.2 ಆಡಳಿತ ವ್ಯವಸ್ಥೆಯಲ್ಲಿ ರಾಜನ ಸ್ಥಾನ ಮತ್ತು ಕರ್ತವ್ಯಗಳು

26.3 ಮಂತ್ರಿ ಪರಿಷತ್ತು

26.4 ಆಡಳಿತದಲ್ಲಿ ರಾಣಿಯರು

26.5 ಯುವರಾಜ

26.6 ಪ್ರಾಂತೀಯ ಆಡಳಿತ ಪದ್ಧತಿ

26.7 ಸ್ಥಳೀಯ ಆಡಳಿತ ವ್ಯವಸ್ಥೆ

26.8 ಆರ್ಥಿಕ ಪರಿಸ್ಥಿತಿ

26.8.1 ಕೃಷಿ

26.8.2 ಗೃಹಕೈಗಾರಿಕೆ, ವಾಣಿಜ್ಯ ಮತ್ತು ವ್ಯಾಪಾರ

26.9 ಸಾರಾಂಶ

26.10 ಸ್ವಪರೀಕ್ಷೆ ಪ್ರಶ್ನೆಗಳು

26.11 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 26.0 ಘಟಕದ ಉದ್ದೇಶ

ಹೊಯ್ಸಳರ ಕಾಲದ ಆಡಳಿತ ಮತ್ತು ಆರ್ಥಿಕ ಪರಿಸ್ಥಿತಿಯನ್ನು ಕಲಿತುಕೊಳ್ಳುವುದು ಈ ಘಟಕದ ಉದ್ದೇಶವಾಗಿದೆ. ಈ ಪಾಠವನ್ನು ಅಭ್ಯಾಸಿಸಿದ ಮೇಲೆ ಕೆಳಗಿನ ವಿಷಯಗಳನ್ನು ಅರಿಯುವಿರಿ.

* ಹೊಯ್ಸಳರ ಆಡಳಿತ ವ್ಯವಸ್ಥೆಯಲ್ಲಿ ರಾಜನ ಸ್ಥಾನ ಮತ್ತು ಕರ್ತವ್ಯಗಳು; ರಾಜನು ರಾಜ್ಯದ ಪರಮಾಧಿಕಾರಿಯಾಗಿದ್ದರು ಧರ್ಮದ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುತ್ತಿದ್ದನು. ರಾಜನಿಗೆ ಸಹಾಯವಾಗಿ ಮಂತ್ರಿ ಪರಿಷತ್ತು ಹೊಯ್ಸಳರ ಕಾಲದಲ್ಲಿ ಕ್ರೀಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದ್ದಿತು.

* ರಾಜ, ಮಂತ್ರಿ ಪರಿಷತ್ತು, ರಾಣಿಯರು, ಯುವರಾಜನು ಸೇರಿ ಕೇಂದ್ರ ಸರ್ಕಾರವಾಗಿ ಕಾರ್ಯ ನಿರ್ವಹಿಸುದ್ದಿತು.

* ಹೊಯ್ಸಳ ಸಾಮ್ರಾಜ್ಯವು ಪ್ರಾಂತೀಯ ಮತ್ತು ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಹೊಂದಿದ್ದು ಕೇಂದ್ರ ಸರ್ಕಾರಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿದ್ದವು.

* ಹೊಯ್ಸಳ ಕಾಲದಲ್ಲಿ ಆರ್ಥಿಕ ವ್ಯವಸ್ಥೆಯು ತನ್ನ ಪರಿಪೂರ್ಣ ವಿಕಾಸವನ್ನು ಕಂಡಿತು.

* ಕೃಷಿ, ಕೈಗಾರಿಕೆ, ವಾಣಿಜ್ಯ, ವ್ಯಾಪಾರ, ವಿವಿಧ ಕರಕುಶಲಕರ್ಮಿಗಳು ತಮ್ಮ ನೈಪುಣ್ಯದ ಪರಕಾಷ್ಠೆಯನ್ನು ತಲುಪಿದ್ದರು.

## 26.1 ಪೀಠಿಕೆ

ಪ್ರಾರಂಭದಲ್ಲಿ ಹೊಯ್ಸಳ ರಾಜ್ಯವು ಕರ್ನಾಟಕದ ದಕ್ಷಿಣ ಭಾಗಕ್ಕೆ ಸೀಮಿತವಾಗಿದ್ದು ಕ್ರಮೇಣ ವಿಸ್ತಾರಗೊಂಡು ಕರ್ನಾಟಕದ ಹೆಚ್ಚು ಭಾಗವನ್ನು ಹಾಗೂ ತಮಿಳುನಾಡಿನ ಸ್ವಲ್ಪ ಭಾಗವನ್ನು ಒಳಗೊಂಡು ಒಂದು ಸಾಮ್ರಾಜ್ಯವಾಗಿ ಮಾರ್ಪಟ್ಟಿತು. ಇಮ್ಮಡಿ ವಿನಯಾದಿತ್ಯನ ಆಳ್ವಿಕೆಯ ಕಾಲದಿಂದಲೂ ದೋರಸಮುದ್ರ ಅಥವಾ ಇಂದಿನ ಹಳೇಬೀಡು ಮುಖ್ಯ ರಾಜಧಾನಿಯಾಗಿತ್ತು. ಬೇಲೂರು, ಅರಸಿಕೆರೆ, ಬಂಕಾಪುರ, ಲೊಕ್ಕುಂಡಿ, ಕಣ್ಣಾನೂರು, ತಿರುವಣ್ಣಾಮಲೈ ಮೊದಲಾದ ಪಟ್ಟಣಗಳು ಕಾಲ ಸನ್ನಿವೇಶಗಳಿಗನುಗುಣವಾಗಿ ಉಪನೆಲೆ ವೀಡುಗಳಾಗಿದ್ದವು. ಹೊಯ್ಸಳರ ಆಡಳಿತ ಪದ್ಧತಿಯನ್ನು ಅರಿಯಲು, ಸಹಸ್ರಾರು ಸಂಖ್ಯೆಯಲ್ಲಿ ದೊರೆತಿರುವ ಅವರ ಕಾಲದ ಶಾಸನಗಳೇ ಪ್ರಮುಖ ಆಧಾರಗಳಾಗಿವೆ. ಆರಂಭದ ಹೊಯ್ಸಳ ರಾಜರು ತಲಕಾಡಿನ ಗಂಗರ ಮತ್ತು ಕಲ್ಯಾಣದ ಚಾಳುಕ್ಯರ ಆಡಳಿತ ಪದ್ಧತಿಯನ್ನು ಅಳವಡಿಸಿಕೊಂಡಿದ್ದರು. ರಾಜ್ಯವು ವಿಸ್ತಾರವಾಗಿ, ಆಡಳಿತ ಜವಾಬ್ದಾರಿಯು ಹೆಚ್ಚಿದಂತೆಲ್ಲಾ, ಮೂಲ ವ್ಯವಸ್ಥೆಯನ್ನು ಕೈಬಿಡದೆ, ಸಂದರ್ಭಕ್ಕೆ ಸೂಕ್ತವಾದ ಬದಲಾವಣೆಗಳನ್ನೂ ಆಚರಣೆಗೆ ತಂದರು. ಆಡಳಿತ ಯಂತ್ರವು ಸರಳವಾಗಿದ್ದು ಸುವ್ಯವಸ್ಥೆಯಿಂದ ಕೂಡಿತ್ತು. ಆಡಳಿತ ಯಂತ್ರವು ಮುಖ್ಯವಾಗಿ ಮೂರು ಹಂತಗಳಿಂದ ಕೂಢಿತ್ತು. ಅತ್ಯುನ್ನತವಾದ ಅಧಿಕಾರವು ರಾಜನಿಗೆ ಸೇರಿತ್ತು. ಅವನ ಅಧಿಕಾರ ವ್ಯಾಪ್ತಿಗೆ ಇಡೀ ರಾಜ್ಯವು ಒಳಪಟ್ಟಿದ್ದಿತು. ರಾಜ್ಯವು ಅನೇಕ ವಿಭಾಗಗಳಿಂದ ಕೂಡಿದ್ದು ಅವುಗಳು ರಾಜವಂಶೀಯರ, ಸಚಿವರು ಮತ್ತು ದಂಡನಾಯಕರ ಮೇಲ್ವಿಚಾರಣೆಗೊಳಗಾಗಿದ್ದವು. ಅಂತೆಯೇ ಸಾಮ್ರಾಜ್ಯದ ಮಾಂಡಲಿಕರಿಗೆ ಒಳಾಡಿತದಲ್ಲಿ ಸ್ವಾತಂತ್ರ್ಯ ಇದ್ದರೂ ಸಾಮ್ರಾಟನ ಅಂಕೆಗೊಳಪಟ್ಟಿದ್ದರು. ಪ್ರಾಂತ್ಯಾಡಳಿತದಂತೆ ಗ್ರಾಮಾಡಳಿತವು ಗ್ರಾಮಾಧಿಕಾರಿಗಳು ಮತ್ತು ಗ್ರಾಮ ಸಭೆಗಳಿಂದ ಕೂಡಿದ್ದವು.

## 26.2 ಆಡಳಿತ ವ್ಯವಸ್ಥೆಯಲ್ಲಿ ರಾಜನ ಸ್ಥಾನ ಮತ್ತು ಕರ್ತವ್ಯಗಳು

ರಾಜನು ಆಡಳಿತದ ಸರ್ವ ಶ್ರೇಷ್ಠ ವ್ಯಕ್ತಿಯಾಗಿದ್ದನು. ರಾಜತ್ವವು ವಂಶಪಾರಂಪರ್ಯವಾಗಿದ್ದು ಹಿರಿಯ ಮಗನು ಉತ್ತರಾಧಿಕಾರಿಯಾಗಿದ್ದನು. ಸಿಂಹಾಸನಕ್ಕಾಗಿ ಈ ಸಂತತಿಯ ರಾಜಕುಮಾರರಲ್ಲಿ ಹೆಚ್ಚು ಅಂತಃ ಕಲಹಗಳು ನಡೆಯಲಿಲ್ಲ. ರಾಜನು ಸಚಿವರನ್ನೂ, ದಂಡನಾಯಕರನ್ನೂ, ಪ್ರಾಂತ್ಯಾಧಿಕಾರಿಗಳನ್ನೂ ಮತ್ತು ಇತರ ಉನ್ನತ ಅಧಿಕಾರಿಗಳನ್ನು ಆಯ್ಕೆ ಮಾಡುತ್ತಿದ್ದನು. ರಾಜನು ಸರ್ವೋಚ್ಚ ಸೇನಾಧಿಕಾರಿಯೂ, ನ್ಯಾಯಾಧಿಕಾರಿಯೂ ಆಗಿದ್ದನು. ಆದರೆ ಸ್ವೇಚ್ಛಾಧಿಕಾರಿಯಾಗಿ ವರ್ತಿಸುತ್ತಿರಲಿಲ್ಲ. ಹೊಯ್ಸಳ ಪ್ರಭುಗಳು ತಾವು ದೈವಾಂಶ ಸಂಭೂತರೆಂದು ನಂಬಿರಲಿಲ್ಲ. ಅಲ್ಲದೆ ಪ್ರಜೆಗಳ ಮೇಲ್ಮೆಯನ್ನು ಬದಿಗೊತ್ತಿ ಆಡಳಿತ ನಡೆಸುತ್ತಿರಲಿಲ್ಲ. ಪರಂಪರಾನುಗತವಾದ ಪದ್ಧತಿಗಳೂ ಸಾಮಾಜಿಕ ನೀತಿನಿಯಮಗಳೂ, ಸಚಿವ ಸಮಿತಿಯೂ, ವಿದ್ವಾಂಸ ವರ್ಗ ಹಾಗೂ ಆಡಳಿತ

ಸಂಸ್ಥೆಗಳೂ ರಾಜನ ಸರ್ವಾಧಿಕಾರಕ್ಕೆ ಇದ್ದ ಮುಖ್ಯತಡೆಗಳಾಗಿದ್ದವು. ಹೊಯ್ಸಳ ಚಕ್ರವರ್ತಿಗಳು ಕ್ರಮಗತವಾಗಿ ರೂಢಿಯಲ್ಲಿದ್ದ ಧರ್ಮಶಾಸ್ತ್ರಕ್ಕನುಗುಣವಾಗಿ ಆಳ್ವಿಕೆ ನಡೆಸಿದರು. ದುಷ್ಟ ಶಿಕ್ಷಣ ಶಿಷ್ಟ ರಕ್ಷಣೆಯು ತಮ್ಮ ಮುಖ್ಯ ಕರ್ತವ್ಯವೆಂದು ನಂಬಿದ್ದರು. ಅಲ್ಲದೆ ರಾಜ್ಯವು ಸಪ್ತಾಂಗಗಳಿಂದ ಕೂಡಿದ ವ್ಯವಸ್ಥೆಯೆಂಬ ಅರಿವು ಇದ್ದಿತು. ಆ ಕಾಲದ ಅನೇಕ ಶಾಸನಗಳಲ್ಲಿ ಮೇಲ್ಕಂಡ ವರ್ಣನೆಯು ಕಾಣಬರುತ್ತದೆ. ಮನು ಯಜ್ಞವಲ್ಕ್ಯ, ಕೌಟಿಲ್ಯ, ಬಾದರಾಯಣ ಮೊದಲಾದ ಪ್ರಾಚೀನ ಧರ್ಮ ಶಾಸ್ತ್ರಕಾರರನ್ನೂ, ರಾಜನೀತಿ ಕರ್ತೃಗಳನ್ನು ಹೆಚ್ಚು ಶಾಸನಗಳಲ್ಲಿ ಸ್ಮರಿಸಲಾಗಿದೆ.

ರಾಜರು ಯುದ್ಧಗಳ ಕಾಲದಲ್ಲಿ ಹೊರತಾಗಿ ರಾಜನು ಹೆಚ್ಚು ವೇಳೆಯನ್ನು ಪ್ರಜಾಹಿತ ಕಾರ್ಯಗಳಲ್ಲಿ ಕಳೆಯುವುದು ಆಚರಣೆಯಲ್ಲಿದ್ದಿತು. ರಾಜ್ಯದ ಮುಖ್ಯ ಸಮಸ್ಯೆಗಳನ್ನು ಸಚಿವ ದಂಡನಾಯಕರೊಡನೆ ಸಮಾಲೋಚಿಸಿ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿತ್ತು. ಕಲ್ಯಾಣದ ಚಾಳುಕ್ಯರ ಮೇಲೆ ನಡೆಸಿದ ಕಣ್ಣೆಗಾಲ ಯುದ್ಧಕ್ಕೆ ಸಂಬಂಧಿಸಿದಂತೆ ವಿಷ್ಣುವರ್ಧನನೂ ಹಾಗೂ ಮಲ್ಲಿಕಾಫರನೊಡನೆ ಸಂಧಾನ ನಡೆಸಲು ಮೂರನೇ ಬಲ್ಲಾಳನೂ ತಮ್ಮ ತಮ್ಮ ಆಪ್ತ ಸಮಾಲೋಚನಾ ಸಮಿತಿಯೊಡನೆ ಚರ್ಚಿಸಿ ನಿರ್ಧಾರ ಕೈಗೊಂಡ ನಿದರ್ಶನಗಳು ಉದಾಹರಣೆಗಳಾಗಿವೆ. ರಾಜನು ಆಗಾಗ ರಾಜ್ಯದಲ್ಲಿ ಸಂಚಾರ ಕೈಗೊಂಡು ಪ್ರಜೆಗಳ ಕುಂದುಕೊರತೆಗಳನ್ನು ಗಮನಿಸಿ ಪರಿಹಾರ ಗುರುತಿಸ ಕೊಡುವ ಪದ್ಧತಿಯೂ ರೂಢಿಯಲ್ಲಿದ್ದಿತು. ಈ ಉದ್ದೇಶ ಪಾಲನೆಗಾಗಿ ಉಪರಾಜದಾನಿಗಳನ್ನು ಸ್ಥಾಪಿಸಲಾಗಿದ್ದಿತು. ಅಂತಹ ಸಂದರ್ಭಗಳಲ್ಲಿ ವಿದ್ವಾಂಸರಿಗೂ ವಿದ್ಯಾ ಸಂಸ್ಥೆಗಳಿಗೂ ಮತ್ತು ದೇವಾಲಯಗಳಿಗೂ ಪ್ರೋತ್ಸಾಹ ನೀಡಿ ದಾನ ಧರ್ಮ ಮಾಡುವುದು ಪರಿಪಾಠವಾಗಿತ್ತು. ಹೊಯ್ಸಳರ ಕಾಲದಲ್ಲಿ ಹೆಚ್ಚು ಮಟ್ಟಿಗೆ ಬ್ರಾಹ್ಮಣರಿಗೂ, ದೇವಾಲಯಗಳಿಗೂ ವಿಶೇಷ ಪ್ರೋತ್ಸಾಹ ದೊರೆಯಿತು. ಅಗ್ರಹಾರಗಳೂ, ದೇವಾಲಯಗಳೂ, ಮಠಗಳೂ ರಾಜರ ಪ್ರೋತ್ಸಾಹದಿಂದ ಸ್ಥಾಪನೆಯಾದವು.

ಆರ್ಥಿಕ ಸುಬಿಕ್ಷತೆಗಾಗಿ ಹೊಯ್ಸಳ ಅರಸರು ಕೆರೆ ಕಟ್ಟೆ ನಿರ್ಮಾಣ ಮಾಡುವುದು ಮತ್ತು ನದಿಗಳಿಂದ ಕಾಲುವೆಗಳನ್ನುತೋಡಿ ನೀರಾವರಿ ಬೇಸಾಯಕ್ಕೆ ಪ್ರೋತ್ಸಾಹ ನೀಡುವುದು ಅವರ ಆದ್ಯಕರ್ತವ್ಯವೆಂದು ಪರಿಗಣಿಸಿದ್ದರು. ಮೂರನೇ ಬಲ್ಲಾಳನು ತನ್ನ ಎಡೆಬಿಡದ ಕಾರ್ಯಕ್ರಮದ ಮಧ್ಯೆಯೂ, ಹರಿಹರಪುರದ ಬಳಿಯಲ್ಲಿ ಕಾವೇರಿಗೆ ಅಡ್ಡಲಾಗಿ ನಿರ್ಮಿಸಿದ್ದ ಅಣೆಕಟ್ಟಿನ ದುರಸ್ತಿಯನ್ನು ಸ್ವತಃ ನಿಂತು ನೆರವೇರಿಸಿದನು. ಅರಸರು ವ್ಯಾಪಾರಕ್ಕೆ ವಿಶೇಷ ಪ್ರೋತ್ಸಾಹ ನೀಡುತ್ತಿದ್ದರು. ರಾಜ್ಯದ ಹಾಗೂ ಹೊರಗಿನ ವ್ಯಾಪಾರಿಗಳನ್ನು ಸನ್ಮಾನಿಸುವ ಪದ್ಧತಿಯನ್ನು ರೂಡಿಸಿಕೊಂಡಿದ್ದರು. ಕೇರಳದ ವ್ಯಾಪಾರಿಗಳಾದ ಕುಂಜಣಾಂಬಿ ಮತ್ತು ದಾಮೋದರ ಶೆಟ್ಟಿ ಮೊದಲಾದವರು ಹೊಯ್ಸಳ ರಾಜಧಾನಿಯಲ್ಲಿ ಬಂದು ನೆಲೆಸಿದ್ದರು. ಜ್ಞಾನಿಗಳನ್ನು, ಕುಶಲ ಕಲೆಗಾರರನ್ನು, ಶಿಲ್ಪಿಗಳನ್ನು ಆಸ್ಥಾನದಲ್ಲಿ ಸನ್ಮಾನಿಸಿ ಗೌರವ ನೀಡುವ ಪರಿಪಾಠವು ಹೊಯ್ಸಳ ಅರಸರಲ್ಲಿದ್ದಿತು.

ಸರ್ವೋಚ್ಛ ನ್ಯಾಯಾಧೀಶರಾಗಿದ್ದ ರಾಜನು ತನ್ನ ತೀರ್ಪಿಗಾಗಿ ಬಂದ ಕಾಯಿದೆಯ ಸಮಸ್ಯೆಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ ತೀರ್ಮಾನಿಸುವುದು ಆಚರಣೆಯಲ್ಲಿದ್ದಿತು. ಗ್ರಾಮಗಳ ಗಡಿ ಸಮಸ್ಯೆಗಳನ್ನು ಪರಿಶೀಲಿಸಲು ಇಮ್ಮಡಿ ಬಲ್ಲಾಳನು ಕ್ರಿ.ಶ. 1186 ರಲ್ಲಿ ಪಂಚ ಪ್ರಧಾನ ಸಮಿತಿಯೊಂದಿಗೆ ಶಿವಮೊಗ್ಗ ಜಿಲ್ಲೆಯ ಗ್ರಾಮವೊಂದಕ್ಕೆ ಭೇಟಿ ಕೊಟ್ಟು ನೀಡಿದ ತೀರ್ಮಾನವು ಒಳ್ಳೆಯ ನಿದರ್ಶನವಾಗಿದೆ. ರಾಜನು ಯುದ್ಧಗಳಲ್ಲಿ ಸ್ವತಃ ಪಾಲ್ಗೊಂಡು ಸೈನ್ಯದ ಮುಖಂಡತ್ವವನ್ನು ವಹಿಸಿ ವೀರಾವೇಶದಿಂದ ಕಾದಾಡಿ ಸೈನಿಕರನ್ನು ಹುರು ದುಂಬಿಸುವುದು ಅವನ ಕರ್ತವ್ಯಗಳೊಂದಾಗಿದ್ದಿತು. ವೀರಯೋಧರಿಗೆ ಸನ್ಮಾನ ನೀಡಲಾಗುತ್ತಿತ್ತು. ಇಮ್ಮಡಿ ವೀರಬಲ್ಲಾಳ ಮತ್ತು ಇಮ್ಮಡಿ ನರಸಿಂಹ ಮತ್ತು ಇಮ್ಮಡಿ ವೀರಸೋಮೇಶ್ವರ ಅವರು ರಣರಂಗದಲ್ಲಿ ತೋರಿದ ಶೌರ್ಯಕ್ಕೆ ಸಂಬಂಧಿಸಿದ ವಿಶೇಷ ವರ್ಣನೆಗಳು ಶಾಸನಗಳಲ್ಲಿ ಕಾಣಬರುತ್ತವೆ.

## 26.3 ಮಂತ್ರಿ ಪರಿಷತ್ತು

ಕೇಂದ್ರ ಆಡಳಿತ ಯಂತ್ರದಲ್ಲಿ ರಾಜನ ತರುವಾಯ ಮಂತ್ರಿ ಪರಿಷತ್ತು ಮಹತ್ತರ ಸ್ಥಾನ ಪಡೆದುಕೊಂಡಿದ್ದಿತು. ಕೇಂದ್ರ ಸರ್ಕಾರದ ಮುಖ್ಯ ಅಂಗಗಳಲ್ಲೊಂದು. ಹೊಯ್ಸಳರ ಮಂತ್ರಿ ಪರಿಷತ್ತಿಗೆ ಎರಡನೇ ವೀರ ಬಲ್ಲಾಳನ ಆಳ್ವಿಕೆಯ ಮಧ್ಯಭಾಗದವರೆಗೂ 'ಪಂಚ ಪ್ರಧಾನ' ಸಮಿತೆ ಎಂಬ ಹೆಸರಿದ್ದಿತು. ಮುಖ್ಯ ಸಚಿವ, ಮಹಾ ಸಂಧಿವಿಗ್ರಹಿ, ಶ್ರೀಕರುಣಾಧಿಕಾರಿ, ಮುಖ್ಯ ದಂಡನಾಯಕ ಮತ್ತು ಮಹಾಪಸಾಯಿತ ಹುದ್ದೆಗಳಲ್ಲಿದ್ದ ಸಚಿವರು ಪಂಚಪ್ರಧಾನ ಸಮಿತಿಯ ಸದಸ್ಯರಾಗುತ್ತಿದ್ದರು. ಸೇನಾಹಿರಿತನವನ್ನು ಅಧಿಕಾರಿಗಳನ್ನು

ಮೇಲ್ಕಂಡ ಹುದ್ದೆಗಳಿಗೆ ನೇಮಿಸಲಾಗುತ್ತಿತ್ತು. ಈ ಸಮಿತಿಯು ರಾಜನ ಆಪ್ತ ಆಲೋಚನಾ ಸಮಿತಿಯಾಗಿತ್ತು. ಕಾಲ ಕ್ರಮೇಣ ರಾಜ್ಯವು ಸಾಮ್ರಾಜ್ಯವಾಗಿ ಮಾರ್ಪಟ್ಟು ಹೆಚ್ಚು ಸಂಖ್ಯೆಯಲ್ಲಿ ಸಚಿವರನ್ನೂ, ದಂಡನಾಯಕರನ್ನೂ ನೇಮಿಸಿಕೊಳ್ಳಲಾಯಿತು. ಆಲೋಚನಾ ಸಭೆಯ ಸದಸ್ಯರ ಸಂಖ್ಯೆಯು ಹೆಚ್ಚಿ ಪಂಚಪ್ರಧಾನ ಎಂಬ ಹೆಸರು ರೂಡಿಯಿಂದ ಮರೆಯಾಯಿತು.

ಸಚಿವ ಮತ್ತು ದಂಡನಾಯಕ ಹುದ್ದೆಗಳಿಗೆ ವ್ಯಕ್ತಿಯನ್ನು ಆರಿಸುವಾಗ, ಶೀಲ, ಶೌರ್ಯ, ಅನುಭವ, ದಕ್ಷತೆ ಮೊದಲಾದವುಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಈ ಹುದ್ದೆಗಳು ಅನುವಂಶೀಯವಾದವುಗಳಾಗಿರಲಿಲ್ಲ. ಕೇವಲ ಒಂದೆರಡು ಸಂದರ್ಭಗಳಲ್ಲಿ ಅನುವಂಶೀಯ ನಿದರ್ಶನಗಳನ್ನು ಕಾಣಬಹುದಾಗಿದೆ. ಶಾಸನಗಳು ಹೊಯ್ಸಳರ ಕಾಲದ ಅನೇಕಾನೇಕ ಸಚಿವ ಮತ್ತು ದಂಡನಾಯಕರ ವಿವರಗಳನ್ನೊಳಗೊಂಡಿವೆ. ಹೆಚ್ಚು ಮಂದಿ ದಂಡನಾಯಕರು ಅತ್ಯಂತ ಸಮರ್ಥರೂ, ದಕ್ಷರೂ, ಅನುಭವಿಗಳೂ ಮತ್ತು ನಿಷ್ಠಾವಂತರೂ ಆಗಿದ್ದರು. ಅವರಲ್ಲಿ ಕೆಲವರು ವಿದ್ಯಾವಂತರೂ, ಪಂಡಿತರೂ ಇದ್ದರು. ಗಂಗರಾಜ, ಅಮಿತಯ್ಯ, ವೀರಯ್ಯ. ಹರಿಹರ, ಅಪ್ಪಯ್ಯ, ಗೋಪಯ್ಯ, ಪೊಲಾಳ್ಯ, ಪೆರಮಾಳ ದಂಡನಾಯಕ, ಸೋಮ, ಕಾಮೇಯ ಮೊದಲಾದ ಸಚಿವರೂ, ದಂಡನಾಯಕರೂ ರಾಜನೀತಿಜ್ಞತೆಗೂ, ಶೌರ್ಯಕ್ಕೂ, ದೇವಾಲಯ ಮತ್ತು ತಟಾಕಗಳ ನಿರ್ಮಾಣದ ಮೂಲಕ ರಾಜ್ಯದ ಪ್ರಗತಿಗೆ ದುಡಿದ ಪ್ರಸಿದ್ಧ ವ್ಯಕ್ತಿಗಳಾಗಿದ್ದರು. ಇವರು ಸಚಿವರೂ, ದಂಡ ನಾಯಕರೂ ಆಗಿರುತ್ತಿದ್ದರು. ಹಲವು ಸಂದರ್ಭಗಳಲ್ಲಿ ಅವರು ಪ್ರಾಂತ್ಯಾಧಿಕಾರಿಗಳಾಗಿ ಕಾರ್ಯ ನಿರ್ವಹಿಸಬೇಕಾಗಿತ್ತು. ಯುದ್ಧದಲ್ಲಿ ಸ್ವತಃ ರಾಜರ ಜೊತೆಯಲ್ಲಿ ಭಾಗವಹಿಸಬೇಕಾಗಿತ್ತು. ಆಲೋಚನಾ ಸಭೆಯಲ್ಲಿ ಉಚಿತವಾದ ಸಲಹೆ ನೀಡಬೇಕಾಗಿತ್ತು. ಆಡಳಿತ ಮತ್ತು ಸಾಮಾಜಿಕ ನೆಮ್ಮದಿಗಾಗಿ ತಮ್ಮ ಸೇವೆ ನೀಡಬೇಕಾಗಿತ್ತು. ಹೊಯ್ಸಳ ಕಾಲದ ಮಂತ್ರಿಗಳು ಕೆರೆಗಳನ್ನೂ, ದೇವಾಲಯಗಳನ್ನೂ ಕಟ್ಟಿಸಿದ ಹಾಗೂ ವಿದ್ಯಾ ಕೇಂದ್ರಗಳನ್ನು ತೆರೆದ ಅನೇಕ ನಿದರ್ಶನಗಳು ದೊರೆಯುತ್ತವೆ. ವಿಷ್ಣುವರ್ಧನನು ಮರಣ ಹೊಂದಿದಾಗ ಅವನ ಪುತ್ರ ನರಸಿಂಹನು ಕೇವಲ ವಿಷ್ಣುವರ್ಧನ ಬಾಲಕನಾಗಿದ್ದನು. ಸಚಿವರು ಬಾಲಕ ನರಸಿಂಹನನ್ನು ಸಿಂಹಾಸನದಲ್ಲಿ ಕೂರಿಸಿ ಅವನಿಗೆ ಆಸರೆಯಾಗಿ ನಿಂತು ಹೊಯ್ಸಳ ಸಂತತಿಯು ಮುಂದುವರಿದು ಪುರೋಭಿವೃದ್ಧಿ ಸಾಧಿಸಲು ಸಹಕಾರಿಯಾದರು.

## 26.4 ಆಡಳಿತದಲ್ಲಿ ರಾಣಿಯರು

ಹೊಯ್ಸಳರ ಆಡಳಿತ ಯಂತ್ರದಲ್ಲಿ ರಾಣಿಯರು ಜವಾಬ್ದಾರಿಯುತವಾದ ಪಾತ್ರ ವಹಿಸಿರುವುದನ್ನು ಕಾಣಬಹುದು. ಪಟ್ಟದ ರಾಣಿಗೆ ಅಗ್ರಸ್ಥಾನವಿತ್ತು. ಶಾಂತಳ ದೇವಿಯು ವಿಷ್ಣುವರ್ಧನನ ದಂಡಯಾತ್ರೆಗಳಲ್ಲಿ ಭಾಗವಹಿಸುತ್ತಿದ್ದಳು. ಅವಳು ಬಸದಿಗಳನ್ನೂ, ಗುಡಿಗಳನ್ನೂ, ಕೆರೆಕಟ್ಟೆಗಳನ್ನು ಕಟ್ಟಿಸಿ ಅಗ್ರಹಾರಗಳನ್ನು ನಿರ್ಮಿಸಿದಳು. ಸಂಗೀತ ನೃತ್ಯಗಳಿಗೆ ವಿಶೇಷ ಪ್ರೋತ್ಸಾಹ ನೀಡಿದಳು. ಒಂದನೇ ನರಸಿಂಹನ ರಾಣಿ ಏಚಲದೇವಿಯು ಆಡಳಿತದಲ್ಲಿ ಸಹಭಾಗಿಯಾಗಿದ್ದಳು. ಎರಡನೇ ಬಲ್ಲಾಳನ ರಾಣಿಯರು ಆಡಳಿತ ಮತ್ತು ಯುದ್ಧಗಳಲ್ಲಿ ಪಾಲ್ಗೊಂಡಿದ್ದರು. ಕೇತಳ ದೇವಿ ಮತ್ತು ಪದ್ಮಲದೇವಿಯ ಬೇರೆ ಬೇರೆ ನಾಡುಗಳ ಆಡಳಿತ ಮುಖ್ಯರಾಗಿದ್ದರು. ಉಮಾದೇವಿಯು ಶತ್ರು ಮಾಂಡಲಿಕರ ಮೇಲೆ ದಂಡೆತ್ತಿ ಹೋಗಿ ಸೋಲಿಸಿ ಧನಕನಕಗಳನ್ನು ಸೂರೆತಂದ ಉಜ್ವಲ ನಿದರ್ಶನವೊಂದಿದೆ. ಒಟ್ಟಿನಲ್ಲಿ ಹೊಯ್ಸಳ ಕಾಲದಲ್ಲಿ ರಾಣಿಯರು ಹೆಚ್ಚು ಹೆಚ್ಚಾಗಿ ಆಡಳಿತ ಮತ್ತು ಸಾರ್ವಜನಿಕ ಜೀವನದಲ್ಲಿ ಭಾಗವಹಿಸಿದ್ದರು. ಅವರು ದೇವಾಲಯ ಮತ್ತು ಕೆರೆಕಟ್ಟೆಗಳನ್ನು ಕಟ್ಟಿಸುತ್ತಿದ್ದರು. ದೇವಾಲಯಗಳಿಗೂ ಬ್ರಾಹ್ಮಣರಿಗೂ ವಿಶೇಷ ದಾನ ದತ್ತಿಗಳನ್ನು ನೀಡುತ್ತಿದ್ದರು. ಸಂಗೀತ ನೃತ್ಯಗಳನ್ನು ಪ್ರೋತ್ಸಾಹಿಸುತ್ತಿದ್ದರು. ಗ್ರಾಮಗಳಲ್ಲಿ ವಾರದ ಸಂತೆಗಳನ್ನು ಸ್ಥಾಪಿಸಿದರು. ಕುಶಲ ಕಲೆಗಳಿಗೆ ಪ್ರೋತ್ಸಾಹ ನೀಡಿದರು. ಆಡಳಿತ ಯಂತ್ರವು ಸೂಸುತ್ರವಾಗಿ ಮುಂದುವರಿಯಲು ಅವರು ಸಹಕಾರಿಯಾಗಿದ್ದರು.

## 26.5 ಯುವರಾಜ

ಯುವರಾಜನು ಆಡಳಿತದಲ್ಲಿ ಪಾತ್ರವಹಿಸುತ್ತಿದ್ದುದು ಹೊಯ್ಸಳ ಆಡಳಿತ ವ್ಯವಸ್ಥೆಯ ಮತ್ತೊಂದು ವೈಶಿಷ್ಟ್ಯವಾಗಿದೆ. ಹಿರಿಯ ಮಗನನ್ನು ಯುವರಾಜನನ್ನಾಗಿ ನೇಮಿಸುವುದು ರೂಢಿಯಲ್ಲಿದ್ದಿತು. ನರಸಿಂಹನಿಗೆ ಹುಟ್ಟಿದಂದಿನಿಂದಲೇ ವಿಷ್ಣುವರ್ಧನನು ಯುವರಾಜ ಪಟ್ಟ ಕಟ್ಟಿದನು. ವೀರಬಲ್ಲಾಳನೂ ಸಹ ತನ್ನ ಕುಮಾರನನ್ನು ಯುವರಾಜನನ್ನಾಗಿ ನೇಮಿಸಿದನು. ಈ ಪದ್ಧತಿ ಸಂತತಿಯ ಕೊನೆಯವರೆಗೂ ಮುಂದುವರಿಯಿತು. ಪ್ರಾಪ್ತ ವಯಸ್ಕನಾದ ಮೇಲೆ ಯುವರಾಜನು ಆಡಳಿತ ಮತ್ತು ಯುದ್ಧಗಳಲ್ಲಿ ಭಾಗವಹಿಸಿ ಅನುಭವಗಳಿಸಬೇಕಾಗಿದ್ದಿತು. ಎರೆಯಂಗ, ಎರಡನೇ ಬಲ್ಲಾಳ, ಎರಡನೇ ನರಸಿಂಹ ಮತ್ತು ಮೂರನೇ ಬಲ್ಲಾಳ ಮೊದಲಾದವರು

ಯುವರಾಜ ಪದವಿಯಲ್ಲಿರುವಾಗಲೇ ಪ್ರಾಂತ್ಯಾಡಳಿತವನ್ನು ನಿರ್ವಹಿಸುತ್ತಿದ್ದರು. ಅನೇಕ ಯುದ್ಧಗಳಲ್ಲಿ ಭಾಗವಹಿಸಿ ಜಯಗಳಿಸಿದ್ದರು. ಈ ಪದ್ಧತಿಯಿಂದ ರಾಜನಾಗುವ ವೇಳೆಗೆ ಸಾಕಷ್ಟು ಅನುಭವ ಮತ್ತು ಪರಿಶ್ರಮಗಳನ್ನು ಗಳಿಸಲು ಸಹಕಾರಿಯಾಗುತ್ತಿತ್ತು. ಈ ಪದ್ಧತಿಯು ಸಿಂಹಾಸನಕ್ಕಾಗಿ ರಾಜಕುಮಾರರಲ್ಲಿ ನಡೆಯಲ್ಲಿದ್ದ ಘರ್ಷಣೆಗಳನ್ನು ತಪ್ಪಿಸಲು ಸಹಕಾರಿಯಾಗಿತ್ತು.

ಕೇಂದ್ರಾಡಳಿತದಲ್ಲಿ ಇನ್ನೂ ಅನೇಕ ಮುಖ್ಯ ಹುದ್ದೆಗಳಿದ್ದವು. ಅರಮನೆಯ ಒಡವೆ ವಸ್ತ್ರಗಳ ಮತ್ತು ರಾಜನ ಸ್ವಂತ ಆಸ್ತಿಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಬೇರೆ ಬೇರೆ ಅಧಿಕಾರಿಗಳಿದ್ದರು. ಭೂಕಂದಾಯ ವಾಣಿಜ್ಯ ವ್ಯಾಪಾರದಿಂದ ಬರುತ್ತಿದ್ದ ತೆರಿಗೆಗಳು, ನಿಧಿ ನಿಕ್ಷೇಪ, ಗಣಿಗಳಿಂದ ಬರುತ್ತಿದ್ದ ಹುಟ್ಟುವಳಿ, ಮಾಂಡಲಿಕರಿಂದ ಸಂದಾಯವಾಗುತ್ತಿದ್ದ ಕಪ್ಪ ಕಾಣಿಕೆ ಹಾಗೂ ಯುದ್ಧಗಳಲ್ಲಿ ಲಭಿಸುತ್ತಿದ್ದ ಸೂರೆ ಮೊದಲಾದವು ರಾಜ್ಯದ ಆದಾಯ ಮೂಲಗಳಾಗಿದ್ದವು. ರಾಜರು ಆನೆಯ ಮೇಲೆ ಕುಳಿತು ಯುದ್ಧ ಮಾಡುತ್ತಿದ್ದರೆಂದು ಅನೇಕ ಶಾಸನಗಳಿಂದ ವೇದ್ಯವಾಗುತ್ತದೆ. ಆ ಕಾಲದ ಅನೇಕ ವೀರಗಲ್ಲುಗಳಲ್ಲಿ ಸಮಕಾಲೀನ ಯುದ್ದ ಚಿತ್ರಗಳನ್ನು ಬಿಡಿಸಲಾಗಿದೆ. ಬಿಲ್ಲು-ಬಾಣ, ಕತ್ತಿ, ಭರ್ಜಿ ಮೊದಲಾದವು ಮುಖ್ಯ ಆಯುಧಗಳಾಗಿದ್ದವು. ಮುಖ್ಯ ಪಟ್ಟಣಗಳನ್ನು ಕೋಟೆಗಳಿಂದ ರಕ್ಷಿಸಲಾಗುತ್ತಿತ್ತು. ಲೊಕಲಂಡಿ, ಉಚ್ಚಂಗಿ, ದುಸ್ತೆ, ತಲಕಾಡು, ಮೇಲ್ಕೋಟೆ ಮೊದಲಾದ ಪಟ್ಟಣಗಳು ಕೋಟೆಗಳಿಂದ ರಕ್ಷಿಸಲ್ಪಟ್ಟಿದ್ದವೆಂದು ಶಾಸನಗಳಿಂದ ತಿಳಿದು ಬರುತ್ತದೆ. ಕೋಟೆಗಳ ರಕ್ಷಣೆ ಮತ್ತು ಮೇಲ್ವಿಚಾರಣೆಗಾಗಿ ಇಬ್ಬರು ಮುಖ್ಯ ಅಧಿಕಾರಿಗಳು ನೇಮಕವಾಗಿರುತ್ತಿದ್ದರು.

## 26.6 ಪ್ರಾಂತೀಯ ಆಡಳಿತ ಪದ್ಧತಿ

ಸಾಮ್ರಾಜ್ಯವನ್ನು ಪ್ರಾಂತಗಳನ್ನಾಗಿ ವಿಂಗಡಿಸಲಾಗಿತ್ತು. ಪ್ರಾಂತಗಳನ್ನು ವಿಷಯ ಮತ್ತು ನಾಡು ಎಂಬ ಹೆಸರಿನಿಂದಲೂ ಕರೆಯಲಾಗಿತ್ತು. ಅವುಗಳ ವಿಸ್ತೀರ್ಣ ಮತ್ತು ಹುಟ್ಟುವಳಿಯಲ್ಲಿ ಒಂದೇ ಸಮನಾಗಿರಲಿಲ್ಲ. ಶಾಸನಗಳಲ್ಲಿ ಕಚ್ಚಾಹುನಾಡು, ಕೂಡಿಗೆ ನಾಡು, ತಳಿಗೆ ನಾಡು, ಬೆಳುವೊಲ ವಿಷಯ ಮುಂತಾದ ವಿಭಾಗಗಳು ಕಂಡು ಬರುತ್ತವೆ. ಸಚಿವ ಅಥವಾ ದಂಡನಾಯಕರನ್ನು, ರಾಜಕುಮಾರರನ್ನೂ, ರಾಣಿಯರನ್ನೂ, ನಾಡುಗಳ ಕಾರ್ಯಪಾಲಕರಾಗಿ ನೇಮಿಸಲಾಗುತ್ತಿತ್ತು. ನಾಗಸೇನ ಬೋದ, ನಾಡ ಹೆಗ್ಗಡೆ ಮುಂತಾದ ಅಧಿಕಾರ ವರ್ಗದ ಹೆಸರುಗಳು ಶಾಸನಗಳಲ್ಲಿ ದೊರೆಯುತ್ತದೆ. ಒಟ್ಟಿನಲ್ಲಿ ಈ ವಿಭಾಗಗಳ ಮುಖ್ಯಸ್ಥರು ಆಯಾ ವಿಭಾಗದಲ್ಲಿ ಶಾಂತಿ ಪಾಲನೆ, ನ್ಯಾಯ ಪಾಲನೆ, ಕೆರೆ ಕಟ್ಟೆಗಳ ನಿರ್ಮಾಣ ಮತ್ತು ದುರಸ್ತಿ ಕಾರ್ಯ ಹಾಗೂ ರಾಜ್ಯಕ್ಕೆ ಸಲ್ಲಬೇಕಾದ ತೆರಿಗೆ ಮೊದಲಾದ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿತ್ತು.

ಸಾಮ್ರಾಜ್ಯವು ಅನೇಕ ಮಾಂಡಲಿಕರನ್ನು ಹೊಂದಿತ್ತು. ಅಸಂದಿ, ಉಜಿರೆ, ಮೊದಲಾದ ಸ್ಥಳಗಳಲ್ಲಿ ಗಂಗ ಮಾಂಡಲಿಕರು, ಪಿರಿಯಾಪಟ್ಟಣ ಮತ್ತು ಕೊಡಗಿನಲ್ಲಿ ಆಳುತ್ತಿದ್ದ ಕೊಂಗಾಳ್ವರು, ಮತ್ತು ಚೆಂಗಾಳ್ವರು, ದಕ್ಷಿಣ ಕನ್ನಡ ಜಿಲ್ಲೆಯ ಆಳುಪರು ಪೊಂಬರ್ಚ ಮತ್ತು ಹೊಸಗುಂದದ ಶಾಂತಾರರು, ಹೆಂಜೇರಿನ ಚೋಳ ಮೊದಲಾದ ಮುಖ್ಯ ಮಾಂಡಲಿಕ ಮನೆತನಗಳಾಗಿದ್ದವು. ಮಾಂಡಲಿಕರ ಮೇಲ್ವಿಚಾರಣೆಗಾಗಿ ಕೇಂದ್ರದಿಂದ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಪೊಗದಿ ಸಲ್ಲಿಸುವುದು ಮತ್ತು ಯುದ್ಧ ಕಾಲದಲ್ಲಿ ರಾಜನ ಸಹಾಯಕ್ಕೆ ಧಾವಿಸುವುದು ಮುಖ್ಯ ಕರ್ತವ್ಯವಾಗಿದ್ದವು.

## 26.7 ಸ್ಥಳೀಯ ಆಡಳಿತ ವ್ಯವಸ್ಥೆ

ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಆಡಳಿತ ನಿರ್ವಹಿಸಲು ಪುರ ಸಭೆಗಳಿದ್ದವು. ದೋರಸಮುದ್ರ, ಅರಸಿಕೆರೆ, ಬಳ್ಳಿಗಾವೆ, ಶ್ರವಣಬೆಳಗೊಳಮೊದಲಾದ ಪಟ್ಟಣ ಸಭೆಗಳ ಮತ್ತು ಹಲವು ಪಟ್ಟಣ ಶೆಟ್ಟಿ ಅಥವಾ ಪುರಸಭಾ ಮುಖ್ಯರ ಹೆಸರುಗಳು ಶಾಸನಗಳಿಂದ ತಿಳಿದು ಬರುತ್ತದೆ. ವಿಷ್ಣುವರ್ಧನನ ಕಾಲದಲ್ಲಿ ಹೊಯ್ಸಳಶೆಟ್ಟಿ ಎಂಬುವನು ದೋರಸಮುದ್ರ ಪುರಸಭೆಯ ಮುಖ್ಯನಾಗಿದ್ದ. ಇಮ್ಮಡಿ ಬಲ್ಲಾಳನ ಕಾಲದಲ್ಲಿ ಮೇಚಿಸಿಟ್ಟಿ ಎಂಬುವನು ಬಳ್ಳಿಗಾಮಿ ನಗರ ಸಭೆಯ ಮುಖ್ಯನಾಗಿದ್ದನು. ಗ್ರಾಮ ಮತ್ತು ಹಳ್ಳಿಗಳಲ್ಲಿ ಗ್ರಾಮಸಭೆಗಳಿರುತ್ತಿದ್ದವು. ಮದ್ದೂರಿನ ಬಳಿಯ ಶಿವನಪುರದ ಗ್ರಾಮ ಸಭೆ ಹಾಗೂ ಟಿ. ನರಸಿಪುರದ ತಾಲ್ಲೂಕಿನ ಬನ್ನಿಯೂರು ಅಥವಾ ಇಂದಿನ ಬನ್ನೂರಿನ ಗ್ರಾಮ ಸಭೆಗಳಿಗೆ ಸಂಬಂಧಿಸಿದ ಮಾಹಿತಿಯೂ ದೊರೆಯುತ್ತದೆ. ಗ್ರಾಮಗಳಲ್ಲಿ ಗಾವುಂಡ ಅಥವಾ ಗೌಡನು ಗ್ರಾಮ ಮುಖ್ಯನಾಗಿದ್ದನು. ಲೆಕ್ಕಪತ್ರಗಳನ್ನಿಡಲು ಕರಣಿಕ ಅಥವಾ ಶೇನಾಬೋವ ಎಂಬ ಅಧಿಕಾರಿಯಿರುತ್ತಿದ್ದನು. ತಳಾರ ಅಥವಾ ತಳವಾರಿಕೆ ಹುದ್ದೆಯು ಇದ್ದುದಾಗಿ ಹಲವು ಶಾಸನಗಳಿಂದ ತಿಳಿದು ಬರುತ್ತದೆ. ಈ ಹುದ್ದೆಗಳು ವಂಶ ಪಾರಂಪರ್ಯವಾಗಿದ್ದವು.

ಈ ಅಧಿಕಾರವರ್ಗಕ್ಕೆ ಭೂಮಿಯನ್ನು ಮಾನ್ಯವಾಗಿ ಕೊಡಲಾಗಿತ್ತು. ಗ್ರಾಮ ಸಭೆಗಳು, ಗೋಮಾಳ, ದೇವಾಲಯಗಳು, ಸಾರ್ವಜನಿಕ ರಸ್ತೆಗಳು, ಕೆರೆಗಳು ಮುಂತಾದವುಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದವು. ವಿಭಿನ್ನ ವೃತ್ತಿ ತೆರಿಗೆಗಳ ಮೇಲಿನ ವೃತ್ತಿ ತೆರಿಗೆ, ಸಂತೆ ಮತ್ತು ಸರಕು ಸಾಗಾಣೆಕೆಯ ಮೇಲಿನ ಸುಂಕ ಮೊದಲಾದವು ನಗರ ಹಾಗೂ ಗ್ರಾಮ ಸಭೆಯ ಮುಖ್ಯ ಆದಾಯ ಮೂಲಗಳಾಗಿದ್ದವು.

## 26.8 ಆರ್ಥಿಕ ಪರಿಸ್ಥಿತಿ

ಹೊಯ್ಸಳರ ಕಾಲದ ಆರ್ಥಿಕ ಪರಿಸ್ಥಿತಿಯನ್ನು ತಿಳಿಯಲು ಶಾಸನಗಳು ಅತ್ಯಮೂಲ್ಯ ಆಧಾರಗಳಾಗಿವೆ. ಅವು ಕೃಷಿ, ಕೈಗಾರಿಕೆ, ವಾಣಿಜ್ಯ ಮತ್ತು ವ್ಯಾಪಾರ ಚಟುವಟಿಕೆ ಮೇಲೆ ಬೆಳಕನ್ನು ಚಲ್ಲುತ್ತವೆ. ಕೃಷಿಯು ಪ್ರಧಾನ ವೃತ್ತಿಯಾಗಿದ್ದಿತು. ಇದರ ಜೊತೆಗೆ ಅನೇಕ ಉಪಕಸುಬು ಮತ್ತು ವೃತ್ತಿಗಳಲ್ಲಿ ಜನರು ತೊಡಗಿದ್ದರು. ಅವುಗಳಲ್ಲಿ ತೆಲ್ಲಿಗರು, ಬಣ್ಣ ಹಾಕುವವರು, ನೇಯ್ಗೆಯವರು, ಕಲ್ಲುವಡ್ಡರು, ಆಭರಣ ಮಾಡುವವರು, ಕುಂಬಾರರು, ಬುಟ್ಟಿ ಮಾಡುವವರು, ಬಡಿಗಿಗಳು, ಬೇಡರು, ದೋಣಿ ನಡೆಸುವವರು, ಮಡಿವಾಳ ಮತ್ತು ವ್ಯಾಪಾರಿಗಳು ಇತ್ಯಾದಿ. ಈ ವಿವಿಧ ವೃತ್ತಿಗಳ ಮೇಲೆ ತೆರಿಗೆ ವಿಧಿಸಿರುವುದು ಶಾಸನಗಳಲ್ಲಿ ನಮೂದಿಸಲಾಗಿದೆ.

### *26.8.1* ಕೃಷಿ

ಭೌಗೋಳಿಕವಾಗಿ ಹೊಯ್ಸಳ ರಾಜ್ಯವನ್ನು ಮಲೆನಾಡು ಮತ್ತು ಬಯಲ್‌ನಾಡು ಪ್ರದೇಶಗಳಾಗಿ ವಿಭಾಗಿಸಬಹುದು. ಹೊಯ್ಸಳ ಸಾಮ್ರಾಜ್ಯವು ಮೂರು ಪ್ರಮುಖ ನದಿಗಳಾದ ಕೃಷ್ಣ, ತುಂಗಭದ್ರ, ಕಾವೇರಿ ನದಿಬಯಲುಗಳು ಮತ್ತು ಅವುಗಳ ಉಪನದಿಗಳನ್ನು ಒಳಗೊಂಡಿದ್ದಿತು. ಈ ನದಿಗಳು ಮತ್ತು ಅವುಗಳ ಉಪನದಿಗಳು ಕೃಷಿಗೆ ಅಭಿವೃದ್ಧಿಗೆ ಪೂರಕವಾಗಿದ್ದವು. ಆಗಿನ ಕಾಲದಲ್ಲಿ ಬಯಲು ನಾಡು ಪ್ರದೇಶದಲ್ಲಿ ಮಳೆಯು ಅಧಿಕವಾಗಿದ್ದಿತು. ಮಣ್ಣಿನ ಫಲವತ್ತತೆ ಮತ್ತು ರಾಜ್ಯದ ಸಂಮೃದ್ಧಿ ಬಗೆಗೆ ಶಾಸನಗಳು ವಿಶೇಷ ಮಾಹಿತಿಯನ್ನು ನೀಡುತ್ತವೆ. ಹೊಯ್ಸಳ ಅರಸರು ಕೃಷಿಯ ಮಹತ್ವವನ್ನು ಅರಿತ್ತಿದ್ದು ನೀರಾವರಿ ಸೌಲಭ್ಯವನ್ನು ಒದಗಿಸಲು ವಿಶೇಷ ಪ್ರೋತ್ಸಾಹ ನೀಡುತ್ತಿದ್ದರು. ತಾತ್ವಿಕವಾಗಿ ರಾಜನು ಭೂ ಒಡೆಯನಾಗಿದ್ದರೂ ವಾಸ್ತವದಲ್ಲಿ ಭೂಹಿಡುವಳಿಯ ವಿಷಯದಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ನಿಗಧಿತ ಭೂಗಂದಾಯ ಅಥವಾ ಕೃಷಿ ಉತ್ಪನ್ನದ ಹೆಚ್ಚುವರಿ ನಿಗಧಿತ ಮೊತ್ತ ಸರ್ಕಾರಕ್ಕೆ ಅಥವಾ ಭೂಮಾಲೀಕರಿಗೆ ಸಂದಾಯವಾದರೆ ರಾಜರ ಹಸ್ತಕ್ಷೇಪಕ್ಕೆ ಅವಕಾವಿರಲಿಲ್ಲ. ಸಾಮಾನ್ಯವಾಗಿ ಭೂಒಡೆತನದ ಹಕ್ಕು ಪ್ರತಿಷ್ಠಿತ ವರ್ಗದ ಹಿಡಿತದಲ್ಲಿದ್ದು ರೈತನು ಉಳುವ ಹಕ್ಕನ್ನು ಮಾತ್ರ ಹೊಂದಿದ್ದನು. ಭೂಮಾಲೀಕರು ಭೂಮಿಯನ್ನು ಮಾರುವ ಅಥವಾ ಅಡಮಾನ ಮಾಡಬಹುದಾಗಿದ್ದಿತು. ಭೂಮಾಲೀಕನು ಅಷ್ಟಭೋಗ ಹಕ್ಕುಗಳನ್ನು ಹೊಂದಿದ್ದನು. ಭೂಮಿಯನ್ನು ಮಾರಾಟ ಮಾಡುವಾಗ ಭೂಮಾಲೀಕನ ಜೊತೆಗೆ ಅವರ ಮಕ್ಕಳ ಸಮ್ಮತಿ ಅವಶ್ಯಕವಾಗಿದ್ದಿತು. ಕೃಷಿ ಭೂಮಿಯನ್ನು ಖಿಷ್ಕಿ, ತರಿ, ಮತ್ತು ಬಾಗಾಯ್ತು ಎಂಬುದಾಗಿ ವರ್ಗೀಕರಿಸಿ ಫಲವತ್ತತೆಯ ಆಧಾರದ ಮೇಲೆ ಕಂದಾಯವನ್ನು ನಿಗಧಿಪಡಿಸಲಾಗುತ್ತಿತ್ತು. ಭೂಮಿಯನ್ನು ಅಳತೆ ಮಾಡಲು ಬಿದುರಿನ ಕಂಬ, ಮತ್ತಾರು, ಸೊಲಗೆ ಮುಂತಾದ ಸಾಧನಗಳನ್ನು ಬಳಸುತ್ತಿದ್ದರು. ಧಾನ್ಯವನ್ನು ಅಳತೆ ಮಾಡಲು ಬಳ್ಳ, ಕೊಳಗ, ಖಂಡುಗ ಮಾನಗಳನ್ನು ಬಳಸಲಾಗುತ್ತಿದ್ದಿತು. ಜಾನುವಾರುಗಳು ರೈತನ ಸಂಪತ್ತಿನ ಪ್ರಮುಖ ಅಂಶಗಳಾಗಿದ್ದವು. ಹಸು, ಎಮ್ಮೆ, ಕತ್ತೆ, ಕುರಿ, ಮೇಕೆಗಳು ಅನೇಕ ಶಾಸನಗಳಲ್ಲಿ ಉಲ್ಲೇಖಿತವಾಗಿರುವುದನ್ನು ಗಮನಿಸಬಹುದು. ಹಾಲು ಮತ್ತು ಇತರ ಉತ್ಪನ್ನಗಳಿಗಾಗಿ ಹಸು ಎಮ್ಮೆಗಳನ್ನು ಸಾಕಲಾಗುತ್ತಿತ್ತು. ಕೃಷಿ ಬೇಸಾಯಕ್ಕೆ ಜಾನುವಾರುಗಳ ಗೊಬ್ಬರ ಅತ್ಯವಶ್ಯಕವಾಗಿದ್ದು ಅವುಗಳ ಪಾಲನೆಗೆ ವಿಶೇಷ ಗಮನ ನೀಡಲಾಗುತ್ತಿದ್ದಿತು. ಎತ್ತುಗಳನ್ನು ಉಳಲು ಮತ್ತು ಬಂಡಿ ಎಳೆಯಲು ಬಳಸಲಾಗುತ್ತಿದ್ದಿತು. ಆನೆ, ಕತ್ತೆ ಮತ್ತು ಎತ್ತಿನ ಗಾಡಿಗಳು ಅಂದಿನ ಕಾಲದ ಸಾರಿಗೆಯ ಪ್ರಮುಖ ಸಾಧನವಾಗಿದ್ದವು.

ಹೊಯ್ಸಳ ಕಾಲದಲ್ಲಿ ರಾಜ್ಯದ ಆದಾಯ ಸಂಗ್ರಹಿಸುವಾಗ ಭೂಮಿಯ ಉತ್ಪಾದಕ ಶಕ್ತಿ ಹಾಗೂ ಭಿತ್ತನೆ ವ್ಯಾಪ್ತಿಗಳನ್ನು ಪರಿಗಣಿಲಾಗುತ್ತಿದ್ದಿತು. ಭೂಮಿಯ ಅಳತೆಯಲ್ಲಾಗಲಿ, ತೆರಿಗೆ ನಿಗಧಿಯಲ್ಲಾಗಲಿ ಏಕರೂಪತೆ ಕಂಡು ಬರುವುದಿಲ್ಲ. ಅಂತಹ ವಿವರಗಳನ್ನು ಸ್ಥಳೀಯ ರೂಢಿಗಳು ಮತ್ತು ಸಂಪ್ರದಾಯಗಳಿಗೆ ಬಿಡಲಾಗುತ್ತಿತ್ತು. ಹೊಯ್ಸಳ ಸಾಮ್ರಾಜ್ಯದಲ್ಲಿ ಒಂದು ಹಳ್ಳಿಯ ಕೃಷಿಕರು ಅಥವಾ ಭೂಮಾಲೀಕರು ಕೊಡಬೇಕಾದ ತೆರಿಗೆಗಳ ಪಟ್ಟಿಯಲ್ಲಿ ಕುಳ (ನೇಗಿಲು) , ಉಳುವರಿ(ಉಳುಮೆಯ ತೆರಿಗೆ), ಕಿರುಕುಳ (ಕಿರು ಅಥವಾ ಹೆಚ್ಚಿನ ನೇಗಿಲ ತೆರಿಗೆ) ಎಂಬ ಪದಗಳು ಭೂ ತೆರಿಗೆಯನ್ನು ಊಚಿಉವಂತೆ ತೋರುತ್ತದೆ. ಈ ಮೂಲದಿಂದ ಎಷ್ಟು ಉತ್ಪನ್ನವನ್ನು ಸಂಗ್ರಹಿಸಲಾಗುತ್ತಿದ್ದಿತೆಂದು ಶಾಸನಗಳು ಖಚಿತವಾಗಿ ಬೇರೆ ಬೇರೆಯಾಗಿ ಹೇಳುವುದಿಲ್ಲ. ಉದಾಹರಣೆ ಕ್ರಿ.ಶ. 1188 ರ ಒಂದು ಶಾಸನವು ಇಡೀ ಗ್ರಾಮದಿಂದ ಬರಬೇಕಾದ ತೆರಿಗೆ 400 ಗದ್ಯಾಣಗಳೆಂದು ಹೇಳುತ್ತದೆ.

ಶಾಸನಗಳು ಅಂದಿನ ಕಾಲದ ಬೆಳೆಗಳ ಬಗ್ಗೆ ವಿವರಣೆಗಳನ್ನು ನೀಡುತ್ತವೆ. ಭತ್ತ, ಜೋಳ, ಕಬ್ಬು, ಎಳ್ಳು, ಅಡಿಕೆ, ವಿಳ್ಯೆದೆಲೆ, ತೆಂಗು, ಮಾವು, ಕಿತ್ತಳೆ, ಬಾಳೆ, ಹುಣಿಸೆ, ಹತ್ತಿ, ಏಲಕ್ಕಿ, ಕಪ್ಪು ಮೆಣಸು ಮತ್ತು ಶುಂಠಿಗಳನ್ನು ಪದೆ ಪದೆ ಶಾಸನಗಳಲ್ಲಿ ಹೆಸರಿಸಲಾಗಿದೆ. ಅರಸಿಕೆರೆಯ, ಕೆರೆಯ ಅಚ್ಚು ಕಟ್ಟಿನಲ್ಲಿ ವರ್ಷಂಪ್ರತಿ ಎರಡು ಭತ್ತದ ಫಸಲನ್ನು ಬೆಳೆಯಲಾಗುತ್ತಿತ್ತೆಂದೂ ಅಲ್ಲಿ ಬೆಳೆಯುತ್ತಿದ್ದ ಗಂಧಶಾಲಿ ಭತ್ತದ ಅಕ್ಕಿಯು ಸುವಾಸನೆಗೂ ರುಚಿಗೂ ಪ್ರಸಿದ್ಧವಾಗಿತ್ತೆಂದೂ ಶಾಸನವೊಂದರಿಂದ ತಿಳಿದು ಬರುತ್ತದೆ.

ಹೊಯ್ಸಳ ರಾಜ್ಯಾಡಳಿತವು ಕೃಷಿ ಸಂಪನ್ಮೂಲಗಳ ಅಭಿವೃದ್ಧಿಗೊಳಿಸುವ ಮೂಲಕ ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳುತ್ತಿತ್ತು. ಅರಸರು ನೀರಾವರಿ ಕಾರ್ಯವನ್ನು ಕೈಗೆತ್ತಿಕೊಂಡು ನಿರ್ಮಿಸಿ, ಜೋಪಾನವಾಗಿ ನೋಡಿಕೊಳ್ಳುವುದು. ಅವರ ಮಾದರಿಯನ್ನು ದಂಡನಾಯಕರು, ಪ್ರಭುಗೌಡರು, ಹೆಗ್ಗಡೆಗಳು ಮಾತ್ರವಲ್ಲ ಇತರ ವರ್ತಕ ವರ್ಗವೂ ಅನುಸರಿಸುತ್ತಿದ್ದಿತು. ನೀರಾವರಿಗೋಸ್ಕರ ಕೆರೆ, ಬಾವಿ, ಕಟ್ಟೆ, ನಾಲೆ ನಿರ್ಮಿಸುವುದು ಬಹು ಶ್ರೇಷ್ಠವಾದ ಧರ್ಮಕಾರ್ಯವೆಂದು ಅಂದಿನ ಸಮಾಜವು ಪರಿಗಣಿಸುತ್ತಿದ್ದಿತು. ಇಂತಹ ಬೇರು ಬಿಟ್ಟ ಧಾರ್ಮಿಕ ನಂಬಿಕೆಗಳು ಅರಸರಿಗೂ, ಇತರರಿಗೂ ಸಮಾನವಾಗಿಯೇ ಲಾಭಕರವಾಗಿದ್ದಿತು. ಕಾವೇರಿ, ಕಪಿಲಾ, ನೇತ್ರಾವತಿ, ತುಂಗಭದ್ರಾ ಮತ್ತು ಯುಗಚಿ ನದಿ ಕಣಿವೆಗಳಲ್ಲಿ ಮತ್ತು ಮುಖಜ ಭೂಮಿಗಳಲ್ಲಿ ಕೃಷಿ ಭೂಮಿಗೆ ಆ ನದಿಗಳಿಂದ ತೋಡಿದ ಕಾಲುವೆ, ಅಥವಾ ನಾಲೆಗಳ ಮೂಲಕ ನೀರು ಒದಗುತ್ತಿದ್ದಿತು. ಬೆಟ್ಟದಿಂದ ಇಳಿಯುವ ಸಣ್ಣ ತೊರೆಗಳನ್ನೂ ಕಾಲುವೆಗಳ ಮೂಲಕ ಗದ್ದೆಗೆ ಹರಿಯುವಂತೆ ಮಾಡಿ ನೀರಾವರಿಗಾಗಿ ಉಪಯೋಗಿಸಲಾಗುತ್ತಿದ್ದಿತು. 1132 ರ ಒಂದು ಶಾಸನವು ಬೆಟ್ಟದಿಂದ ಹರಿಯುವ ಒಂದು ತೊರೆಯ ನೀರಿನಿಂದ ಬೇಸಾಯ ಮಾಡಿ ಭತ್ತ ಮತ್ತು ಕಬ್ಬು ಬೆಳೆಯಲಾಗುತ್ತಿದ್ದಿತೆಂದು ಹೇಳುತ್ತದೆ. ಕ್ರಿ.ಶ. 1300 ರ ಒಂದು ಶಾಸನವು ಹೊಯ್ಸಳರ ರಾಜರು ಕಾಲುವೆ ಬೇಸಾಯದಲ್ಲಿ ಆಸಕ್ತಿ ತೆಗೆದುಕೊಂಡಿದ್ದುದಕ್ಕೆ ಉತ್ತಮ ನಿದರ್ಶನವಾಗಿದೆ. ಅದು ರಾಜಧಾನಿ ದೋರಸಮುದ್ರದ ಬಳಿ ಯಗಚಿ ನದಿಯಿಂದ ತೋಡಿದ ನಾಲೆಯ ವಿಷಯವನ್ನು ತಿಳಿಸುತ್ತದೆ. ಆ ನಾಲೆಯನ್ನು ಎರಡು ಉದ್ದೇಶಗಳಿಗಾಗಿ ಬಳಸಲಾಗುತ್ತಿತ್ತು. (1) ದೋರಸಮುದ್ರಕ್ಕೆ ಅಗತ್ಯವಾಗಿದ್ದಷ್ಟು ನೀರನ್ನು ಒದಗಿಸುವುದು ಹಾಗೂ (2) ರಾಜಧಾನಿಯ ಸುತ್ತ ಬೇಸಾಯ ಮಾಡಲು ನೀರು ಹಾಯಿಸುವುದು.

ನದೀ ಕಣಿವೆಗಳು ಮತ್ತು ಮುಖಜ ಭೂಮಿಗಳ ಹೊರತು ಪಡಿಸಿದರೆ ರಾಜ್ಯದ ಮಿಕ್ಕ ಭಾಗಗಳು ಬಹುತೇಕ ಕೆರೆಗಳು ಮತ್ತು ಭೂಮಿಯಲ್ಲಿ ಆಳವಾಗಿ ಅಗೆದ ಬಾವಿಗಳನ್ನು ಅವಲಂಬಿಸಿದ್ದವು. ಹೊಯ್ಸಳ ಶಾಸನಗಳಲ್ಲಿ ಕೆರೆ ಬೇಸಾಯದ ಗದ್ದೆಗಳ ಉಲ್ಲೇಖ ಪದೆ ಪದೇ ಬರುತ್ತದೆ. ಹೀಗೆ ಮುಂಗಾರು ಮಳೆಯ ನೀರನ್ನು ಸಂಗ್ರಹಿಸಿ ಬೇಸಾಯಕ್ಕೆ ಉಪಯೋಗಿಸಲಾಗುತ್ತಿತ್ತು. ರಾಜರು ಮತ್ತು ಅಧಿಕಾರಿಗಳು ನೀರಾವರಿ ಕಾರ್‍ಯವನ್ನು, ವಿಶೇಷವಾಗಿ ಕೆರೆಗಳನ್ನು ರಾಜ್ಯದ ವಿವಿಧ ಭಾಗಗಳಲ್ಲಿ ನಿರ್ಮಿಸಿದುದಕ್ಕೆ ಹಲವಾರು ನಿದರ್ಶನಗಳಿವೆ. ವಿನಯಾದಿತ್ಯನು (1062) ದೋರಮುದ್ರದಲ್ಲಿದ್ದ ಕೆರೆಗೆ ಒಂದು ಕಟ್ಟೆಯನ್ನು ನಿರ್ಮಿಸಿದನು. ವಿಷ್ಣುವರ್ಧನನ ಕಾಲದಲ್ಲಿ ಕಟ್ಟಿದ ವಿಷ್ಣುಸಮುದ್ರ, ಕೋಲಾರ ಜಿಲ್ಲೆಯ ಬೇತ ಮಂಗಲ ಕೆರೆಗಳು ಇಂದಿಗೂ ಹಾಗೆಯೇ ಉಳಿದಿವೆ. ಒಂದನೇ ನರಸಿಂಹನ ಕಾಲದಲ್ಲಿ ಶ್ರೀರಂಗ ಪಟ್ಟಣ ತಾಲ್ಲೋಕಿನ ಹೆರಗು ಕಾಲುವೆಯ ದುರಸ್ತಿ ಮತ್ತು ವಿಸ್ತರಣಾ ಕಾರ್ಯವು ನಡೆಯಿತು. ವೀರ ಬಲ್ಲಾಳನ ಕಾಲದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಕೆರೆಗಳು ನಿರ್ಮಾಣವಾದವು. ರೈತರ ಉಪಯೋಗಕ್ಕಾಗಿ ಬೀಜಾವರಿಯನ್ನೂ, ಹಣವನ್ನು ಸಾಲವಾಗಿ ಮಂಜೂರು ಮಾಡುತ್ತಿದ್ದ ಪದ್ಧತಿ ಜಾರಿಯಲ್ಲಿತ್ತು. ವೀರಬಲ್ಲಾಳ ಚಕ್ರವರ್ತಿಯು ಐವತ್ತು ಜನ ರೈತರಿಗೆ ಬಿತ್ತನೆಯ ಬೀಜವನ್ನು ತಲಾ ಐವತ್ತು ಗದ್ಯಾಣಗಳನ್ನು ಬೇಲೂರಿನಲ್ಲಿ ನೀಡಿದ ಸಂಗತಿಯು ಅಲ್ಲಿನ ಶಾಸನವೊಂದರಿಂದ ತಿಳಿದು ಬರುತ್ತದೆ. ಪ್ರಧಾನಿ ವೀರದಂಡನಾಯಕನು ಕಾಡನ್ನು ಕಡಿದು ಕಟ್ಟಿಸಿದ ವೀರಬಲ್ಲಾಳಪುರದಲ್ಲಿ ನಾಲ್ಕು ಕೆರೆಗಳನ್ನು ನಿರ್ಮಿಸಿದನು. ಮಹಾ ಪ್ರಧಾನ, ಸರ್ವಾಧಿಕಾರಿ, ದಂಡನಾಯಕ ಬಿಟ್ಟಿಮಯ್ಯನು ಒಂದು ಕೆರೆಯನ್ನು ನಿರ್ಮಿಸಿದನು. ಹೊಯ್ಸಳ ಆಡಳಿತವು ಕೆರೆಯ ದುರಸ್ತಿಗೂ ಸಾಕಷ್ಟಾಗಿ ಮಾನ ಕೊಟ್ಟಿದ್ದಿತು. ಒಂದು ಏರಿಯಲ್ಲಿ ಬಿರುಕು ಉಂಟಾದಾಗ ದಂಡನಾಯಕ ಚೋಳ ಮಯ್ಯನೆಂಬುವನು ಅದನ್ನು ದುರಸ್ತಿ ಪಡಿಸಿದನು. ಮಹಾ ಪ್ರಧಾನ ದಂಡನಾಯಕ ಸ್ಥಾನದ ಇನ್ನೊಬ್ಬ ಅಧಿಕಾರಿಯೂ ಅರಸಿಕೆರೆಯಲ್ಲಿದ್ದ ಕೆರೆಯನ್ನು ದುರಸ್ತುಪಡಿಸಿದನು. ಅದೇ ರೀತಿಯಲ್ಲಿ ಹೊಯ್ಸಳ ಅರಸ ವೀರನರಸಿಂಹನು ಹರಹು ನೀರಾವರಿ ನಾಲೆಯನ್ನು ರಿಪೇರಿ ಮಾಡಿಸಿದನು. ಈ ರೀತಿ ಹೊಯ್ಸಳ ಸರಕಾರವು ಕೃಷಿ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸಲಾಗುತ್ತಿದ್ದಿತು.

ಹೊಯ್ಸಳರ ಕೃಷಿ ನೀತಿಯ ಇನ್ನೊಂದು ಮುಖ್ಯವಾದ ಅಂಶವೆಂದರೆ ಬಂಜರು ಭೂಮಿಯನ್ನು ಸಾಗುವಳಿಗೆ ತರುವ ಪ್ರಯತ್ನ. ಶಾಸನಗಳ ಅಧ್ಯಯನದಿಂದ ಹೊಯ್ಸಳ ರಾಜರು ಬಂಜರಾಗಿದ್ದ ನೆಲವನ್ನು ಕ್ರಮೇಣ ಕೃಷಿಯೋಗ್ಯವನ್ನಾಗಿ ಮಾಡಿ ಉಳುಮೆಗೆ

ಒಳಪಡಿಸುವ ಕೆಲಸವನ್ನು ತೆರಿಗೆ ವಿನಾಯಿತಿಗಳ ಮೂಲಕ ಪ್ರೋತ್ಸಾಹಿಸುತ್ತಿದ್ದರು. ಈ ನೀತಿಯು ಮುಂದೆ ರಾಜಾಯದ ಹೆಚ್ಚಳಕ್ಕೆ ಕಾರಣವಾಗುತ್ತಿದ್ದಿತು. ನೀರಾವರಿಯ ನೀತಿಯಂತೆ ಇಲ್ಲಿಯೂ ಸರಕಾರವು ಕಾಡನ್ನು ಕಡಿದು ಹೊಸ ಹಳ್ಳಿಗಳನ್ನು ಸ್ಥಾಪಿಸುವುದಕ್ಕೆ ಕೆರೆಗಳನ್ನೂ, ದೇವಾಲಯಗಳನ್ನೂ ಕಟ್ಟಿಸುವುದಕ್ಕೆ ಮುಂದಾಗುತ್ತಿದ್ದಿತು. ಒಂದು ಶಾಸನದಲ್ಲಿ ಮಹಾಪ್ರಧಾನ ಸರ್ವಾಧಿಕಾರಿ ವೀರಬಲ್ಲಾಳಪುರ ಎಂಬ ಹೆಸರಿನಲ್ಲಿ ಒಂದು ಗ್ರಾಮವನ್ನು ಸ್ಥಾಪಿಸಿ ಅಲ್ಲಿ ಅನೇಕ ಕೆರೆಗಳನ್ನು ನಿರ್ಮಿಸಿದನು. ಇದೇ ರೀತಿಯಲ್ಲಿ ವರ್ತಕರು, ಗ್ರಾಮ ಸಭೆಗಳು, ಗ್ರಾಮದ ಗಣ್ಯಜನರು, ಅಗ್ರಹಾರದ ಮಹಾಜನರು ಕೂಡ ಈ ಕಾರ್ಯದಲ್ಲಿ ತೊಡಗುತ್ತಿದ್ದರು.

### *26.8.2 ಗೃಹ ಕೈಗಾರಿಕೆ, ವಾಣಿಜ್ಯ ಮತ್ತು ವ್ಯಾಪಾರ*

ಕೃಷಿ ಉದ್ಯಮದ ಜೊತೆಗೆ ಅನೇಕ ಕೈಕಸುಬು, ವೃತ್ತಿಗಳು, ಕರಕುಶಲ ಉದ್ಯಮಿಗಳು ಕೈಗಾರಿಕಾ ಬೆಳವಣಿಗೆಗೆ ಸಹಕಾರಿಯಾಗಿರುವುದನ್ನು ಕಾಣಬಹುದು. ಇವು ಕೃಷಿಯೇತರ ಉದ್ಯಮಿಗಳಾಗಿದ್ದು ತಮ್ಮ ತಮ್ಮ ಜಾತಿ ಮತ್ತು ಉಪಜಾತಿಗಳ ವೃತ್ತಿ ಕಸುಬುಗಳಲ್ಲಿ ಕೌಶಲ್ಯ ಮತ್ತು ನೈಪುಣ್ಯತೆಯನ್ನು ಸಾಧಿಸಿರುವುದು ಈ ಕಾಲದಲ್ಲಿ ಕಾಣಬಹುದು. ತೆರಿಗೆಗಳನ್ನು ವಿವರಿಸುವ ಹಲವು ಶಾಸನಗಳಲ್ಲಿ ಬಣ್ಣಿಗೆ, ಮಗದೆರೆ, ಸಾದದೆರೆ, ಅಸಗದೆರೆ, ಮೇದಗೆದೆರೆ, ಕುಂಬಾರದೆರೆ, ಪನ್ನಾಯಗೆರೆ, ಉದವಲುಡೆರೆ, ಗಾಣದೆರೆ ಮೊದಲಾದ ವಿವರಣೆಗಳಿವೆ. ಆದ್ದರಿಂದ ನೂಲುವುದು, ನೇಯುವುದು ಬಟ್ಟೆಗಳಿಗೆ ಬಣ್ಣ ಹಾಕುವುದು, ಎಣ್ಣೆ ಉತ್ಪನ್ನ ಮೊದಲಾದ ಹಲವಾರು ಕೃಷಿಯೇತರ ಕಸುಬುಗಳು ಪ್ರಗತಿ ಪಥದಲ್ಲಿದ್ದವು. ಹಳೇಬೀಡಿನ ಶಾಸನವೊಂದರಲ್ಲಿ ಚಿಪ್ಪಿಗರ ಸಂಘ ಹೊಲಿದು ಸಿದ್ದಪಡಿಸುತ್ತಿದ್ದ ಉಡುಪುಗಳ ವರ್ಣನೆಯಿದೆ. ತೆಂಗಿನ ಎಣ್ಣೆ, ಎಳ್ಳೆಣ್ಣೆಗಳು ಜನಪ್ರಿಯವಾಗಿದ್ದವು. ಹೂವಾಡಿಗರು, ತೈಲೋತ್ಪಾದಕರೂ, ಕುಂಬಾರರೂ, ಆಭರಣ ತಯಾರಕರೂ ಮೊದಲಾದ ಉಪಕಸುಬುಗಳಲ್ಲಿ ತೊಡಗಿದ್ದ ಜನರು ತಮ್ಮ ತಮ್ಮ ವೃತ್ತಿ ಸಂಘಗಳನ್ನು ಸ್ಥಾಪಿಸಿಕೊಂಡಿದ್ದರು. ಅಂತಹ ಸಂಘಗಳ ಮೂಲಕ ಅವರು ಸಮಾಜದ ಮೇಲ್ಮೆಗಾಗಿ ಅನೇಕ ದೇವಾಲಯಗಳನ್ನೂ, ಕೆರೆಗಳನ್ನೂ, ಕಟ್ಟಿಸುತ್ತಿದ್ದುದಲ್ಲದೆ ದಾನ ಧರ್ಮಗಳನ್ನೂ ನೀಡುತ್ತಿದ್ದರು.

ಹೊಯ್ಸಳ ಕಾಲದಲ್ಲಿ ವರ್ತಕರು ಅನೇಕ ವೃತ್ತಿ ಸಂಘಗಳನ್ನು ಸ್ಥಾಪಿಸಿಕೊಂಡಿದ್ದರು. "ಐಯ್ಯಾ ವೊಳೆಯ ಐನೂಜನರ" ಸಂಘವು ಅತ್ಯಂತ ವ್ಯಾಪಕವಾಗಿತ್ತು. ದಕ್ಷಿಣ ಭಾರತದ ಎಲ್ಲಾ ಪ್ರದೇಶಗಳ ದೊಡ್ಡ ದೊಡ್ಡ ವರ್ತಕರು ಈ ಸಂಘದ ಸದಸ್ಯರಾಗಿದ್ದರು. ಬಳ್ಳಿಗಾಮೆ ನಗರವು ಈ ಸಂಘದ ಕೇಂದ್ರವಾಗಿತ್ತು. ನಾನಾದೇಶಿಗಳೂ, ಸೆಟ್ಟಿಗರು, ಸೆಟ್ಟಿಗುತ್ತರು, ಅಂಕಕಾರರು, ಬೀರರು, ಬೀರ ಬಣಂಜಗರೂ, ಗೌಂಡರೂ ಮೊದಲಾಗಿ ವ್ಯಾಪಾರದಲ್ಲಿ ತೊಡಗಿದ್ದ ಎಲ್ಲಾ ಬಗೆಯ ಜನರು ಈ ಸಂಘದ ಸದಸ್ಯರಾಗಿದ್ದರು. ವ್ಯಾಪಾರಿಗಳು ಚಂದನ, ಕರ್ಕೇತನ, ಕಸ್ತೂರಿ, ಏಲಕ್ಕಿ, ಮೆಣಸು, ವಜ್ರ ಬೆಲೆಬಾಳುವ ಬಟ್ಟೆಗಳು, ಧಾನ್ಯಗಳು ಮುಂತಾದ ಪದಾರ್ಥಗಳನ್ನು ವಿಕ್ರಯಿಸಿ ಮಾರಾಟ ಮಾಡುತ್ತಿದ್ದರು. ಎತ್ತಿನ ಬಂಡಿಗಳು, ಆನೆ, ಕುದುರೆ ಮತ್ತು ಕತ್ತೆಗಳನ್ನು ಸಾಮಾನು ಸಾಗಾಣಿಕೆಗೆ ಬಳಸುತ್ತಿದ್ದರು. ವರ್ತಕರು ಪಾದ ಮಾರ್ಗದಿಂ, ಜಲ ಮಾರ್ಗದಿಂ, ಷಟ್ಖಂಡ ಮಂಡಲಮಂ ಪೋಕ್ಕುಲ " ವಸ್ತುಗಳನ್ನು ವಿಕ್ರಯಿಸುವುದಲ್ಲಿ ಕರ್ತವ್ಯನಿರತರಾಗಿದ್ದರು. ಇಡೀ ಭಾರತದಲ್ಲಲ್ಲದೆ ವ್ಯಾಪಾರಿಗಳು ಪರ್ಷಿಯ, ಬರ್ಮಾ, ಮಲಯ ಪರ್ಯಾದು ದ್ವೀಪಗಳೊಡನೆ ವ್ಯಾಪಾರ ಸಂಪರ್ಕವನ್ನು ಏರ್ಪಡಿಸಿಕೊಂಡಿದ್ದರು. ಅವರು ತಮ್ಮ ಶ್ರೇಯಸ್ಸಿಗಾಗಿ ಮತ್ತು ತಮ್ಮ ವೃತ್ತಿಯ ಮೇಲ್ಮೈಗಾಗಿ "ವೀರ ಬಣಂ ಜಧರ್ಮ" ವನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದರು. ತೆರಿಗೆಯಿಂದ ತಪ್ಪಿಸಿಕೊಳ್ಳುವ ಮತ್ತು ಅಪ್ರಾಮಾಣಿಕವಾಗಿ ಲಾಭಗಳಿಸುವ ಮಾರ್ಗವನ್ನು ಅನುಸರಿಸುತ್ತಿರಲಿಲ್ಲ. ಅನೇಕ ದೊಡ್ಡ ವ್ಯಾಪಾರಿಗಳು ಹೊಯ್ಸಳ ರಾಜರ ಮನ್ನಣೆಗೆ ಪಾತ್ರರಾಗಿದ್ದರು. ಶ್ರೀಮಂತ ವರ್ತಕರು ದೇವಾಲಯಗಳನ್ನು ಕಟ್ಟಿಸಿದರು. ಕೆರೆಗಳನ್ನು ನಿರ್ಮಿಸಿರುವ ನಿದರ್ಶನಗಳಿವೆ. ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಉದಾರ ದಾನಗಳನ್ನು ನೀಡುತ್ತಿದ್ದರು.

ಹೊಯ್ಸಳರ ಸಾಮ್ರಾಜ್ಯದಲ್ಲಿ ಜನಭರಿತ ಅನೇಕ ವ್ಯಾಪಾರ ಕೇಂದ್ರಗಳು ಅಭಿವೃದ್ಧಿಗೊಂಡಿದ್ದವು. ಬೇಲೂರು, ದೋರಸಮುದ್ರ, ಆಸಂದಿ, ಅರಸೀಕೆರೆ, ಶ್ರವಣಬೆಳಗೊಳ, ತಲಕಾಡು, ಬಳ್ಳಿಗಾಮೆ, ಲೊಕ್ಕುಂಡಿ ಮೊದಲಾದ ಅನೇಕ ಪಟ್ಟಣಗಳು ವ್ಯಾಪಾರ ಮುಖ್ಯ ಕೇಂದ್ರಗಳಾಗಿದ್ದವು. ದೊಡ್ಡ ಪಟ್ಟಣಗಳಲ್ಲಿದ್ದ ಪ್ರಸಿದ್ಧ ಮಳಿಗೆಗಳನ್ನು ಚಂದ್ರಮೌಳಿಯಣ್ಣನ ವರಂಗಡಿ, ಬೆಪ್ಪಲ ದೇವನ ಬಸದಿಯರಂಗಡಿ, ಕೇತಳ ದೇವಿಯರಂಗಡಿ ಮೊದಲಾದ ಆ ಕಾಲದ ಪ್ರಮುಖ ವ್ಯಕ್ತಿಗಳ ಹೆಸರಿನಿಂದ ಹಲವು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಹೊಯ್ಸಳರ ಕಾಲದಲ್ಲಿ ಚಿನ್ನ, ಬೆಳ್ಳಿ ನಾಣ್ಯಗಳಾದ ಹೊನ್ನು, ಹಣ, ಗದ್ಯಾಣ ಮೊದಲಾದವು ಚಲಾವಣೆಯಲ್ಲಿದ್ದವು. ಹೆಚ್ಚು ಸಂದರ್ಭದಲ್ಲಿ ವ್ಯಾಪಾರವು ವಸ್ತು ವಿನಿಮಯದ ಮೂಲಕವೇ ನಡೆಯುತ್ತಿದ್ದಿತು. ಕೈಗಾರಿಕೆಗಳು ಆ ಕಾಲದ ಅವಶ್ಯಕತೆಯೊಡನೆ ತುಲನೆ ಮಾಡಿದಾಗ ಹೆಚ್ಚು ಪ್ರಗತಿಯಿಂದ ಕೂಡಿದ್ದು ಜನರ ಬದುಕಿಗೆ ನೆರವಾಗಿದ್ದವೆನ್ನಬಹುದು.

## 26.9 ಸಾರಾಂಶ

ಈ ಘಟಕವು ಎರಡು ವಿಷಯಗಳನ್ನೊಳಗೊಂಡಿರುವುದನ್ನು ನೀವು ಗಮನಿಸಿದ್ದೀರಿ. ಅವು ಯಾವುವುವೆಂದರೆ ಆಡಳಿತ ಮತ್ತು ಆರ್ಥಿಕ ವಿಷಯಗಳಿಗೆ ಸಂಬಂಧಿಸಿದವು. ಇವರ ಆಡಳಿತ ಪದ್ಧತಿ ಮತ್ತು ಸಂಸ್ಥೆಗಳು ತಮ್ಮ ಪೂರ್ವಿಕರಾದ ಗಂಗರು, ಚಾಳುಕ್ಯರ ಪರಂಪರೆಯನ್ನು ಅನುಸರಿಸಿದರು. ಚತುರ್ಸಮಯ ಉದ್ಧರಣವೇ ತಮ್ಮ ಪರಮ ಗುರಿಯೆಂದು ಭಾವಿಸಿದ್ದರು.

ಇವರ ಆಡಳಿತದಲ್ಲಿ ಅನ್ಯಮತ ಸಹಿಷ್ಣುತೆಯು ಮತ್ತೊಂದು ಆದರ್ಶಪ್ರಿಯವಾದ ಸಂಪ್ರದಾಯವಾಗಿದ್ದಿತು ಎಂಬುದನ್ನು ಈ ಪಾಠದಿಂದ ಅರಿತಿದ್ದೀರಿ.

ಇವರ ಕಾಲದಲ್ಲಿ ರಾಜ, ಮಂತ್ರಿ, ಪರಿಷತ್ತು ರಾಣಿಯರು, ಯುವರಾಜರನ್ನೊಳಗೊಂಡಂತೆ ಕೇಂದ್ರ ಸರ್ಕಾರ ರೂಪುಗೊಂಡ ಬಗ್ಗೆ ನಮ್ಮ ಗಮನವನ್ನು ಸೆಳೆಯಲಾಗಿದೆ. ಹಾಗೆಯೇ ಕೇಂದ್ರ ಸರ್ಕಾರಕ್ಕೆ ಪೂರಕವಾಗಿ ಪ್ರಾಂತೀಯ ಹಾಗೂ ಸ್ಥಳೀಯ ಆಡಳಿತ ಸಂಸ್ಥೆಗಳ ಕಾರ್ಯ ನಿರ್ವಹಣೆಯನ್ನು ನಿಮಗೆ ಮನದಟ್ಟು ಮಾಡಿಕೊಡಲಾಗಿದೆ.

ಹಾಗೆಯೇ ಹೊಯ್ಸಳರ ಕಾಲದ ಆರ್ಥಿಕ ವ್ಯವಸ್ಥೆಯನ್ನು ಪರಿಚಯಿಸಿ ಕೊಡಲಾಗಿದೆ. ಕೃಷಿ ಮತ್ತು ಕೈಗಾರಿಕೆ, ವಾಣಿಜ್ಯ, ವ್ಯಾಪಾರಗಳು ಹೊಯ್ಸಳರ ಕಾಲದ ಆರ್ಥಿಕ ವ್ಯವಸ್ಥೆಗೆ ಬೆನ್ನೆಲುಬಾಗಿದ್ದವು. ಕೃಷಿ ಮತ್ತು ಕರಕುಶಲ ಕೈಗಾರಿಕೆಗಳು ತಮ್ಮ ಉತ್ಪನ್ನದ ಚಟುವಟಿಕೆಯಲ್ಲಿ ನೈಪುಣ್ಯದ ಗರಿಷ್ಟ ಮಟ್ಟವನ್ನು ತಲುಪಿದ್ದವು.

## 26.10 ಸ್ವಪರೀಕ್ಷೆ ಪ್ರಶ್ನೆಗಳು

1. ಹೊಯ್ಸಳರ ಆಡಳಿತ ಪದ್ಧತಿಯನ್ನು ವಿವರಿಸಿರಿ.
2. ಹೊಯ್ಸಳರ ಆಡಳಿತವು ಸಮಯಕ್ಕೆ ತಕ್ಕಂತೆ ಮಾರ್ಪಾಡುಗೊಂಡ ಧರ್ಮಿಷ್ಠ ಪ್ರಭುತ್ವವಾಗಿದ್ದಿತು ಈ ಹೇಳಿಕೆಯನ್ನು ವಿಶದಪಡಿಸಿರಿ.
3. ಹೊಯ್ಸಳರ ಕಾಲದ ಕೃಷಿ, ಕೈಗಾರಿಕೆ ಮತ್ತು ವಾಣಿಜ್ಯ ಚಟುವಟಿಕೆಗಳನ್ನು ಕುರಿತು ವಿವರಣೆಗಳನ್ನುನೀಡಿ.
4. ಹೊಯ್ಸಳರ ಕಾಲದ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿರಿ.

## 26.11 ಹೆಚ್ಚಿನ ಅಭ್ಯಾಸಕ್ಕಾಗಿ ಗ್ರಂಥಗಳು


1. ಆರ್.ಸಿ. ದಿವಾಕರ (ಸಂ) : ಕರ್ನಾಟಕ ಪರಂಪರೆ (ಸಂ. 1)
2. ಪ್ರೊ. ಸುರೇಂದ್ರರಾವ್ : ಕರ್ನಾಟಕ ಇತಿಹಾಸ, ಸಂ -2
3. B. Sheik Ali (Ed) : **The Hoysalas**
4. K.R. Venkataramana : **The Hoysalas in Tamil Country**
5. C. Hayavadana Rao : **The Mysore Gazetter,** Vol II, Part -2.

# ಟಿಪ್ಪಣಿಗಳು

## ಘಟಕ - 27

# ಹೊಯ್ಸಳರು - ಕಲೆ, ವಾಸ್ತುಶಿಲ್ಪ, ಧರ್ಮ ಮತ್ತು ಸಾಹಿತ್ಯ

### ವಿಷಯಕ್ರಮ


27.0 ಘಟಕದ ಉದ್ದೇಶ

27.1 ಪೀಠಿಕೆ

27.2 ಪ್ರಮುಖ ಲಕ್ಷಣಗಳು

27.3 ಹೊಯ್ಸಳ ಕಾಲದಲ್ಲಿ ನಿರ್ಮಾಣಗೊಂಡ ಸ್ಮಾರಕಗಳ ಒಂದು ಸಂಕ್ಷಿಪ್ತ ನೋಟ

27.4 ಧಾರ್ಮಿಕ ಪರಿಸ್ಥಿತಿ

27.4.1 ಜೈನ ಧರ್ಮ

27.4.2 ವೈಷ್ಣವ ಪಂಥ

27.4.3 ವೀರಶೈವ ಪಂಥ

27.5 ಸಾಹಿತ್ಯ ಬೆಳವಣಿಗೆ - ಸಂಸ್ಕೃತ ಮತ್ತು ಕನ್ನಡ

27.6 ಸಾರಾಂಶ

27.7 ಸ್ವ ಪರೀಕ್ಷೆ ಪ್ರಶ್ನೆಗಳು

27.8 ಹೆಚ್ಚಿನ ಅಭ್ಯಾಸಕ್ಕಾಗಿ ಗ್ರಂಥಗಳು

## 27.0 ಘಟಕದ ಉದ್ದೇಶ

ಹೊಯ್ಸಳ ಕಾಲದ ಕಲೆ, ವಾಸ್ತುಶಿಲ್ಪ, ಧಾರ್ಮಿಕ ಆಚರಣೆಗಳು ಮತ್ತು ಸಾಹಿತ್ಯ ಪ್ರಗತಿಯನ್ನು ತಿಳಿಯಪಡಿಸುವುದು ಈ ಘಟಕದ ಉದ್ದೇಶವಾಗಿದೆ. ಈ ಪಾಠವನ್ನು ಅಭ್ಯಾಸ ಮಾಡಿದ ಮೇಲೆ ಕೆಳಗೆ ನೀಡಿರುವ ವಿಷಯಗಳನ್ನು ಕಲಿಯಲು ಸಮರ್ಥರಾಗುವಿರಿ.

* ಹೊಯ್ಸಳ ಕಲಾ ಶೈಲಿಯ ನಾಲ್ಕು ಪ್ರಮುಖ ಗುಣ ಲಕ್ಷಣಗಳನ್ನು ತಿಳಿವಿರಿ.
* ಹೊಯ್ಸಳ ಸಾಮ್ರಾಜ್ಯ ವಿವಿಧ ಭಾಗದಲ್ಲಿ ನಿರ್ಮಿಸಲಾದ ಕಲಾ ಸ್ಮಾರಕಗಳ ಸಂಕ್ಷಿಪ್ತ ಸಮೀಕ್ಷೆಯ ಪರಿಚಯ ಪಡೆಯುವಿರಿ.
* ಕಲಾ ಸ್ಮಾರಕಗಳ ನಿರ್ಮಾಣಕ್ಕೆ ಹೊಯ್ಸಳ ದೊರೆಗಳ ಉದಾರ ಪ್ರೋತ್ಸಾಹ.
* ಹೊಯ್ಸಳರ ಕಾಳದಲ್ಲಿ ಪ್ರಮುಖ ನಾಲ್ಕು ಧಾರ್ಮಿಕ ಪಂಥಗಳನ್ನು ಕಾಣುವಿರಿ. ಜೈನ ಧರ್ಮ, ಶ್ರೀವೈಷ್ಣವ ಪಂಥ, ಶೈವ ಮತ್ತು ವೀರಶೈವ ಪಂಥಗಳು.
* ಹೊಯ್ಸಳ ದೊರೆಗಳ ಔದಾರ್ಯ ಪ್ರೋತ್ಸಾಹದಿಂದ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ಕಾಣುವಿರಿ.

## 27.1 ಪೀಠಿಕೆ

ಹೊಯ್ಸಳರು ಕಲ್ಯಾಣ ಚಾಲುಕ್ಯರ ನಂತರ ದಕ್ಷಿಣ ಕರ್ನಾಟಕ ಪ್ರದೇಶದ ಪ್ರಭುಗಳಾದರು. ಆರಂಭದಲ್ಲಿ ಅವರ ಸಾಮಂತರಾಗಿದ್ದ ಹೊಯ್ಸಳರು ಒಂದು ರೀತಿಯಲ್ಲಿ ಕಲ್ಯಾಣ ಚಾಲುಕ್ಯ ವಾಸ್ತು ಶಿಲ್ಪ ಶೈಲಿಯನ್ನು ಪೂರ್ಣವಾಗಿ ವಿಕಾಸಗೊಳ್ಳುವುದಕ್ಕೆ ಕಾರಣರಾದರೆಂದು ಪ್ರಾರಂಭದ ಕಲಾ ವಿಮರ್ಶಕರು ಅಭಿಪ್ರಾಯ ಪಟ್ಟಿದ್ದರು. ಹೊಯ್ಸಳರು ಚಾಳುಕ್ಯರ ಉತ್ತರಾಧಿಕಾರಿಗಳಾಗಿದಾಗ್ಯೂ ಅವರ ಕಾಲದ ವಾಸ್ತುಶೈಲಿಯು ಕೇವಲ ಚಾಳುಕ್ಯ ಶೈಲಿಯನ್ನು ಅನುಕರಿಸಲಿಲ್ಲ. ಹೊಯ್ಸಳ ವಾಸ್ತುಶಿಲ್ಪದಲ್ಲಿ ದ್ರಾವಿಡ ಶೈಲಿಯು ಪ್ರಮುಖವಾಗಿ ಕಂಡು ಬರುತ್ತದೆ. ದಕ್ಷಿಣದ ಚೋಳ, ಪಾಂಡ್ಯರೂ ಹಾಗೂ ಆ ವೇಳೆಗೆ ಕರ್ನಾಟಕದ ದಕ್ಷಿಣ ಭಾಗದಲ್ಲಿ ಗಂಗರೂ ರೂಪಿಸಿದ್ದ ವಿನ್ಯಾಸ ಮತ್ತು ಚಾಳುಕ್ಯ ಶೈಲಿಯ ಹಲವು ಅಂಶಗಳನ್ನು ಹೊಯ್ಸಳ ಶೈಲಿಯಲ್ಲಿ ಸುಗಮವಾಗಿ ಸಮ್ಮಿಶ್ರಗೊಳಿಸಿರುವುದಲ್ಲದೆ ಇನ್ನೂ ಹಲವು ಹೊಸ ನಮೂನೆಗಳನ್ನು ಅಳವಡಿಸಲಾಗಿದೆ. ಕರ್ನಾಟಕದ ಬೇರೆ ರಾಜವಂಶದಂತೆ ಹೊಯ್ಸಳರೂ ತಮ್ಮದೇ ಆದ ವಾಸ್ತುಶಿಲ್ಪ ಒಲವುಗಳನ್ನು ಕೂಡಿಸಲು ಮರೆಯಲಿಲ್ಲ. ಆದ್ದರಿಂದ ಅವರ ದೇವಾಲಯದ ಶಿಲ್ಪಗಳಲ್ಲಾಗಲಿ, ವಾಸ್ತು ಅಲಂಕಾರಗಳಲ್ಲಾಗಲಿ ಒಂದು ವಿಶಿಷ್ಟ ಹೊಯ್ಸಳ ಛಾಯೆ ಕಾಣಿಸಿಕೊಂಡಿರುವುದನ್ನು ಕಾಣಬಹುದು. ಹೊಯ್ಸಳ ಶಿಲ್ಪಿಗಳು ಹೊಸ ಪ್ರಯೋಗವೊಂದನ್ನು ಕೈಗೂಡಿಸಿಕೊಂಡು ಅಲಂಕರಣಶೀಲ ಸೂಕ್ಷ್ಮ ಕೆತ್ತನೆಗಳನ್ನು ಸೃಷ್ಟಿಸಿದರಲ್ಲದೆ ದೇವಾಲಯಗಳನ್ನು ಭವ್ಯ ಕಲಾಭಂಡಾರಗಳನ್ನಾಗಿ ಮಾರ್ಪಡಿಸಿದರು. ಬಿಲ್.ರೈಸ್, ವೆಂಕೋಬರಾವ್, ಎಂ.ಎಚ್. ಕೃಷ್ಣ, ಆರ್. ನರಸಿಂಹಾಚಾರ್, ಎಸ್. ಶ್ರೀಕಂಠಶಾಸ್ತ್ರಿ ಮೊದಲಾದ ವಿದ್ವಾಂಸರು ಹೊಯ್ಸಳ ಶೈಲಿಯನ್ನು ಒಂದು ಪ್ರತ್ಯೇಕ ಶೈಲಿ ಎಂಬುದಾಗಿ ಪರಿಗಣಿಸಿದ್ದಾರೆ. ಆದರೆ ಇತ್ತೀಚಿನ ವಿದ್ವಾಂಸರು ಎರಡು ಪ್ರತ್ಯೇಕ ಶೈಲಿಗಳಿಗೆ ಸೇರಿದ ದೇವಾಲಯಗಳನ್ನು ಗುರುತಿಸಿದ್ದಾರೆ. ಮೊದಲನೆಯದು ಚಾಲುಕ್ಯ ಶೈಲಿಯ ವಾಸ್ತುಶಿಲ್ಪ, ಎರಡನೆಯದು ಮುಂದೆ ಹೊಯ್ಸಳ ಶೈಲಿಯೆಂದು ಕರೆಯಲಾದ ವಿಶಿಷ್ಟವಾದ ಲಕ್ಷಣಗಳನ್ನು ಅರಳಿಸಿಕೊಂಡಿದ್ದ ವಾಸ್ತುಶಿಲ್ಪಶೈಲಿ. ಇದು ಕೆಲವೇ ದೇವಾಲಯಗಳಿಗೆ ಸೀಮಿತವಾಗಿದೆ. ಎರಡನೆಯ ಮಾದರಿಯವು 12ನೇ ಶತಮಾನದ ಪ್ರಾರಂಭದಿಂದ ಅಸ್ತಿತ್ವಕ್ಕೆ ಬರತೊಡಗಿದವು. ಎರಡು ಬಗೆಯ ದೇವಾಲಯಗಳನ್ನು ಜೊತೆ ಜೊತೆಯಾಗಿಯೇ ಕಟ್ಟಲಾಗಿದೆ.

## 27.2 ಪ್ರಮುಖ ಲಕ್ಷಣಗಳು

ಹೊಯ್ಸಳ ವಾಸ್ತುಶೈಲಿಯಲ್ಲಿ ಅದುವರೆಗೂ ಕಾಣಬಂದ ಹಲವು ವೈಶಿಷ್ಟ್ಯ ಪೂರ್ಣವಾದ ವಿನ್ಯಾಸಗಳನ್ನು ನೋಡಬಹುದು. ನಕ್ಷತ್ರಾಕಾರದ ತಳವಿನ್ಯಾಸ,ಜಗತಿ, ಕೂಟಗಳು, ಭಿತ್ತಿ ಅಲಂಕರಣ, ಶಿಖರ ಮತ್ತು ಕಂಭಗಳ ವಿನ್ಯಾಸ, ಸೂಕ್ಷ್ಮ ಕೆತ್ತನೆಯ ಕೆಲಸ ಮೊದಲಾದ ಹಲವಾರು ವೈಶಿಷ್ಟ್ಯಗಳಿಂದ ಹೊಯ್ಸಳ ದೇವಾಲಯಗಳನ್ನು ಸುಲಭವಾಗಿ ಗುರುತಿಸಬಹುದು. ಸಾಮಾನ್ಯವಾಗಿ ಹೊಯ್ಸಳ ದೇವಾಲಯಗಳ ಶಿಖರಗಳ ಮುಂಭಾಗದಲ್ಲಿ ಸಳನು ಹುಲಿಯನ್ನು ಕೊಲ್ಲುತ್ತಿರುವ ಶಿಲ್ಪವನ್ನು ಕಾಣಬಹುದು. ಆದರೆ ಇದು ಅನೇಕ ದೇವಾಲಯಗಳಲ್ಲಿ ಸ್ಥಳಾಂತರಗೊಂಡು ಕಾಣುವುದಿಲ್ಲ. ಅಲ್ಲದೆ ಹೊಯ್ಸಳ ದೇವಾಲಯಗಳನ್ನು ಹೆಚ್ಚು ಮಟ್ಟಿಗೆ ಮೆದುಗಲ್ಲಿನಿಂದ

ಕಟ್ಟಲಾಗಿದೆ. ಕೆಲವು ದೇವಾಲಯಗಳನ್ನು ಮಾತ್ರ ಕಣಶಿಲೆ ಅಥವಾ ಪದರುಗಲ್ಲುಗಳಿಂದ ಕಟ್ಟಲಾಗಿದೆ. ಪದರಗಲ್ಲು ಮಾಧ್ಯಮದ ಬಳಕೆಯು ಕಲ್ಯಾಣ ಚಾಲುಕ್ಯರ ಆಶ್ರಯದಲ್ಲಿ ರೂಪುಗೊಂಡಿದ್ದಿತು. ಹೊಯ್ಸಳರ ದೇವಾಲಯಗಳಲ್ಲಿ ಶಿಖರಗಳು ಮುಖ್ಯವಾಗಿ ಗರ್ಭಗುಡಿಯ ಮೇಲೆ ಇರುತ್ತವೆ.

ಹೊಯ್ಸಳ ಶೈಲಿಯ ಪ್ರಮುಖ ದೇವಾಲಯಗಳೆಲ್ಲವು ನಕ್ಷತ್ರಾಕಾರದ ತಳ ವಿನ್ಯಾಸದಿಂದ ಕೂಡಿವೆ. ಈ ವಿನ್ಯಾಸವನ್ನು ಜಗತಿಯ ಮೇಲಿನಿಂದ ಶಿಖರದ ಮೇಲಿರುವ ಕಲಶದವರೆಗೂ ಕೊಂಡೊಯ್ಯಲಾಗಿದೆ. ಈ ಕಾರಣದಿಂದ ಹೊಯ್ಸಳ ದೇವಾಲಯಗಳ ವಿನ್ಯಾಸವನ್ನು ಅಷ್ಟಭದ್ರ ವಿನ್ಯಾಸವೆಂದೂ ಕರೆಯಲಾಗಿದೆ. ಈ ರೀತಿಯ ವಿನ್ಯಾಸದಿಂದ ದೇವಾಲಯಗಳು ನೋಡಲು ಬಹು ರಮ್ಯವಾಗಿಯೂ, ಸುಂದರವಾಗಿಯೂ ಕಾಣುತ್ತವೆ.

ಹೊಯ್ಸಳರ ದೇವಾಲಯಗಳನ್ನು ಸಾಮಾನ್ಯವಾಗಿ ಭೂಮಟ್ಟದಿಂದ ಮೂರು ಅಥವಾ ನಾಲ್ಕು ಅಡಿಗಳಷ್ಟು ಎತ್ತರವಾಗಿ ನಿರ್ಮಿಸಿದ ಜಗತಿಯ ಮೇಲೆ ಕಟ್ಟಲಾಗಿದೆ. ಜಗತಿಯು ದೇವಾಲಯಕ್ಕಿಂತಲೂ ಹಲವಾರು ಅಡಿಗಳಷ್ಟು ವಿಸ್ತಾರವಾಗಿರುತ್ತದೆ. ಜಗತಿಯು ಸಹ ನಕ್ಷತ್ರಾಕಾರವಾಗಿರುತ್ತದೆ. ದೇವಾಲಯಕ್ಕಿಂತಲೂ ಅಗಲವಾದ ಈ ಜಗತಿಯ ಮೇಲಿನಿಂದ ಪ್ರೇಕ್ಷಕರು ಮತ್ತು ಯಾತ್ರಾರ್ಥಿಗಳು ದೇವಾಲಯದ ಸೂಕ್ಷ್ಮ ಕೆತ್ತನೆಯನ್ನು ವೀಕ್ಷಿಸಲು ಸಹಕಾರಿಯಾಗಿದೆ. ಅಲ್ಲದೆ ಇದು ಪ್ರದಕ್ಷಿಣ ಪಥವಾಗಿಯೂ ಇದೆ. ಜಗತಿಯ ಮೂಲೆಗಳಲ್ಲಿ ಆನೆಗಳನ್ನು ಕಡೆದು ನಿಲ್ಲಿಸಲಾಗಿದ್ದು ಅವುಗಳು ಅದನ್ನು ಹೊತ್ತು ನಿಂತಿರುವಂತೆ ಭಾಸವಾಗುತ್ತದೆ.

ಕೂಟ ರಚನೆ ಹೊಯ್ಸಳ ವಾಸ್ತುಶಿಲ್ಪದ ಮತ್ತೊಂದು ಲಕ್ಷಣವಾಗಿದೆ. ಹೊಯ್ಸಳ ದೇವಾಲಯಗಳು ಅವುಗಳ ಕೂಟಗಳಿಗೆ ಪ್ರಸಿದ್ಧಿಯಾಗಿವೆ. ಅವುಗಳು ಏಕ ಕೂಟದಿಂದ ಹಿಡಿದು ಪಂಚಕೂಟಗಳನ್ನು ಹೊಂದಿವೆ. ಉದಾಹರಣೆಗೆ ಬೇಲೂರು ದೇವಾಲಯವು ಏಕಕೂಟದಿಂದ ಕೂಡಿದೆ. ಹಳೇಬೀಡಿನ ಹೊಯ್ಸಳೇಶ್ವರ ದೇವಾಲಯವು ದ್ವಿಕೂಟಕ್ಕೂ, ಸೋಮನಾಥ ಪುರದ ಕೇಶವ ದೇವಾಲಯವು ತ್ರಿಕೂಟಕ್ಕೂ, ದೊಡ್ಡಗದ್ದವಳ್ಳಿಯ ಮಹಾಲಕ್ಷ್ಮಿದೇವಾಲಯವು ಚತುಷ್ಕೂಟಕ್ಕೂ ಮತ್ತು ಕಂಬದ ಹಳ್ಳಿಯ ಜೈನ ದೇವಾಲಯವು ಪಂಚಕೂಟಕ್ಕೂ ಉದಾಹರಣೆಗಳಾಗಿವೆ. ಏಕಕೂಟ, ದ್ವಿಕೂಟ, ತ್ರಿಕೂಟಗಳೆಲ್ಲವನ್ನು ಒಂದೇ ಜಗತಿಯ ಮೇಲೆ ನಿರ್ಮಿಸಲಾಗಿದ್ದು ಏಕ ಪ್ರಕಾರವಾದ ತಳಹದಿಯಿಂದ ಕೂಡಿ ಅಂದವಾಗಿವೆ.

ನಕ್ಷತ್ರಾಕಾರದ ತಲ ವಿನ್ಯಾಸದ ಮಾದರಿಯಲ್ಲೆ ಗೋಡೆಗಳು ಕೆತ್ತನೆಯ ಪರದೆಗಳಂತೆ ಮೇಲೆಳುತ್ತವೆ. ಗೋಡೆಗಳನ್ನು ಅನೇಕ ಪಟ್ಟಿಕೆಗಳನ್ನಾಗಿ ತೋರಿಸಲಾಗಿದೆ. ಗೋಡೆಯ ಪ್ರಾರಂಭದಲ್ಲಿ ಆನೆಯ ಸಾಲುಗಳು, ಕುದುರೆ ಸವಾರರ ಸಾಲುಗಳು, ಲತಾ ತೋರಣಗಳು, ಅದರ ಮೇಲಿನ ಪಟ್ಟಿಕೆಯಲ್ಲಿ ರಾಮಾಯಣ, ಮಹಾಭಾರತ, ಭಾಗವತ ಮತ್ತು ಇತರ ಪೌರಾಣಿಕ ಕಥೆಗಳಲ್ಲಿ ಕಾಣಬರುವ ಘಟನೆಗಳನ್ನು ಸೂಕ್ಷ್ಮವಾಗಿ ಕೆತ್ತಲಾಗಿದೆ. ಅನಂತರ ದೇವಾನುದೇವತೆಗಳ ಚಿತ್ರಗಳೂ, ಮಕರಗಳೂ ಮುಂತಾದ ಶಿಲ್ಪಗಳನ್ನು ಬಿಡಿಸಲಾಗಿದೆ. ಗೋಡೆಗಳನ್ನು ಕೆಲವು ದೇವಾಲಯಗಳಲ್ಲಿ ಸುಂದರವಾದ ಹಾಗೂ ಸೂಕ್ಷ್ಮವಾದ ಕಲ್ಲಿನ ಜಾಲಂಧ್ರಗಳಿಂದ ಅಲಂಕರಿಸಲಾಗಿದೆ. ಗೋಡೆ ಮತ್ತು ಛಾವಣಿಯು ಸಂಧಿಸುವ ಸ್ಥಳದಲ್ಲಿ ಮನಮೋಹಕವಾದ ಶಿಲಾಬಾಲಿಕೆಯರ ವಿಗ್ರಹಗಳನ್ನು ಕಡೆದು ಸೇರಿಸಲಾಗಿದೆ. ಈ ಶಿಲಾಬಾಲಿಕೆ ಶಿಲ್ಪಗಳು ಈಗ ಕೇವಲ ಕೆಲವೇ ದೇವಾಲಯಗಳಲ್ಲಿ ಕಾಣಬರುತ್ತವೆ. ದ್ರಾವಿಡ ಶೈಲಿಯಲ್ಲಿರುವಂತೆ ಹೊಯ್ಸಳ ಶೈಲಿಯಲ್ಲಿ ಬೃಹದಾಕಾರದ ಗೋಪುರಗಳಿಲ್ಲ. ಶಿಖರವು ಗರ್ಭಗೃಹದ ಮೇಲ್ಭಾಗದಲ್ಲಿ ಪಿರಮಿಡ್ಡಿನಾಕಾರದಲ್ಲಿ ಹಂತ ಹಂತವಾಗಿದೆ. ಅತಿ ಎತ್ತರವಲ್ಲದ ಹಾಗೂ ಶಿಲ್ಪಾ ಕೃತಿಗಳಿಂದಾವೃತವಾದ ಗೋಪುರಗಳನ್ನು ನಿರ್ಮಿಸಲಾಗಿದೆ.

ಹೊಯ್ಸಳ ದೇವಾಲಯಗಳು ಮುಖಮಂಟಪ, ಸಭಾಮಂಟಪ, ಅಂತರಾಳ ಮತ್ತು ಗರ್ಭಗುಡಿಗಳನ್ನೊಳಗೊಂಡಿವೆ. ದೇವಾಲಯಗಳ ಮುಖ್ಯದ್ವಾರದ ಎರಡು ಕಡೆಗಳಲ್ಲೂ ಆಳೆತ್ತರ ಪ್ರಮಾಣದ ದ್ವಾರಪಾಲಕರನ್ನು ಸುಂದರವಾಗಿ ಕೆತ್ತಿ ನಿಲ್ಲಿಸಲಾಗಿದೆ. ಬಾಗಿಲು ಪಟ್ಟಿಕೆಗಳು ಶಿಲ್ಪಗಳಿಂದ ಅಲಂಕೃತವಾಗಿವೆ. ಮೇಲ್ಭಾಗವು ಮಕರ ತೋರಣ ಮತ್ತು ಇತರ ಶಿಲ್ಪಗುಚ್ಛದಿಂದ ಶೋಭಿಸುತ್ತದೆ. ಹೊಯ್ಸಳ ದೇವಾಲಯಗಳ ಮೇಲ್ಛಾವಣಿಯ ಒಳಭಾಗವು ಸೂಕ್ಷ್ಮವಾಗಿ ಕೆತ್ತಿದ ಭುವನೇಶ್ವರಿಗಳಿಂದಲಂಕೃತವಾಗಿದೆ. ಅಲ್ಲಿ ಕೆತ್ತಲಾಗಿರುವ ಮೂರ್ತಿಗಳು ಅತಿ ಸೂಕ್ಷ್ಮತೆಗೂ, ಸೌಂದರ್ಯಕ್ಕೂ ಪ್ರಸಿದ್ಧವಾಗಿವೆ. ದೇವಾಲಯಗಳ ಒಳಭಾಗವು ಕಂಬಗಳಿಂದ ಕೂಡಿದೆ. ಒಳಭಾಗದ ಕಂಬಗಳನ್ನು ಗಾಜಿನೋಪಾದಿಯಲ್ಲಿ ಕಡೆದು ನುಣಪನ್ನು ಕೊಡಲಾಗಿದೆ. ಹಲವು ಕಂಬಗಳು ಸಹ ಸೂಕ್ಷ್ಮವಾದ ಮತ್ತು ನಯವಾದ ಕೆತ್ತನೆಗಳನ್ನೊಳಗೊಂಡಿವೆ. ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ ನರಸಿಂಹ ಸ್ತಂಭ ಎಂದು ಕರೆಯಲಾಗಿರುವ ಸ್ತಂಭವು ಹೊಂದಿರುವ

ಸೂಕ್ಷ್ಮಕೆತ್ತನೆಯ ಕೆಲಸಕ್ಕೆ ಸಮಾನವಾದ ಮತ್ತೊಂದು ಸ್ಥಂಭವು ದುರ್ಲಭ ಎನ್ನಲಾಗಿದೆ. ಅಂತರಾಳದ ಕಲ್ಲಿನ ಬಾಗಿಲುಬಾಡವನ್ನೂ ಸಹ ನಯವಾಗಿ ಕಡೆಯಲಾಗಿದೆ. ಮೇಲ್ಭಾಗದಲ್ಲಿ ವಿಷ್ಣು ಆಲಯವಾದರೆ ಗಜಲಕ್ಷ್ಮಿ ಅಥವಾ ಗರುಡ ಅಥವಾ ಶಿವಾಲಯವಾದರೆ ಗಣೇಶನನ್ನು ಕೆತ್ತಲಾಗಿದೆ. ಅಂತರಾಳ ಮತ್ತು ಗರ್ಭಗುಡಿಗಳು ಸಾಮಾನ್ಯವಾಗಿ ಚಿಕ್ಕದಾಗಿರುತ್ತವೆ. ಗರ್ಭಗುಡಿಯ ಕೇಂದ್ರದಲ್ಲಿ ಮೂಲವಿಗ್ರಹವಿದ್ದು ಮೇಲ್ಭಾಗದಲ್ಲಿ ಶಿಖರವಿರುತ್ತದೆ. ಗರ್ಭಗುಡಿಗಳು ಹೆಚ್ಚು ಗಾಳಿ ಬೆಳಕಿನಿಂದ ಕೂಡಿರುವುದಿಲ್ಲ.

ದೇವಾಲಯದ ಹೊರಗೋಡೆಯಲ್ಲಿ ಸ್ವಲ್ಪವೂ ಜಾಗವಿಲ್ಲದಷ್ಟು ಮಟ್ಟಿಗೆ ಸೂಕ್ಷ್ಮಾತಿ ಸೂಕ್ಷ್ಮವಾದ ಹಾಗೂ ಮೂರರಿಂದ ನಾಲ್ಕು ಅಡಿ ಪ್ರಮಾಣದ ದೇವತೆಗಳನ್ನು ಕೊರೆಯಲಾಗಿದೆ. ಮದನಿಕಾ ವಿಗ್ರಹಗಳು ಮೋಹಕ ಸೌಂದರ್ಯದಿಂದ ಕೂಡಿವೆ. ನಾಟ್ಯದಲ್ಲಿ ತೊಡಗಿರುವಂತೆ ಹಾಗೂ ಸಮಭಂಗ, ಅಭಂಗ, ಅರೆ ಭಂಗ, ತ್ರಿಭಂಗ ಮೊದಾಲದ ನಾನಾ ರೀತಿಯ ಭಂಗಿಗಳಲ್ಲಿ ಕಡೆಯಲಾಗಿದೆ. ಅವು ನವರಸಗಳನ್ನು ನಿರೂಪಿಸುತ್ತವೆ ಎಂದು ಹೇಳಲಾಗಿದೆ. ಆದರೂ ಶೃಂಗಾರ ರಸ ಪ್ರಧಾನವಾಗಿದೆ. ಪುರಾಣದಲ್ಲಿ ಬರುವ ಮೋಹಿನಿ ಭಸ್ಮಾಸುರರ ಘಟನೆಯನ್ನು ಮೂಡಿಸುವಲ್ಲಿ ಶಿಲ್ಪಿಗಳು ಯಶಸ್ವಿಯಾಗಿದ್ದಾರೆ. ಫರ್ಗುಸನ್ ಎಂಬ ವಿದ್ವಾಂಸನು ಹೊಯ್ಸಳ ಶಿಲ್ಪಕಲೆಯನ್ನು ಮನಮುಟ್ಟಿ ಪ್ರಶಂಸಿಸಿದ್ದಾನೆ. ಹಲವು ಶಿಲ್ಪಗಳ ತಳಭಾಗದಲ್ಲಿ ಪ್ರಸಿದ್ಧ ಶಿಲ್ಪಿಗಳು ತಮ್ಮ ಹೆಸರುಗಳನ್ನು ಕೆತ್ತಿದ್ದಾರೆ. ಮಲ್ಲಿತಮ್ಮ ದಾಸೋಜ ಕೇತೋಜ ಮೊದಲಾದ ಶಿಲ್ಪಿಗಳ ಹೆಸರುಗಳನ್ನು ಇಂದಿಗೂ ಕಾಣಬಹುದು. ಒಟ್ಟಿನಲ್ಲಿ ಭಕ್ತಿ, ಅನುಕಂಪ, ನೀತಿ, ಧರ್ಮ, ಸೌಂದರ್ಯ ಮೊದಲಾದವುಗಳನ್ನು ಶಿಲ್ಪದಲ್ಲಿ ಮೂಡಿಸುವಲ್ಲಿ ಶಿಲ್ಪಿಗಳು ಯಶಸ್ವಿಯಾಗಿದ್ದಾರೆ. ಅಲ್ಲದೆ ಹೊಯ್ಸಳ ದೇವಾಲಯಗಳಲ್ಲಿ ಸಮಕಾಲೀನ ರಾಜರ ಆಸ್ಥಾನ, ನೃತ್ಯ, ಸಂಗೀತವಾದ್ಯಗಳು, ಉಡುಪು, ಆಭರಣ, ಮಲ್ಲಯುದ್ಧ, ಯುದ್ಧ ದೃಶ್ಯಗಳು, ಆಯುಧೋಪಕರಣಗಳು ಮೊದಲಾದ ಶಿಲ್ಪಗಳನ್ನು ಕಾಣಬಹುದು.

## 27.3 ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಸ್ಮಾರಕಗಳ ಸಂಕ್ಷಿಪ್ತ ನೋಟ

ಹೊಯ್ಸಳರ ಆಳ್ವಿಕೆಯಲ್ಲೂ ದೇವಾಲಯಗಳ ಮತ್ತು ಬಸದಿಗಳ ನಿರ್ಮಾಣಕ್ಕೆ ರಾಜಾಶ್ರಯದ ಕೊರತೆಯಿರಲಿಲ್ಲ. ರಾಜರು, ರಾಣಿಯರು, ಮಂತ್ರಿಗಳು, ದಂಡನಾಯಕರು ದೇವಾಲಯಗಳನ್ನು ಕಟ್ಟಿಸಿದುದಲ್ಲದೆ, ಧಾರ್ಮಿಕ ಸಂಸ್ಥೆಗಳಿಗೆ ಧಾರಾಳವಾಗಿ ಕೊಡುಗೆಗಳನ್ನು ನೀಡಿದರು. ಸುಮಾರು ಕ್ರಿ.ಶ. 1077 ರಲ್ಲಿ ಮಲ್ಲಾವರದಲ್ಲಿ ಒಂದು ಜೈನ ಬಸದಿಯನ್ನು ಕಟ್ಟಿಸಿದರು. ಕ್ರಿ.ಶ. 1083 ರಲ್ಲಿ ಮಹಾಸಂಧಿವಿಗ್ರಹಿ ದಂಡನಾಯಕ ಪೋಚಿಮಯ್ಯನು ಅರಸಿಕೆರೆ ಬಳಿ ಬಂದು ಶಿವದೇವಾಲಯವನ್ನು ಕಟ್ಟಿಸಿದನು. ಕ್ರಿ.ಶ. 1117 ರಲ್ಲಿ ರಾಣಿ ಶಾಂತಲೆಯು ಈಶಪುರದಲ್ಲಿ ರಾಮೇಶ್ವರ ದೇವಾಲಯವನ್ನು ನಿರ್ಮಿಸಿದಳು. ಕ್ರಿ.ಶ. 1130 ರಲ್ಲಿ ದಂಡನಾಯಕ ರಾಮಣ್ಣನು ಮೊರಲೆಯಲ್ಲಿ ಕೇಶವ ದೇವಾಲಯವನ್ನು ಕಟ್ಟಿಸಿದನು. ಕ್ರಿ.ಶ. 1151 ರಲ್ಲಿ ಸಾಮಂತ ಶಂಕರ ದಂಡಣನು ಹೊನ್ನಾವರದಲ್ಲಿ ಕೇಶವ ದೇವಾಲಯವನ್ನು ಸ್ಥಾಪಿಸಿದರು. ಸಾಮಂತನಾಗಿದ್ದ ಎರೆಯಮಯ್ಯ ಮತ್ತು ೧ನೇ ನರಸಿಂಹ 1151 ರಲ್ಲಿ ಮೂಡಗೆರೆಯಲ್ಲಿ ಎರಗೇಶ್ವರ ದೇವಾಲಯವನ್ನು ಕಟ್ಟಿಸಿದನು. ಕ್ರಿ.ಶ. 1162 ರಲ್ಲಿ ವಿಜಯಾದಿತ್ಯ ಹೆಗ್ಗಡೆಯು ಗೊರೂರಿನಲ್ಲಿ ಒಂದೂ ತ್ರಿಕೂಟ ದೇವಾಲಯವನ್ನು ನಿರ್ಮಿಸಿದನು. 1181 ರಲ್ಲಿ ಮಾಚಯ್ಯ ದಂಡನಾಯಕನ ಪತ್ನಿ ಶಾಂತಾದೇವಿಯು ಕೊಳತ್ತೂರಿನಲ್ಲಿ ಒಂದು ತ್ರಿಕೂಟ ದೇವಾಲಯವನ್ನೂ ಕಟ್ಟಿಸಿದಳು. ಕ್ರಿ.ಶ. 1196 ರಲ್ಲಿ ಎರಡನೇ ಬಲ್ಲಾಳನ ಮಂತ್ರಿ ಅಮೃತೇಶ್ವರ ದಂಡನಾಯಕನು ಅಮೃತಪುರದಲ್ಲಿ ಅಮೃತೇಶ್ವರ ದೇವಾಲಯವನ್ನು ಕಟ್ಟಿಸಿದನು. 1249 ರಲ್ಲಿ ಬೊಮ್ಮಣ್ಣ ದಂಡನಾಯಕನು ನುಗ್ಗೆಹಳ್ಳಿಯಲ್ಲಿ ಸದಾಶಿವ ದೇವಾಲಯವನ್ನು ನಿರ್ಮಿಸಿದನು. 1261 ರಲ್ಲಿ ಗೋಪಾಲ ದಂಡನಾಯಕನು ತಟ್ಟೆಕೆರೆಯ ಯೋಗ ಮಾಧವ ದೇವಾಲಯಗಳನ್ನು ಕಟ್ಟಿಸಿದನು. ಸೋಮದಂಡನಾಯಕನು ಸೋಮನಾಥಪುರದಲ್ಲಿ 1268 ರಲ್ಲಿ ಕೇಶವ ದೇವಾಲಯವನ್ನು ಕಟ್ಟಿಸಿ, ಅಲ್ಲೇ ಪಂಚಲಿಂಗೇಶ್ವರ ದೇವಾಲಯವನ್ನು ಕಟ್ಟಿಸಿದನು.

ಹೊಯ್ಸಳ ಜೈನ ದಂಡನಾಯಕರ ಕೊಡುಗೆ ಮತ್ತು ಜೈನ ಧರ್ಮದ ಪ್ರಸಾರ ದೊಡ್ಡ ಪ್ರಮಾಣದಲ್ಲಿ ನಡೆಯಿತು. ಇವರಲ್ಲಿ ಪ್ರಸಿದ್ಧರಾದವರು ಗಂಗಾರಾಜ, ಪುಣಿಸಮಯ್ಯ, ಭರತಮಯ್ಯ, ರೇಚಣ್ಣ, ಹುಲ್ಲರಾಜ, ಬೊಪ್ಪ, ಜೊತೆಗೆ ರಾಣಿ ಶಾಂತಲೆ ಮತ್ತು ಮಂತ್ರಿ ಚಂದ್ರಮೌಳಿಯ ಪತ್ನಿ ಏಚಿಯಕ್ಕರು 1116 ರಲ್ಲಿ ಪುಣಿಸಮಯ್ಯ ಅರಕೊಟ್ಟಾರ (ಚಾಮರಾಜನಗರ) ದಲ್ಲಿ ಪುಣಿಸ ಜಿನಾಲಯವನ್ನು ಕಟ್ಟಿಸಿದನು. ಅವನು ವರಕೋಡಿನ ಬಸದಿಗೆ ದತ್ತಿಯನ್ನು ನೀಡಿದನು. ದಂಡನಾಯಕ, ಮಹಾಪ್ರಧಾನ ಗಂಗರಾಜನ ತಾಯಿ ಪೋಚಿಕಬ್ಬೆಯು ಕ್ರಿ.ಶ. 1117-18 ರಲ್ಲಿ ಶ್ರವಣ ಬೆಳಗೊಳದಲ್ಲಿ ಆದಿನಾಥ ಬಸದಿಯನ್ನು ಕಟ್ಟಿಸಿದಳು. ಗಂಗರಾಜನ ಪತ್ನಿ ಲಕ್ಷ್ಮಿಯು ಅದೇ ಸ್ಥಳದಲ್ಲಿ ಎರಡು ಕಟ್ಟೆ ಬಸದಿಯನ್ನು ಕಟ್ಟಿಸಿದಳು. ಗಂಗರಾಜನು ಶಾಸನ ಬಸದಿಯನ್ನು ನಿರ್ಮಿಸಿದನು. ಇದನ್ನು ಒಂದು ಶಾಸನದಲ್ಲಿ ಚಂದ್ರಗಿರಿಯ ಮೇಲೆ ಕಟ್ಟಿಸಿದನು. ಅಲ್ಲದೆ, ಅವನು ಇಂದ್ರಗಿರಿಯ ಮೇಲೆ ಗೊಮ್ಮಟ ಮೂರ್ತಿಯ ಸುತ್ತಲು

ಒಂದು ಸುತ್ತಾಲಯವನ್ನು ಕಟ್ಟಿಸಿದನು. ಗಂಗರಾಜನು ತನ್ನ ತಾಯಿ ಮತ್ತು ಗುರು ಶುಭಚಂದ್ರ ದೇವರ ನಿಸಿಧಿಗಳನ್ನು ಕಟ್ಟಿಸಿದನು. ಗಂಗರಾಜನ ಸೋದರಳಿಯ ಬೊಪ್ಪನು ಕಮಲದ ಹಳ್ಳಿಯಲ್ಲಿ ದ್ರೋಹ ಘರಟ್ಟ ಬಸದಿಯನ್ನು ನಿರ್ಮಿಸಿದನು. ಒಂದನೇ ನರಸಿಂಹನ ಕೋಶಾಧಿಕಾರಿಯಾಗಿದ್ದ ಹುಲ್ಲರಾಜನು 1159 ರಲ್ಲಿ ಭಂಡಾರ ಬಸದಿಯನ್ನು ಶ್ರವಣಬೆಳಗೊಳದಲ್ಲಿ ಕಟ್ಟಿಸಿದನು. ಎರಡನೇ ಬಲ್ಲಾಳನ ಮಂತ್ರಿ ಚಂದ್ರಮೌಳಿಗೆ ಮಾಚಿಯಕ್ಕ ಎಂಬ ಜೈನ ಪತ್ನಿಯು 1181 ರಲ್ಲಿ ಶ್ರವಣಬೆಳಗೊಳದಲ್ಲಿ ಅಕ್ಕನ ಬಸದಿಯನ್ನು ಕಟ್ಟಿಸಿದಳು.

ರಾಜಮನೆತನದ ಸದಸ್ಯರಲ್ಲಿ ವಿನಯಾದಿತ್ಯ ವಿಷ್ಣುವರ್ಧನ, ಶಾಂತಲೆ, ಎರಡನೇ ಬಲ್ಲಾಳ, ಕೇತಲದೇವಿ ಮತ್ತು ಸೋಮೇಶ್ವರರು ಕಲೆ ಮತ್ತು ದೇವಾಲಯ ನಿರ್ಮಾಣಕ್ಕೆ ಆಶ್ರಯ ಪೋಷಣೆ ನೀಡುವುದರಲ್ಲಿ ತುಂಬ ಆಸಕ್ತಿ ಶ್ರದ್ಧೆ ವಹಿಸಿದರು. ವಿಷ್ಣುವರ್ಧನನು 1117 ರಲ್ಲಿ ಗಂಗವಾಡಿಯನ್ನು ಮರಳಿ ಗೆದ್ದುಕೊಂಡುದರ ನೆನಪಿಗಾಗಿ ತಲಕಾಡಿನಲ್ಲಿ ಕೀರ್ತಿ ನಾರಾಯಣ ದೇವಾಲಯವನ್ನು ಕಟ್ಟಿಸಿದನು. ಬೇಲೂರಿನ ಚನ್ನಕೇಶವ ದೇವಾಲಯವು ಇವನ ಕಾಲದಲ್ಲೇ ನಿರ್ಮಾಣವಾಯಿತು. ಬೇಲೂರಿನ ಚೆನ್ನಕೇಶವ ದೇವಾಲಯ ಸಮ್ಮುಚ್ಚಯದಲ್ಲೇ ಕಪ್ಪೆ ಚೆನ್ನಿಗರಾಯ ದೇವಾಲಯದ ನಿರ್ಮಾಣಕ್ಕೆ ಕಾರಣಳಾದವಳು ಅವನ ರಾಣಿಶಾಂತಲೆ. ಸ್ವತಃ ಜೈನಳಾಗಿದ್ದ ಆಕೆಯು ಅನೇಕ ಜೈನ ಸಂಸ್ಥೆಗಳನ್ನು ಪೋಷಿಸಿ ಕರ್ನಾಟಕದಲ್ಲಿ ಜೈನ ಧರ್ಮದ ಬೆಳವಣಿಗೆಗೆ ಅಪಾರ ಸೇವೆ ಸಲ್ಲಿಸಿದಳು. ಶೈವ ಧರ್ಮಕ್ಕೆ ಉದರಾಶ್ರಯ ನೀಡಿದ ಎರಡನೇ ಬಲ್ಲಾಳನು 1189 ರಲ್ಲಿ ಅರಸಿಕೆರೆಯಲ್ಲಿ ವೀರಬಲ್ಲಾಳೇಶ್ವರ ದೇವಾಲಯ ನಿರ್ಮಾಣಕ್ಕೆ ಕಾರಣನಾದನು. ಅವನ ರಾಣಿ ಕೇತಲ ದೇವಿಯು ಹಳೇಬೀಡಿನ ಕೇದರೇಶ್ವರ ದೇವಾಲಯವನ್ನು ಕಟ್ಟಿಸಿದಳು. ಎರಡನೇ ಬಲ್ಲಾಳನು 1178 ರಲ್ಲಿ ಅಮ್ಮಳೆಯಲ್ಲಿ ಕೇಶವ ದೇವಾಲಯವನ್ನು ಕಟ್ಟಿಸಿದನು. ಸೋಮೇಶ್ವರನು ತನ್ನ ತಾಯಿ ಕಳಲ ದೇವಿಯ ಪುಣ್ಯಕಾರ್ಯವೆಂದು ಕಣ್ಣನೂರಿನಲ್ಲಿ ಹೊಯ್ಸಳೇಶ್ವರ ದೇವಾಲಯವನ್ನೂ, ಅಲ್ಲಿಯೇ ಜಂಬುಕೇಶ್ವರ ದೇವಾಲಯ ಸಮುಚ್ಚಯವನ್ನು ಕಟ್ಟಿಸಿದನು.

ಹೊಯ್ಸಳರ ಕಾಲದಲ್ಲಿ ಕಟ್ಟಲಾದ ಪ್ರಮುಖ ದೇವಾಲಯಗಳನ್ನು ಬೇಲೂರು, ಹಳೇಬೀಡು, ಸೋಮನಾಥಪುರ, ಬಸರಾಳು, ನಾಗಮಂಡಲ, ಅರಸೀಕೆರೆ, ಅಮೃತಾಪುರ, ಹರಿಹರ, ಮರಳೆ, ಬೆಳ್ಳೂರು, ನೋಣವಿನಕೆರೆ, ನುಗ್ಗೆಹಳ್ಳಿ, ಹೊಸಹೊಳಲು, ಹಾರ್ನಹಳ್ಳಿ, ಹುಲ್ಲೇಕೆರೆ, ಜಾವಗಲ್ಲು, ಬೆಳವಾಡಿ, ತುರುವೆಕೆರೆ, ಕಂಭದಹಳ್ಳಿ, ವಿಷ್ಣಸಂತೆ ಮತ್ತು ಇತರ ಕಡೆಗಳಲ್ಲಿ ಇಂದಿಗೂ ಕಾಣಬಹುದು. ಹೊಯ್ಸಳರ ದೇವಾಲಯಗಳು ಹೊಂದಿರುವ ಎಣ್ಣೆಯಿಲ್ಲದ ಶಿಲ್ಪರಾಶಿ ಮತ್ತು ಸೌಂದರ್ಯದಿಂದ ಇಂದಿಗೂ ಪ್ರಪಂಚದ ಎಲ್ಲಾ ಭಾಗಗಳಿಂದಲೂ ಕಲೋಪಾಸಕರನ್ನು ಮತ್ತು ಸಂದರ್ಶಕರನ್ನು ಆಕರ್ಷಿಸುತ್ತಿವೆ.

## 27.4 ಧಾರ್ಮಿಕ ಪರಿಸ್ಥಿತಿ

ಹೊಯ್ಸಳರ ಕಾಲದ ಧಾರ್ಮಿಕ ಪರಿಸ್ಥಿತಿಯನ್ನು ಗ್ರಹಿಸಲು ಮುಖ್ಯವಾಗಿ ಶಾಸನಗಳು ಮತ್ತು ಧಾರ್ಮಿಕ ಸಾಹಿತ್ಯ ಗ್ರಂಥಗಳು ಸಹಕಾರಿಯಾಗಿವೆ. ಧಾರ್ಮಿಕ ನಂಬಿಕೆ, ಆಚರಣೆಗಳ ಆಧಾರದ ಮೇಲೆ ಸಾಮಾಜಿಕ ವರ್ಗ ಮತ್ತು ಸ್ಥಿತಿಗಳು ಕ್ರಮೇಣ ರೂಪಗೊಂಡಿರುವುದನ್ನು ಗ್ರಹಿಸಬಹುದು. ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದಂತೆ ಹೊಯ್ಸಳರ ಆಳ್ವಿಕೆ ಕಾಲದಲ್ಲಿ ವಿವಿಧ ಪಂಥಗಳ ಸಹಬಾಳ್ವೆಯನ್ನು ಕಾಣಬಹುದು. ಜೈನಧರ್ಮ, ಶ್ರೀವೈಷ್ಣವಮತ, ವೈಷ್ಣವ, ಶೈವ ಮತ್ತು ವೀರಶೈವ ಪಂಥಗಳು ಹೊಯ್ಸಳ ಕಾಲದ ಪ್ರಮುಖ ಧಾರ್ಮಿಕ ಪಂಥಗಳಿಗಿದ್ದವು. ಧಾರ್ಮಿಕವಾಗಿ ಕನ್ನಡ ನಾಡಿನಲ್ಲಿ ಆ ವೇಳೆಗೆ ಬೌದ್ಧಮತ ಕ್ಷೀಣಿಸಿತ್ತು. ಕ್ರಿ.ಶ. ಹನ್ನೊಂದನೆ ಶತಮಾನದಲ್ಲಿ ಬಳ್ಳಿಗಾಮೆಯಲ್ಲಿದ್ದ ಬೌದ್ಧ ಚೈತ್ಯಾಲಯಕ್ಕೆ ಚಾಳುಕ್ಯ ಸೌರ್ವಭೌಮನ ರಾಣಿಯೊಬ್ಬಳು ನೀಡಿದ ದಾನವನ್ನು ವಿವರಿಸುವ ಶಾಸನವೊಂದನ್ನು ಬಿಟ್ಟರೆ ಬೌದ್ಧ ಮತಕ್ಕೆ ಸಂಬಂಧಿಸಿದ ಮಾಹಿತಿ ದೊರೆಯುವುದು ದುರ್ಲಭವಾಗಿದೆ.

### *27.4.1 ಜೈನಧರ್ಮ*

ಜೈನ ಮತ ಹೊಯ್ಸಳಯುಗದ ಮೊದಲನೆ ಒಂದೆರಡು ಶತಮಾನಗಳಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಹೊಯ್ಸಳ ರಾಜ್ಯದ ಉದಯಕ್ಕೂ ಜೈನಯತಿಗೂ ಇರುವ ಸಂಬಂಧ ಜನಜನಿತವಾಗಿದೆ. ಇದು ಕಾಲ್ಪನಿಕ ಮತ್ತು ಅಸಂಗತ ವರ್ಣನೆಯೆಂದು ತೋರಿ ಬರುವುದರಲ್ಲಿ ಸಂದೇಹವಿಲ್ಲ. ಪ್ರಾರಂಭದ ಹೊಯ್ಸಳ ಅರಸರು ಜೈನದರ್ಮಾವಲಂಬಿಗಳಾಗಿದ್ದರು. ಆದುದರಿಂದಲೇ ಹೊಯ್ಸಳ ರಾಜ್ಯದ ಮೂಲ ಮತ್ತು ಜೈನಯತಿ ಹಾಗೂ ಜೈನ ದೇವತೆಯಾದ ವಾಸಂತಿಕ ಅಥವಾ ಪದ್ಮಾವತಿಯನ್ನು ಸೇರಿಸಿ ಹೆಣೆದ ಐತಿಹ್ಯಗಳು ಪ್ರತೀತಿಯಾದವೆಂದು ತೋರುತ್ತದೆ. ಇಮ್ಮಡಿ ವಿನಯಾದಿತ್ಯನು ಜೈನ ಧರ್ಮಾವಲಂಬಿಯಾಗಿದ್ದುದಲ್ಲದೆ ಅನೇಕ ಬಸದಿಗಳನ್ನು ಕಟ್ಟಿಸಿ ಜೈನ ಸಂತರಿಗೂ ವಿದ್ವಾಂಸರಿಗೂ ವಿಶೇಷ ಪ್ರೋತ್ಸಾಹ ನೀಡಿದನು. ಒಂದನೇ ಬಲ್ಲಾಳನು ರಾಜನಾದ ಕೂಡಲೇ ಸೊಸೆವೂರಿಗೆ ಭೇಟಿ

ನೀಡಿ ಅಲ್ಲಿನ ಆಲಯಗಳಿಗೆ ಕೈಂಕರ್ಯವನ್ನು ನೆರವೇರಿಸಿದನು. ವಿಷ್ಣುವರ್ಧನನು ಪ್ರಾರಂಭದಲ್ಲಿ ಜಿನೋಪಾಸಕನಾಗಿದ್ದನೆಂದೂ ಅನಂತರ ಶ್ರೀ ವೈಷ್ಣವ ಧರ್ಮಕ್ಕೆ ಮತಾಂತರ ಹೊಂದಿದನೆಂದೂ ಪ್ರತೀತಿ ಇದೆ. ಎರಡನೆ ವಿನಯಾದಿತ್ಯ, ಒಂದನೇ ಬಲ್ಲಾಳ, ವಿಷ್ಣುವರ್ಧನ, ಒಂದನೇ ನರಸಿಂಹ ಮತ್ತು ಎರಡನೇ ಬಲ್ಲಾಳನ ಆಳ್ವಿಕೆಯವರೆಗೂ ಸಾಮಾನ್ಯವಾಗಿ ಹೆಚ್ಚು ಸಂಖ್ಯೆಯಲ್ಲಿ ಜೈನ ಧರ್ಮಗಳಾದ ಸಚಿವರೂ ದಂಡನಾಯಕರೂ ಅಧಿಕಾರದಲ್ಲಿ ನಿಯೋಜಿತರಾಗಿದ್ದರು. ಮೇಲ್ಕಂಡ ರಾಜರ ಕಾಲದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಜಿನಾಲಯಗಳು ಅಸ್ತಿತ್ವಕ್ಕೆ ಬಂದವು. ವಿಷ್ಣುವರ್ಧನನ ರಾಣಿ ಶಾಂತಲ ದೇವಿ ಮತ್ತು ಅವನ ಅಮಾತ್ಯ ಗಂಗರಾಜ, ಹುಲ್ಲ, ಜೋಕಿಮಯ್ಯ ಮೊದಲಾದವರು ಜೈನಮತದ ನಿಷ್ಠ ಅನುಚರರಾಗಿದ್ದರು. ತಲಕಾಡು, ಶ್ರವಣಬೆಳಗೊಳ, ದೋರಸಮುದ್ರ, ಆಸಂದಿ, ಪೊಟ್ಟಿ ಪೊಂಬುರ್ಚ, ಬಳ್ಳಿಗಾಮೆ ಮೊದಲಾದ ಪಟ್ಟಣಗಳು ಜೈನಧರ್ಮದ ಕೇಂದ್ರಗಳಾಗಿದ್ದವು. ಅನೇಕ ಪ್ರಸಿದ್ಧ ಜೈನಮತಿಗಳು ಶ್ರವಣಬೆಳಗೊಳ ಮತ್ತು ಬೇರೆ ಬೇರೆ ಸ್ಥಳಗಳಲ್ಲಿ ವಾಸಿಸುತ್ತಿದ್ದರು. ಹೊಯ್ಸಳರ ಆಸ್ಥಾನದಲ್ಲಿ ಅನೇಕ ಜೈನ ವಿದ್ವಾಂಸರೂ, ಕವಿಗಳೂ ಆಶ್ರಯ ಪಡೆದಿದ್ದರು. ತಮ್ಮ ವೈಯುಕ್ತಿಕ ಧರ್ಮ ಯಾವುದಾಗಿದ್ದರೂ ಹೊಯ್ಸಳ ಅರಸರು ಎಲ್ಲಾ ಮತಗಳಿಗೂ ಸಮಾನ ಪ್ರೋತ್ಸಾಹ ನೀಡಿದರು. ಕ್ರಿ.ಶ. 12 ನೇ ಶತಮಾನದ ಮಧ್ಯದಿಂದ ಜೈನಮತ ಕ್ರಮೇಣ ತನ್ನ ಹಿಂದಿನ ಪ್ರಭಾವವನ್ನು ಕಳೆದುಕೊಳ್ಳುತ್ತಾ ಬಂದಿತು.

### *27.4.2 ವೈಷ್ಣವ ಪಂಥ*

ಈ ಕಾಲದಲ್ಲಿ ಸ್ಮರಣೀಯ ಘಟನೆಯೆಂದರೆ ಶ್ರೀ ವೈಷ್ಣವ ಪಂಥದ ಪ್ರಚಾರ ಮತ್ತು ಏಳಿಗೆ. ಇದು ಹೊಯ್ಸಳ ಕಾಲದಲ್ಲಿ ಕರ್ನಾಟಕವನ್ನು ಪ್ರವೇಶಿಸಿತು ಎನ್ನಲಾಗಿದೆ. ಆದರೆ ಶ್ರೀ ವೈಷ್ಣವ ಮತದ ಅನುಯಾಯಿಗಳು ರಾಮಾನುಜಚಾರ್ಯರು ಹೊಯ್ಸಳ ರಾಜ್ಯಕ್ಕೆ ಆಗಮಿಸುವುದಕ್ಕೆ ಪೂರ್ವದಲ್ಲೇ ಇದ್ದರೆ ಅನೇಕ ಶಾಸನಗಳು ಸೂಚಿಸುತ್ತವೆ. ಕ್ರಿ.ಶ. 1090 ರ ಟಿ. ನರಸಿಪುರದ ಶಾಸನವು ಈ ವಿಷಯವನ್ನು ಬಲಪಡಿಸುತ್ತದೆ. ಶ್ರೀ ರಾಮಾನುಜರು ಕ್ರಿ.ಶ. 1096 ರಲ್ಲಿ ಕರ್ನಾಟಕ ಪ್ರವೇಶಿಸಿ ಸುಮಾರು ಎರಡು ದಶಕ ಕಾಲ ಇಲ್ಲಿ ನೆಲಸಿದ್ದರು. ಇವರ ವ್ಯಕ್ತಿತ್ವ ಮತ್ತು ಬೋಧನೆಗಳಿಂದ ಪ್ರಭಾವಿತನಾದ ವಿಷ್ಣುವರ್ಧನು ವೈಷ್ಣವ ಮತ ಸ್ವೀಕರಿಸಿದನು ಎನ್ನಲಾಗಿದೆ. ಕ್ರಿ.ಶ. 1100 ರಲ್ಲಿ ರಾಮಾನುಜ ಚಾರ್ಯರು ಮೇಲುಕೋಟೆಯಲ್ಲಿ ತಿರುನಾರಾಯಣ ಪ್ರತಿಮೆಯನ್ನು ಸ್ಥಾಪಿಸಿ ಅಲ್ಲೇ ದೀರ್ಘ ಕಾಲ ವಾಸವಾಗಿದ್ದರು. ಸಾಲಿಗ್ರಾಮ ಮತ್ತು ತೊಣ್ಣನೂರುಗಳಲ್ಲಿ ಸ್ವಲ್ಪ ಕಾಲ ತಂಗಿದ್ದರು. ವಿಷ್ಣುವರ್ಧನನು ಬೇಲೂರಿನ ವಿಜಯನಾರಾಯಣ, ತಲಕಾಡಿನ ಕೀರ್ತಿ ನಾರಾಯಣ, ಗದಗ್‌ನ ವೀರನಾರಾಯಣ ಹಾಗೆಯೇ ಮೇಲುಕೋಟೆ ಮತ್ತು ಸಾಲಿಗ್ರಾಮದಲ್ಲಿ ಅನೇಕ ವೈಷ್ಣ ದೇವಾಲಯಗಳನ್ನು ನಿರ್ಮಿಸಿದಲ್ಲದೆ ಅವುಗಳಿಗೆ ಉದಾರ ದಾನದತ್ತಿಗಳನ್ನು ನೀಡಿದನು.

ನಿಟ್ಟೂರು ಬಳಿಯ ಶಾಸನವು ವಿಷ್ಣು ವರ್ಧನನು ವೈಷ್ಣವ ವಿದ್ವಾಂಸರಿಗೆ ನೀಡಿದ ಭೂದತ್ತಿಯ ಬಗೆಗೆ ವಿವರಣೆಗಳನ್ನು ನೀಡುತ್ತದೆ. ಹಾಗೆಯೇ ಒಂದನೇ ನರಸಿಂಹ, ಎರಡನೇ ಬಲ್ಲಾಳ ಮತ್ತು ಎರಡನೇ ನರಸಿಂಹರು ಈ ಪಂಥದ ಬೆಳವಣಿಗೆಗೆ ವಿಶೇಷ ಪ್ರೋತ್ಸಾಹ ನೀಡಿದರು ಮತ್ತು ಅನೇಕ ವೈಷ್ಣವ ದೇವಾಲಯಗಳನ್ನು ಕಟ್ಟಿಸಿದರು. ಈ ಕಾಲದಲ್ಲೇ ಗಣನೀಯ ಪ್ರಮಾಣದಲ್ಲಿ ತಮಿಳುನಾಡಿನಿಂದ ವೈಷ್ಣವ ವಿದ್ವಾಂಸರು ಮತ್ತು ಮತ ಪ್ರಚಾರಕರು ಕರ್ನಾಟಕದಲ್ಲಿ ನೆಲೆಸಿದರು. ಈ ವೈಷ್ಣವ ಪಂಥ ಕಾಲಕ್ರಮೇಣದಲ್ಲಿ ಬಹಳ ಬಲಿಷ್ಠ ಪಂಥವಾಗಿ ಬೆಳೆಯಿತು.

ವೈಷ್ಣವ ಪಂಥದ ಸಂಸ್ಥಾಪಕನಾದ ಮಾಧ್ವಚಾರ್ಯರು (1238-1319) ಹೊಯ್ಸಳ ರಾಜ್ಯದಲ್ಲೆ ಹುಟ್ಟಿ ಬೆಳೆದು ತಮ್ಮ ಪಂಥವನ್ನು ಪ್ರಚಾರ ಮಾಡಿದರು. ಈ ಪಂಥದ ಜನ್ಮ ಸ್ಥಳ ತುಳುನಾಡು (ಇಂದಿನ ದಕ್ಷಿಣ ಕನ್ನಡ ಜಿಲ್ಲೆ) ಈ ನಾಡು ಹೊಯ್ಸಳರ ಸಾಮಂತರಾದ ಅಳುಪರಿಗೆ ಸೇರಿದ್ದಿತು. ಈ ಪಂಥದ ಆಚಾರ್ಯರು ಭಾರತಾದ್ಯಾಂತ ಪ್ರವಾಸ ಕೈಗೊಂಡು ಪ್ರಚಾರ ಮಾಡಿದರು. ಹೊಯ್ಸಳ ರಾಜ್ಯದಲ್ಲೇ ನೆಲಸಿ ತಮ್ಮ ಪಂಥದ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡರು. ಮೂಡುಗೆರೆ ತಾಲ್ಲೂಕಿನ ಮಾವಿನ ಕೆರೆ ಶಾಸನವು ಅವರ ಸಂದರ್ಶನ ಮತ್ತು ಪ್ರಚಾರ ಕಾರ್ಯಗಳ ಬಗ್ಗೆ ಮಾಹಿತಿಯನ್ನು ನೀಡುತ್ತದೆ. ಈ ಕಾಲದಲ್ಲಿ ಬೌದ್ಧ ಮತ ಸಂಪೂರ್ಣವಾಗಿ ಅವನತಿ ಹೊಂದಿದ್ದು ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದ್ದಿತು.

### *27.4.3 ವೀರಶೈವ ಪಂಥ*

ವೀರಶೈವ ಪಂಥದ ಬೆಳವಣಿಗೆ ಮತ್ತು ಅದರ ಪ್ರಭಾವವನ್ನು ಹೊಯ್ಸಳ ರಾಜ್ಯದಲ್ಲಿ ಗುರುತಿಸಬಹುದು. 11 ನೇ ಶತಮಾನದಲ್ಲಿ ಪಂಚಚಾರ್ಯರಿಂದ ಸ್ಥಾಪಿಸಲ್ಪಟ್ಟ ಈ ಪಂಥವು ಕಲ್ಯಾಣದಲ್ಲಿ ಪ್ರಬಲವಾಗಿ ಬೆಳೆದು ತನ್ನ ಸುತ್ತಮುತ್ತಲಿನ ಪ್ರದೇಶದ ಮೇಲೆ

ಪ್ರಭಾವ ಬೀರಿರುವುದಲ್ಲದೆ ದಕ್ಷಿಣ ಕರ್ನಾಟಕದ ಕಡೆಗೆ ವಿಸ್ತರಿಸಿರುವುದನ್ನು ಕಾಣಬಹುದು. ಚಾಳುಕ್ಯ ಸಾಮ್ರಾಜ್ಯದ ಪತನಗೊಂಡ ಮೇಲೆ ಈ ಪಂಥವು ಹೊಯ್ಸಳ ರಾಜ್ಯದಲ್ಲಿ ವಿಸ್ತರಿಸಿರುವುದನ್ನು ಗುರುತಿಸಬಹುದು. ಬಿ.ಎಲ್. ರೈಸ್‌ರ ಪ್ರಕಾರ ಬಸವಣ್ಣನವರು ಗತಿಸಿದ ಅರವತ್ತು ವರ್ಷದ ಅವಧಿಯಲ್ಲಿ ಈ ಪಂಥವು ಉಳವಿಯಿಂದ ಸೊಲ್ಲಾಪುರದವರೆಗೂ ಮತ್ತು ಬಾಳೆಹೊನ್ನೂರಿನಿಂದ ಶಿವಗಂಗಾದವರೆಗೂ ವಿಸ್ತರಿಸಿತೆಂದು ಅಭಿಪ್ರಾಯ ಪಟ್ಟಿದ್ದಾರೆ. ಹದಿಮೂರನೇ ಶತಮಾನ ನೆಲಮಂಗಲ ತಾಲ್ಲೋಕಿನ ಶಾಸನವು ಸುಮಾರು 12,000 ಲಿಂಗಾಯಿತ ಪುರೋಹಿತ ಒಡೆಯರುಗಳು ಶಿವಗಂಗದ ಗಂಗಾಧರ ದೇವಾಲಯದಲ್ಲಿದ್ದಾರೆಂದು ತಿಳಿಸುತ್ತದೆ. ಹಾಗೆಯೇ ಹರಿಹರ, ಪದ್ಮರಸ ಮತ್ತು ರಾಘುವಾಂಕ ವೀರ ಶೈವ ಕವಿಗಳು ಹೊಯ್ಸಳರ ಆಸ್ಥಾನದಲ್ಲಿದ್ದು ಹೊಯ್ಸಳ ರಾಜಾಶ್ರಯಕ್ಕೆ ಪಾತ್ರರಾಗಿದ್ದರು.

ಹೊಯ್ಸಳ ಕಾಲದ ಧಾರ್ಮಿಕ ಔದಾರ್ಯ, ವಿಶಾಲತೆ ಮತ್ತು ಸಹಿಷ್ಣುತೆಯ ಕುರುಹು ಆಗಿ ಕ್ರಿ.ಶ. 1223 ರಲ್ಲಿ ಹರಿಹರ ಪರಿಕಲ್ಪನೆ ಹರಿಹರ ದೇವಾ ನಿರ್ಮಾಣವಾದುದು ಪ್ರಮುಖ ಘಟನೆಯಾಗಿದೆ. ರಾಜರು ಮತ್ತು ಅಧಿಕಾರಿಗಳು ಅವರ ವೈಯುಕ್ತಿಕ ಪಂಥ ಯಾವುದೇ ಆಗಿದ್ದರು ದೇವಾಲಯಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಉದಾರ ಕೊಡುಗೆಗಳನ್ನು ನೀಡುತ್ತಿದ್ದರು. 'ಚತುಸಮಯ' ಉದ್ಧಾರಕರೆಂದು ಹೊಯ್ಸಳ ರಾಜರು ಮತ್ತು ದಂಡನಾಯಕರು ಕರೆದು ಕೊಂಡಿದ್ದಾರೆ.

## 27.5 ಸಾಹಿತ್ಯ ಬೆಳವಣಿಗೆ - ಸಂಸ್ಕೃತ ಮತ್ತು ಕನ್ನಡ

ಹೊಯ್ಸಳರ ಕಾಲವು ಸಾಹಿತ್ಯ ಕ್ಷೇತ್ರದಲ್ಲಿ ಶ್ಲಾಘನೀಯ ಬೆಳವಣಿಗೆಯಾಯಿತು. ವಿಶೇಷವಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಗಣನೀಯವಾದ, ವಿಚಾರ ಪೂರ್ವಕವಾದ ಹಾಗೂ ಅನಿರೀಕ್ಷಿತವಾದ ಬೆಳವಣಿಗೆಯನ್ನು ಕಾಣಬಹುದು. ಅದುವರೆಗೂ ಕನ್ನಡ ಸಾಹಿತ್ಯವು ಸಂಸ್ಕೃತ ಸಾಹಿತ್ಯ ಪರಂಪರೆಯನ್ನು ಅನುಸರಿಸುತ್ತಾ ಸಾಗುತ್ತಿದ್ದಿತು. ಆದರೆ ಈ ಪರಂಪರೆಯಲ್ಲಿ ಹನ್ನೆರಡನೇ ಶತಮಾನದಲ್ಲಿ ವಿಶೇಷ ಬದಲಾವಣೆಗಳುಂಟಾದವು. ಸ್ವತಂತ್ರ ಆಲೋಚನೆಗಳೂ, ದಾಟಿಯೂ, ರೂಪಗಳು ಕನ್ನಡ ಸಾಹಿತ್ಯದಲ್ಲಿ ಹನ್ನೆರಡನೇ ಶತಮಾನದಲ್ಲಿ ಹೊರಹೊಮ್ಮಿದವು. ಸಾಹಿತ್ಯ ಕೃಷಿಗೆ ಪ್ರವೇಶಿಸದಿದ್ದ ವರ್ಗಗಳ ಜನರು ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ್ದುದೂ; ಅದುವರೆವಿಗೂ ಸಾಹಿತ್ಯವು ಕೇವಲ ಧಾರ್ಮಿಕ ಚೌಕಟ್ಟಿಗೆ ಮೀಸಲಾಗಿದ್ದು ಈ ಕಾಲದಲ್ಲಿ ಇತರ ಕ್ಷೇತ್ರಗಳಿಗೂ ಪ್ರವೇಶಿಸಿದ್ದುದು; ಅದು ಹೆಚ್ಚು ಮಟ್ಟಿಗೆ ಚಂಪೂವಿನಿಂದ ಷಟ್ಪದಿ, ರಗಳೆ ಮೊದಲಾದ ಪ್ರಕಾರಗಳನ್ನು ರೂಢಿಗೆ ತಂದದ್ದೂ; ಅದುವರೆವಿಗೂ ಪಂಡಿತರು ಪಂಡಿತರಿಗಾಗಿ ಬರೆಯುತ್ತಿದ್ದ ಪದ್ಧತಿಯು ಕೊನೆಗೊಂಡು ಸಾಹಿತ್ಯವು ಸಮಾಜದ ಸಕಲ ವರ್ಗಗಳಿಗೂ ನಿಲುಕುವಂತಾದುದು; ಬ್ರಾಹ್ಮಣ ವಿದ್ವಾಂಸರು ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಿದ್ದುದು; ಕನ್ನಡವನ್ನು ಸಂಸ್ಕೃತದ ಹಿಡಿತದಿಂದ ಆದಷ್ಟು ಮಟ್ಟಿಗೆ ಮುಕ್ತಗೊಳಿಸಬೇಕೆಂಬ ಪ್ರಜ್ಞೆ ಮೂಡಿದುದು ಮೊದಲಾದ ಸಂಗತಿಗಳು ಹೊಯ್ಸಳರ ಮುಗಿದ ಹಾಗೂ 12 ನೇ ಶತಮಾನದ ಕನ್ನಡ ಸಾಹಿತ್ಯದ ಬೆಳವಣಿಗೆಯ ಪ್ರಮುಖ ಅಂಶಗಳಾಗಿವೆ.

ವಿದ್ಯಾಭ್ಯಾಸ ಪದ್ಧತಿಯಲ್ಲಿ ಬದಲಾವಣೆಯಾಗದಿದ್ದರೂ ಅಧಿಕಾರ ವರ್ಗದಿಂದ ಹಲವೇ ಸ್ಥಳಗಳಲ್ಲಿ ಬಾಲ ಶಿಕ್ಷಣಕ್ಕಾಗಿ ಶಾಲೆಗಳೂ ಮತ್ತು ವಿದ್ಯಾರ್ಥಿ ವಸತಿ ಗೃಹಗಳು ಸ್ಥಾಪಿತವಾದವು. ಇದು ಅಂದಿನ ಕಾಲದಲ್ಲಿ ಗಮನಾರ್ಹ ಸಂಗತಿಯಾಗಿದೆ. ಏಕೆಂದರೆ ಅದುವರೆಗೂ ದೇವಾಲಯಗಳು, ಮಠಗಳು ಮತ್ತು ಅಗ್ರಹಾರಗಳು ವಿದ್ಯಾಕೇಂದ್ರಗಳಾಗಿದ್ದವು. ಕ್ರಿ.ಶ. 1174 ರಲ್ಲಿ ಎರಡನೇ ಬಲ್ಲಾಳನ ದಂಡನಾಯಕನಾದ ಎರೆಯಣ್ಣ ಎಂಬುವನು ನರಸಿಂಹಪುರ ಎಂಬ ಗ್ರಾಮದಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿದನು. ಅನಂತರ ಇದೇ ರೀತಿಯ ಸಂಸ್ಥೆಯೊಂದು ಮೈಸೂರು ಜಿಲ್ಲೆಯ ಮಾಲಂಗಿಯ ಬಳಿಯಲ್ಲಿ ಕನ್ನಡ, ತಮಿಳು ಮತ್ತು ಆರ್ಯ ಭಾಷೆಗಳ ಕಲಿಕೆಗಾಗಿ ಸ್ಥಾಪಿತವಾಯಿತು. ಅಗ್ರಹಾರಗಳು ಮತ್ತು ಮಠಗಳು ವಿದ್ಯಾಕೇಂದ್ರಗಳಾಗಿದ್ದವು. ಇವರ ಕಾಲದಲ್ಲಿ ಹಿಂದಿಗಿಂತ ಹೆಚ್ಚು ಸಂಖ್ಯೆಯಲ್ಲಿ ಅಗ್ರಹಾರಗಳ ಸ್ಥಾಪನೆಯಾಯಿತು. ಆದರೆ ಇಂತಹ ವಿದ್ಯಾಕೇಂದ್ರಗಳಿಂದ ಹೊಸದಾದ ಮತ್ತು ಸೃಜನಾತ್ಮಕ ಸಾಹಿತ್ಯವೇನೂ ಸೃಷ್ಟಿಯಾಗಲಿಲ್ಲ. ವಿದ್ಯಾಭ್ಯಾಸವು ಪರಂಪರಾನುಗತವಾಗಿದ್ದಿತು. ವೇದಗಳು, ಉಪನಿಷತ್ತುಗಳು ಮತ್ತು ಪುರಾಣಗಳನ್ನು ಮುಖ್ಯವಾಗಿ ಅಭ್ಯಸಿಸಲಾಗುತ್ತಿತ್ತು. 'ಹೊಯ್ಸಳರ ಕಾಲದಲ್ಲಿ ಅನೇಕ ಪಂಡಿತರೂ, ಕವಿಗಳೂ ಇದ್ದರು. ಹೆಚ್ಚು ಸಂಖ್ಯೆಯಲ್ಲಿ ಕನ್ನಡ ಭಾಷೆಯಲ್ಲಿ ಗ್ರಂಥಗಳು ರಚನೆಯಾದವು. ಹೊಯ್ಸಳ ಯುಗದ ಪ್ರಾರಂಭದಲ್ಲಿ ಜೈನ ವಿದ್ವಾಂಸರಿಂದಲೂ, ಅನಂತರ ವೀರ ಶೈವ ಕವಿಗಳು ಮತ್ತು ಸಂತರಿಂದಲೂ ಗ್ರಂಥಗಳು ಹೆಚ್ಚು ಸಂಖ್ಯೆಯಲ್ಲಿ ರಚನೆಯಾದವು. ಕ್ರಮೇಣ ಬ್ರಾಹ್ಮಣ ವಿದ್ವಾಂಸರೂ, ಕವಿಗಳೂ ಕನ್ನಡ ಗ್ರಂಥ ರಚನೆಗೆ ತೊಡಗಿದರು.

ವಿಷ್ಣುವರ್ಧನನ ಆಸ್ಥಾನದ ಕವಿಯಾದ ನಾಗಚಂದ್ರನು ರಾಮಚಂದ್ರಚರಿತ ಪುರಾಣ ಮತ್ತು ಮಲ್ಲಿನಾಥಪುರಾಣ ಎಂಬ ಗ್ರಂಥಗಳನ್ನು ರಚಿಸಿದನು. ಇವನನ್ನು ಅಭಿನವ ಪಂಪ ಎಂಬ ಹೆಸರಿನಿಂದಲೇ ಕರೆಯಲಾಗಿದೆ. ಅನಂತರದ ಕವಿಯಾದ ಸೇವಚಾರ್ಯನ ಹೇಳಿಕೆಯ ಪ್ರಕಾರ ಕುಂತಿಯೆಂಬ ಕವಿಯತ್ರಿಯೂ ಅಭಿನವ ಪಂಪನ ಸಮಕಾಲೀನಳಾಗಿದ್ದು, ಹೊಯ್ಸಳ ಪ್ರಭುವಿನ ಆಸ್ಥಾನವನ್ನು ಸಂದರ್ಶಿಸಿದುದಾಗಿ ತಿಳಿದು ಬರುತ್ತದೆ. ಸುಪ್ರಸಿದ್ಧ ಕವಿ ಜನ್ನನ ತಂದೆಯಾದ ಸುಮನೋಬಾಣ ಎಂಬುವನು ಒಂದನೇ ನರಸಿಂಹನ ಆಸ್ಥಾನದಲ್ಲಿದ್ದ ಜಗದ್ದಲ ಎಂಬ ಪಂಡಿತನಿಂದ ರಚಿತವಾದ ಕರ್ನಾಟಕ ಕಲ್ಯಾಣ ಕಾರಕ ಗ್ರಂಥವನ್ನು ತಿದ್ದಲು ಸಹಕರಿಸಿದನೆಂದು ತಿಳಿದು ಬರುತ್ತದೆ. ಕನ್ನಡ ಈ ವೈದ್ಯಕೀಯ ಗ್ರಂಥವು ಹಲವಾರು ರೋಗ ಲಕ್ಷಣ ಮತ್ತು ಅವುಗಳ ಚಿಕಿತ್ಸೆಗಳನ್ನು ಒಳಗೊಂಡಿದೆ. ಇದೇ ಕಾಲದಲ್ಲಿ ಕೀರ್ತಿವರ್ಮ ಎಂಬುವನಿಂದ ಗೋವೈದ್ಯ ಎಂಬ ಗ್ರಂಥವು ರಚನೆಯಾಯಿತು. ನಯಸೇನನು ಸಹ ಈ ಕಾಲಕ್ಕೆ ಸೇರಿದವನೆಂದು ತಿಳಿದು ಬರುತ್ತದೆ.

ಹಲವು ವಿದ್ವಾಂಸಕರ ಪ್ರಕಾರ ಹರಿಹರ ಮತ್ತು ರಾಘವಾಂಕರು ಒಂದನೇ ನರಸಿಂಹನ ಸಮಕಾಲೀನರಾಗಿದ್ದರು. ಗಿರಿಜ ಕಲ್ಯಾಣವು ಹರಿಹರನ ಪ್ರಸಿದ್ಧ ಗ್ರಂಥವಾಗಿದೆ. ಇವನು ನೂರಕ್ಕೂ ಮಿಗಿಲಾದ ರಗಳೆಗಳನ್ನು ರಚಿಸಿದುದಾಗಿ ತಿಳಿದು ಬರುತ್ತದೆ. ಇವುಗಳು ದಕ್ಷಿಣ ಭಾರತದ ಶೈವ ಸಂತರು ಮತ್ತು ಕನ್ನಡ ನಾಡಿನ ವೀರಶೈವ ಸಂತರನ್ನು ಕುರಿತು ರಚಿಸಿದ ಕೃತಿಗಳಾಗಿವೆ. ಹರಿಹರನ ಸೋದರಳಿಯನಾದ ರಾಘವಾಂಕನು ಷಟ್ಪದಿಯಲ್ಲಿ ತನ್ನ ಗ್ರಂಥಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯದ ಸೊಬಗನ್ನು ಹೆಚ್ಚಿಸಿದ್ದಾನೆ. ಇವನು ಹರಿಶ್ಚಂದ್ರ ಕಾವ್ಯ, ಸಿದ್ದರಾಮ ಪುರಾಣ, ಸೋಮನಾಥ ಚರಿತೆ, ವೀರೇಶ ಚರಿತೆ ಮತ್ತು ಹರಿಹರ ಮಹತ್ವ ಮುಂತಾದ ಗ್ರಂಥಗಳನ್ನು ರಚಿಸಿದನು. ದೀಕ್ಷಾಬೋಧೆಯ ಕರ್ತೃವಾದ ಕೆರೆಯ ಪದ್ಮರಸನೂ ಒಂದನೇ ನರಸಿಂಹನ ಸಮಕಾಲೀನನಾಗಿದ್ದನು. ಅಲ್ಲದೆ ವೀರಶೈವ ಪಂಥದ ಅನೇಕ ಸಂತರು ಆ ಕಾಲದಲ್ಲಿ ಸುಪ್ರಸಿದ್ಧ ವಚನಗಳನ್ನು ಕನ್ನಡದಲ್ಲಿ ಹೃದಯಂಗಮವಾಗಿ ರಚಿಸಿದರು.

ಇಮ್ಮಡಿ ವೀರಬಲ್ಲಾಳನ ಆಸ್ಥಾನದಲ್ಲಿ ಅನೇಕ ಕವಿಗಳಿದ್ದರು. ಅವರಲ್ಲೆಲ್ಲಾ ಪ್ರಸಿದ್ಧನಾದವನು ಜನ್ನ. ಜನ್ನನು ಯಶೋಧರ ಚರಿತೆ ಮತ್ತು ಅನಂತನಾಥ ಪುರಾಣವನ್ನು ರಚಿಸಿದನು. ಹೊಯ್ಸಳ ಚಕ್ರವರ್ತಿ ವೀರ ಬಲ್ಲಾಳನು ಜನ್ನನಿಗೆ ಕವಿಚಕ್ರವರ್ತಿ ಎಂಬ ಬಿರುದನ್ನು ನೀಡಿ ಗೌರವಿಸಿದನು. ನೇಮಿಚಂದ್ರನು ವೀರ ಬಲ್ಲಾಳನ ಆಸ್ಥಾನದ ಮತ್ತೊಬ್ಬ ಪ್ರಸಿದ್ಧ ಕವಿಯಾಗಿದ್ದನು. ಇವನನ್ನು ಅರ್ಧನೇಮಿ ಎಂದು ಕರೆಯಲಾಗಿರುವ ನೇಮಿಚಂದ್ರ ಪುರಾಣವನ್ನು ಮತ್ತು ಲೀಲಾವತಿ ಎಂಬ ಗ್ರಂಥವನ್ನೂ ರಚಿಸಿದನು. ಲೀಲಾವತಿ ಗ್ರಂಥವು ಬಾಣನ ಕಾದಂಬರಿ ಮತ್ತು ಸುಬಂಧುವಿನ ವಾಸವದತ್ತ ಗ್ರಂಥಗಳಂತೆ ಕನ್ನಡದಲ್ಲಿ ಪ್ರಸಿದ್ಧಿಯಾಗಿದೆ. ಕಬ್ಬಿಗರ ಕಾವ್ಯಗ್ರಂಥದ ಕರ್ತೃವಾದ ಅಂಡಯ್ಯನು ಸಹ ಇದೇ ಕಾಲದವನು. ಮತ್ತೊಬ್ಬ ಪ್ರಸಿದ್ಧ ಕವಿಯಾದ ರಾಜಾದಿತ್ಯನು ವೀರ ಬಲ್ಲಾಳನ ಸಮಕಾಲೀನನಾಗಿದ್ದು ಕ್ಷೇತ್ರ ಗಣಿತ, ವ್ಯವಹಾರಗಣಿತ ಮತ್ತು ಲೀಲಾವತಿ ಗ್ರಂಥಗಳನ್ನು ರಚಿಸಿದನು. ಮೊಟ್ಟ ಮೊದಲನೆ ಪ್ರಖ್ಯಾತ ಬ್ರಾಹ್ಮಣ ಕವಿಯಾದ ರುದ್ರಭಟ್ಟನು ವೀರಬಲ್ಲಾಳನ ಸಮಕಾಲೀನನಾಗಿದ್ದು ಜಗನ್ನಾಥವಿಜಯ ಎಂಬ ಗ್ರಂಥವನ್ನು ರಚಿಸಿದನು. ಇಮ್ಮಡಿ ನರಸಿಂಹನ ಕಾಲದ ಪ್ರಮುಖ ದಂಡನಾಯಕರಲೊಬ್ಬನಾದ ಪೊಲಾಳ್ವನು ಷಟ್ಪದಿಯಲ್ಲಿ ಹರಿಚರಿತ ಎಂಬ ಗ್ರಂಥವನ್ನು ರಚಿಸಿದನು., ವೀರಸೋಮೇಶ್ವರನ ಕಾಲದಲ್ಲಿ ಮಲ್ಲಿಕಾರ್ಜುನ ಕವಿಯಿಂದ ಸೂಕ್ತಿ ಸುಧಾರ್ಣವ ಎಂಬ ಗ್ರಂಥವು ರಚನೆಯಾಯಿತು. ಮಲ್ಲಿಕಾರ್ಜುನನ ಪುತ್ರನಾದ ಕೇಶಿ ರಾಜನು ಕನ್ನಡದ ಸುಪ್ರಸಿದ್ಧ ವ್ಯಾಕರ ಗ್ರಂಥವಾದ ಶಬ್ದಮಣಿದರ್ಪಣವನ್ನು ರಚಿಸಿದನು. ಇನ್ನೂ ಅನೇಕ ಕನ್ನಡ ಗ್ರಂಥಗಳು ಹೊಯ್ಸಳರ ಕಾಲದಲ್ಲಿ ರಚಿತವಾದವು.

ಹೊಯ್ಸಳರ ಕಾಲದಲ್ಲಿ ಸಂಸ್ಕೃತ ಭಾಷೆಯಲ್ಲಿಯೂ ಅನೇಕ ಗ್ರಂಥಗಳು ರಚನೆಯಾದವು. ಶ್ರೀರಾಮಾನುಜಾಚಾರ್ಯರಿಂದ ವಿಶಿಷ್ಟಾದ್ವೈತ ಪಂಥಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳೂ ಮತ್ತು ದ್ವೈತ ಪಂಥ ಪ್ರತಿಪಾದಕರಾದ ಶ್ರೀ ಮಧ್ವಾಚಾರ್ಯರಿಂದ ಆ ಪಂಥಕ್ಕೆ ಸಂಬಂಧಿಸಿದ ಅನೇಕ ಗ್ರಂಥಗಳೂ ಸಂಸ್ಕೃತದಲ್ಲಿ ರಚನೆಯಾದವು. ಹೊಯ್ಸಳರ ಆಸ್ಥಾನದಲ್ಲಿ ವಿದ್ಯಾಚಕ್ರವರ್ತಿ ಎಂಬ ಪಂಡಿತ ಮನೆತನವಿದ್ದಿತು. ಒಂದನೇ ವಿದ್ಯಾಚಕ್ರವರ್ತಿ ಎಂಬುವನು ಎರಡನೇ ವೀರಬಲ್ಲಾಳನ ಆಸ್ಥಾನದಲ್ಲಿದ್ದು ಸಂಸ್ಕೃತದಲ್ಲಿ ಕಾವ್ಯಮಯವಾದ ಶಾಸನಗಳನ್ನು ರಚಿಸಿರುವನು. ಇವನ ಮಗನಾದ ವೈದ್ಯನಾಥ ಎಂಬುವನು ಇಮ್ಮಡಿ ನರಸಿಂಹನ ಆಸ್ಥಾನದಲ್ಲಿದ್ದನು. ವೈದ್ಯನಾಥನ ಮಗನಾದ ಎರಡನೇ ವಿದ್ಯಾ ಚಕ್ರವರ್ತಿಯೂ ಪ್ರಸಿದ್ಧವಾದ ಗದ್ಯಕರ್ಣಾಮೃತವನ್ನು ರಚಿಸಿದನು. ಇವನ ಮೊಮ್ಮಗನಾದ ಮೂರನೇ ವಿದ್ಯಾಚಕ್ರವರ್ತಿಯು ರುಕ್ಮಿಣೀಕಲ್ಯಾಣ ಎಂಬ ಗ್ರಂಥವನ್ನು ರಚಿಸಿದನು. ತ್ರಿವಿಕ್ರಮ ಪಂಡಿತನು ಉಷಾಪಹರಣ ಎಂಬುದನ್ನು, ನಾರಾಯಣ ಪಂಡಿತ ಎಂಬುವನು ಮಾಧ್ವವಿಜಯ, ಮಣಿಮಂಜರಿ ಮತ್ತು ಪಾರಿಜಾತಹರಣ ಎಂಬ ಗ್ರಂಥಗಳನ್ನು ರಚಿಸಿದರು.

## 27.6 ಸಾರಾಂಶ

ಈ ಘಟಕದಲ್ಲಿ ಹೊಯ್ಸಳರ ಕಾಲದಲ್ಲಿ ಉದಯವಾದ ವಿಶಿಷ್ಟ ಕಲಾವಿನ್ಯಾಸಗಳು ಪ್ರಮುಖ ಲಕ್ಷಣಗಳನ್ನು ಮನದಟ್ಟು ಮಾಡಿಕೊಡಲಾಗಿದೆ. ಈ ಕಲಾ ಪರಂಪರೆ ಚಾಳುಕ್ಯರ ಕಲಾಸಂಪ್ರದಾಯದಿಂದ ಸ್ಪೂರ್ತಿ ಪಡೆದು ಇವರ ಕಾಲದಲ್ಲಿ ಸಂಪೂರ್ಣ ಪರಿಪೂರ್ಣತೆಯನ್ನು ಪಡೆದಿರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ. ಹೊಯ್ಸಳರ ಸಾಮ್ರಾಜ್ಯದಲ್ಲಿ ಕಂಡು ಬಂದಿರುವ ವಿವಿಧ ವಾಸ್ತುಶಿಲ್ಪಗಳ ಸಂಕ್ಷಿಪ್ತ ಸಮೀಕ್ಷೆಯನ್ನು ನೀಡಲಾಗಿದೆ.

ಹೊಯ್ಸಳ ಸಾಮ್ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ ನಾಲ್ಕು ಪ್ರಮುಖ ಧಾರ್ಮಿಕ ಪಂಥಗಳು ಮತ್ತು ಅವುಗಳಿಗೆ ಸಂಬಂಧಿಸಿದ ಗುಡಿಗೋಪುರಗಳನ್ನು ನಿಮಗೆ ನೀಡಲಾಗಿದೆ.

ಇವರ ಕಾಲದಲ್ಲಿ ಪ್ರಗತಿಯನ್ನು ಕಂಡ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದ ವಿವರಣೆಗಳನ್ನು ಘಟಕದಲ್ಲಿ ನೀಡಿ ನಿಮ್ಮ ಗಮನ ಸೆಳೆಯಲಾಗಿದೆ.

## 27.7 ಸ್ವಪರೀಕ್ಷೆ ಪ್ರಶ್ನೆಗಳು

1. ಹೊಯ್ಸಳ ಕಲಾಶೈಲಿಯ ಪ್ರಮುಖ ಲಕ್ಷಣಗಳನ್ನು ಉದಾಹರಣೆ ಸಹಿತ ತಿಳಿಸಿ.
2. ಹೊಯ್ಸಳರ ಕಾಲದ ಧಾರ್ಮಿಕ ಪರಿಸ್ಥಿತಿಯನ್ನು ಕುರಿತು ಬರೆಯಿರಿ.
3. ಹೊಯ್ಸಳರ ಕಾಲದ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದ ಬೆಳವಣಿಗೆ ಮೇಲೆ ಬೆಳಕನ್ನು ಚೆಲ್ಲಿರಿ.

## 27.8 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1. B.Sheik Ali (Ed) : **The Hoysala Dynasty**
2. ಆರ್.ಆರ್. ದಿವಾಕರ್ (ಸಂ) : ಕರ್ನಾಟಕ ಪರಂಪರೆ (ಸಂ -1)
3. Furgusson : **History of Indian Architecture**
4. Percy Brown : **Indian Architecture**
5. W. Coelho : **The Hoysala Vamsa**
6. ಸುರೇಂದ್ರರಾವ್ : ಕರ್ನಾಟಕ ಇತಿಹಾಸ (ಸಂ. 2) ಕ.ವಿ.ಹಂ.

# ಟಿಪ್ಪಣಿಗಳು

ಕರ್ನಾಟಕ ರಾಜ್ಯ ಮುಕ್ತ
ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ,
ಮೈಸೂರು - 570 006

ಎಂ.ಎ. (ಪ್ರಥಮ)
ಇತಿಹಾಸ
ಕೋರ್ಸ್ -1

ಬ್ಲಾಕ್

# 7A

ಘಟಕ - 28

ಬೌದ್ಧ ಮತ್ತು ಜೈನಧರ್ಮಗಳ ಪ್ರಭಾವ

ಘಟಕ - 29

ದಕ್ಷಿಣ ಭಾರತದಲ್ಲಿ ವೈಷ್ಣವ ಧರ್ಮ

ಘಟಕ - 30

ಶೈವ ಧರ್ಮ ಮತ್ತು ವೀರಶೈವ ಪಂಥ

## ಪಠ್ಯಕ್ರಮವಿನ್ಯಾಸ ಮತ್ತು ಸಂಪಾದಕ ಮಂಡಳಿ

**ಪ್ರೊ. ಎಂ.ಜಿ. ಕೃಷ್ಣನ್**
ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಡಾ. ಎಂ. ಸುಶೀಲ ಅರಸ್**
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರಾಮುವಿ, ಮೈಸೂರು

**ಪ್ರೊ. ಎಸ್. ಎನ್. ವಿಕ್ರಂ ರಾಜೇ ಅರಸ್**
ಡೀನ್ (ಶೈಕ್ಷಣಿಕ) ಮತ್ತು ಸಮಾವೇಶಕರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

***ವಿಷಯ ಸಂಯೋಜಕರು***

## ಪಠ್ಯಕ್ರಮ ನಿರೂಪಕರು

**ಡಾ. ಮಾದೇಗೌಡ**
ಇತಿಹಾಸ ಪ್ರಾಧ್ಯಾಪಕರು,
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು

**ಘಟಕಗಳು 28 ರಿಂದ 30**

## ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ೨೦೧೩

ಎಲ್ಲಾ ಹಕ್ಕುಗಳನ್ನು ಕಾದಿರಿಸಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸ್‌ಗಳ ಹೆಚ್ಚಿನ ವಿವರಣೆಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸ ಗಂಗೋತ್ರಿ, ಮೈಸೂರು-06 ಇಲ್ಲಿಂದ ಪಡೆಯಬಹುದು.

ಮುದ್ರಕರು ಮತ್ತು ಪ್ರಕಾಶಕರು - ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು ಇವರ ಪರವಾಗಿ
ಕುಲಸಚಿವರು (ಆಡಳಿತ)

# ಇತಿಹಾಸ

## ಕೋರ್ಸ್ ೯ - 1

## ಬ್ಲಾಕ್ - 7A

### ಪೀಠಿಕೆ

ದಕ್ಷಿಣ ಭಾರತದಲ್ಲಿ ಅನೇಕ ಧರ್ಮಗಳು ಪ್ರವರ್ಧಮಾನಕ್ಕೆ ಬಂದು, ಇಲ್ಲಿನ ಧರ್ಮ ಮತ್ತು ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದವು. ಈ ವಿಷಯಕ್ಕೆ ಸಂಬಂಧಿಸಿದ ವಿವರಗಳನ್ನು ಈ ಬ್ಲಾಕಿನಲ್ಲಿ ನೀಡಲಾಗಿದೆ. ಘಟಕ 28 ರಲ್ಲಿ ದಕ್ಷಿಣ ಭಾರತದ ಕಲೆ, ಸಾಹಿತ್ಯ ಹಾಗೂ ಧಾರ್ಮಿಕ ಜೀವನಗಳ ಮೇಲೆ ಬೌದ್ಧ ಹಾಗೂ ಜೈನ ಧರ್ಮಗಳ ಪ್ರಭಾವವನ್ನು ವಿವರಿಸಲಾಗಿದೆ. ಘಟಕ 29 ರಲ್ಲಿ ವೈಷ್ಣವ ಧರ್ಮ ದಕ್ಷಿಣ ಭಾರತದಲ್ಲಿ ಉನ್ನತ ಮಟ್ಟಕ್ಕೆ ಏರಿ, ಇಲ್ಲಿನ ಸಂಸ್ಕೃತಿಯನ್ನು, ಅದರಲ್ಲೂ ವಿಶೇಷವಾಗಿ ದೇವಾಲಯ ನಿರ್ಮಾಣವನ್ನು, ಶ್ರೀಮಂತಗೊಳಿಸಿದ ಬಗೆಗೆ ನೀವು ಅರಿಯುವಿರಿ. ಘಟಕ 30 ರಲ್ಲಿ ಶೈವ ಧರ್ಮ ಹಾಗೂ ವೀರಶೈವ ಧರ್ಮ ಮತ್ತು ಅವುಗಳ ಕೊಡುಗೆಯನ್ನು ನೀವು ತಿಳಿದುಕೊಳ್ಳುವಿರಿ.

ಅಧ್ಯಕ್ಷರು,
ಇತಿಹಾಸ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ,
ಮಾನಸ ಗಂಗೋತ್ರಿ, ಮೈಸೂರು.

# ಘಟಕ - 28

# ಬೌದ್ಧ ಮತ್ತು ಜೈನಧರ್ಮಗಳ ಪ್ರಭಾವ

## ವಿಷಯ ಕ್ರಮ


28.0 ಘಟಕದ ಉದ್ದೇಶ

28.1 ಪೀಠಿಕೆ

28.2 ಮೌರ್ಯ, ಶಾತವಾಹನ ಮತ್ತು ಕದಂಬರ ಕಾಲದಲ್ಲಿ ಬೌದ್ಧ ಧರ್ಮ

28.3 ರಾಷ್ಟ್ರಕೂಟರು ಮತ್ತು ಬೌದ್ಧ ಸಂಪ್ರದಾಯಗಳು

28.4 ಬೌದ್ಧ ಧರ್ಮದ ವಿಲೀನತೆಯ ದೃಷ್ಟಾಂತಗಳು

28.5 ಜೈನಧರ್ಮ

28.6 ಭದ್ರಬಾಹು ಪರಂಪರೆ; ಶಾತವಾಹನ, ಕದಂಬ ಮತ್ತು ಬಾದಾಮಿ ಚಾಳುಕ್ಯರ ಕಾಲದಲ್ಲಿ ಜೈನಧರ್ಮದ ಪ್ರಗತಿ

28.7 ತಲಕಾಡಿನ ಗಂಗರು ಮತ್ತು ಜೈನಧರ್ಮ

28.8 ರಾಷ್ಟ್ರಕೂಟರ ಕಾಲದಲ್ಲಿ ಜೈನಧರ್ಮದ ಏಳಿಗೆ

28.9 ಹೊಯ್ಸಳರು ಮತ್ತು ಜೈನಧರ್ಮ

28.10 ಕರ್ನಾಟಕದಲ್ಲಿ ಜೈನ ಧರ್ಮದ ಇಳಿಮುಖ

28.11 ಪ್ರಾಚೀನ ತಮಿಳು ನಾಡಿನಲ್ಲಿ ಜೈನ ಮತಾಚರಣೆ

28.12 ಸಾರಾಂಶ

28.13 ಸ್ವಪರೀಕ್ಷೆ ಪ್ರಶ್ನೆಗಳು

28.14 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 28.0 ಘಟಕದ ಉದ್ದೇಶ

* ದಕ್ಷಿಣ ಭಾರತದ ಸಮಾಜ ಮತ್ತು ಸಂಸ್ಕೃತಿ ರೂಪುಗೊಳ್ಳಲು ಬೌದ್ಧ ಮತ್ತು ಜೈನ ಧರ್ಮಗಳ ಪ್ರಭಾವವನ್ನು ಗುರುತಿಸುವುದು ಈ ಘಟಕದ ಉದ್ದೇಶವಾಗಿದೆ. ಈ ಪಾಠವನ್ನು ಅಭ್ಯಾಸಿಸಿದ ಮೇಲೆ ಕೆಳಕಂಡ ವಿಷಯಗಳನ್ನು ಕಲಿಯುವಿರಿ.

* ದಕ್ಷಿಣ ಭಾರತವು ಪ್ರಥಮ ಬಾರಿಗೆ ಉತ್ತರದ 'ಆರ್ಯಕರಣ' ಸಾಂಸ್ಕೃತಿಕ ಪ್ರಕ್ರಿಯೆಗೆ ಒಳಗಾದ ನಂತರ, ಐತಿಹಾಸಿಕ ಯುಗದಲ್ಲಿ ಈ ಎರಡು ಸುಸಂಘಟಿತ ಧರ್ಮಗಳು ದಖ್ಖನ್ ಮತ್ತು ದಕ್ಷಿಣ ಭಾರತದ ಸಮಾಜ ಮತ್ತು ಸಂಸ್ಕೃತಿ ರೂಪಿಸುವಲ್ಲಿ ಇವುಗಳ ಪ್ರಭಾವವನ್ನು ಕಾಣಬಹುದು.

* ದಕ್ಷಿಣ ಭಾರತದ ಹಲವಾರು ರಾಜ ಮನೆತನಗಳು ಈ ಧರ್ಮಗಳ ಪೋಷಕರಾಗಿದ್ದು ಅವುಗಳ ಬೆಳವಣಿಗೆಗೆ ಉದಾರ ಪ್ರೋತ್ಸಾಹ ನೀಡಿದ್ದಾರೆ.

* ಮೌರ್ಯ ಚಕ್ರವರ್ತಿ ಅಶೋಕ ಮಹಾಶಯನು ಈ ಧರ್ಮ ವಿಸ್ತರಣೆ ಮತ್ತು ಪ್ರಚಾರಕ್ಕೆ ಅಮೋಘ ಸೇವೆ ಸಲ್ಲಿಸಿದ್ದಾನೆ.

* ದಕ್ಷಿಣ ಭಾರತದ ಅರಸು ಮನೆತನಗಳಾದ ಶಾತವಾಹನರು, ಕದಂಬರು, ಬಾದಾಮಿ ಚಾಳುಕ್ಯರು, ಗಂಗರು, ಪಲ್ಲವರ ಕಾಲದಲ್ಲಿ ಈ ಧರ್ಮದ ಅಸ್ತಿತ್ವವನ್ನು ಕಾಣಬಹುದು.

* ಹೂಯನ್‌ತ್ಸಾಂಗನು ಈ ಧರ್ಮದ ವ್ಯಾಪಕತೆ ಮತ್ತು ಅದರ ಕ್ಷೀಣಸ್ಥಿತಿಯ ಬಗ್ಗೆ ಮಾಹಿತಿಯನ್ನು ನೀಡಿದ್ದಾನೆ.

* ಜೈನಧರ್ಮ ಐತಿಹಾಸಿಕ ಕಾಲದಿಂದ ಕರ್ನಾಟಕದಲ್ಲಿ ಪ್ರಸಾರಗೊಂಡು ಕರ್ನಾಟಕ ಸಂಸ್ಕೃತಿಯ ಬೆಳವಣಿಗೆಗೆ ಅಪಾರ ಕೊಡುಗೆಯನ್ನು ನೀಡಿರುವುದನ್ನು ಗಮನಿಸಬಹುದು.

* ಕರ್ನಾಟಕದ ಅರಸು ಮನೆತನಗಳಾದ ಶಾತವಾಹನ, ಕದಂಬ, ಗಂಗರು, ಬಾದಾಮಿ ಚಾಳುಕ್ಯರು ಮತ್ತು ಹೊಯ್ಸಳರು ಈ ಧರ್ಮದ ಪ್ರಗತಿಗೆ ಅಪಾರ ಕೊಡುಗೆಯನ್ನು ನೀಡಿದ್ದಾರೆ.

* ಸಾಹಿತ್ಯ, ತತ್ವಜ್ಞಾನ, ಮತ್ತು ಕಲೆಗಳ ಬೆಳವಣಿಗೆಗೆ ಈ ಧರ್ಮ ಅಮೋಘ ಕೊಡುಗೆ ನೀಡಿರುವುದನ್ನು ತಿಳಿಯಬಹುದಾಗಿದೆ.

## 28.1 ಪೀಠಿಕೆ

ಪ್ರಾಚೀನ ದಕ್ಷಿಣ ಭಾರತವು ಎರಡು ಹಂತಗಳಲ್ಲಿ ಉತ್ತರ ಭಾರತದ ಸಾಂಸ್ಕೃತಿಕ ಪ್ರಭಾವಕ್ಕೆ ಒಳಗಾಗಿರುವುದನ್ನು ಗುರುತಿಸಬಹುದು. ಮೊದಲನೆ ಹಂತದಲ್ಲಿ ದಕ್ಷಿಣ ಭಾರತವು 'ಆರ್ಯಕರಣ' ಪ್ರಕ್ರಿಯೆಗೆ ಒಳಗಾಯಿತು. ರಾಮಾಯಣ ಮತ್ತು ಅಗಸ್ತ್ಯ ಋಷಿಯ ಆಗಮನದ ಬಗ್ಗೆ ಇರುವ ಕತೆಗಳು ಉತ್ತಮ ನಿದರ್ಶನವಾಗಿವೆ. ಈ ಅವಧಿಯಲ್ಲಿ ದಕ್ಷಿಣ ಭಾರತದ ಸಮಾಜವು ಆರ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುವುದಕ್ಕೆ ಅನೇಕ ನಿದರ್ಶನಗಳಿವೆ. ತಮಿಳುನಾಡಿನ ಸಂಗಮ್ ಯುಗದಲ್ಲಿ ಈ ಪ್ರಕ್ರಿಯೆಯನ್ನು ಕಾಣಬಹುದು. ಎರಡನೇ ಹಂತದಲ್ಲಿ ಉತ್ತರದಿಂದ ಆಗಮಿಸಿದ ಎರಡು ಸುಸಂಘಟಿತ ಧರ್ಮಗಳ ಪ್ರಭಾವ ಅವೇ ಜೈನ ಮತ್ತು ಬೌದ್ಧ ಧರ್ಮಗಳು. ಈ ಎರಡು ಧರ್ಮಗಳು ಐತಿಹಾಸಿಕ ಯುಗದ ಆರಂಭದಿಂದಲೂ ಪ್ರಚಾರಗೊಂಡಿರುವುದರ ಬಗ್ಗೆ ದೊರೆತಿರುವ ಮಾಹಿತಿಗಳಿಂದ ದೃಢವಾಗುತ್ತದೆ. ದಕ್ಷಿಣ ಭಾರತದ ಜನಜೀವನದ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಂಪರೆಗಳನ್ನು ರೂಪಿಸುವಲ್ಲಿ ಮೇಲ್ಕಂಡ ಧರ್ಮಗಳ ಪ್ರಭಾವವನ್ನು ಗುರುತಿಸಬಹುದು.

## 28.2 ಮೌರ್ಯ, ಶಾತವಾಹನ ಮತ್ತು ಕದಂಬರ ಕಾಲದಲ್ಲಿ ಬೌದ್ಧ ಧರ್ಮ

ಬೌದ್ಧ ಧರ್ಮವು ಮೌರ್ಯ ಯುಗದ ವೇಳೆಗೆ ದಖ್ಖನ್ನಿನಲ್ಲಿ ಪ್ರಚಾರಕ್ಕೆ ಬಂದಿದ್ದಿತು. ಕನ್ನಡ ನಾಡಿನಲ್ಲಿ ದೊರೆತಿರುವ ಶಾಸನಗಳಲ್ಲಿ ಅಶೋಕನ ಶಾಸನಗಳೇ ಪ್ರಪ್ರಥಮವಾದವು. ಬೌದ್ಧ ಧರ್ಮದ ಸಂದೇಶಗಳನ್ನು ಹೊತ್ತ ಅಶೋಕನ ಶಾಸನಗಳು ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ, ಸಿದ್ಧಾಪುರ ಮತ್ತು ಜಟಿಂಗ ರಾಮೇಶ್ವರ, ರಾಯಚೂರು ಜಿಲ್ಲೆಯ ಮಸ್ಕಿ ಮತ್ತು ಕೊಪ್ಪಳದ ಬಳಿಯೂ ದೊರೆತಿವೆ. ಅಶೋಕನ ಶಾಸನಗಳೆಲ್ಲಾ ಹೆಚ್ಚು ಮಟ್ಟಿಗೆ ಅವನ ದೇವನಾಂಪ್ರಿಯ ಮತ್ತು ಪ್ರಿಯದರ್ಶಿ ಎಂಬ ಬಿರುದುಗಳನ್ನು ಒಳಗೊಂಡಿದ್ದವು. ಸಿಂಹಳದ ಬೌದ್ಧ ಗ್ರಂಥ ಮಹಾವಂಶದ ಪ್ರಕಾರ ಅಶೋಕನು ಮಹಿಷಮಂಡಲ ಮತ್ತು ಬನವಾಸಿಗೆ ಬೌದ್ಧ ಧರ್ಮವನ್ನು ಪ್ರಚಾರ ಮಾಡಲು ರಕ್ಷಿತ ಮತ್ತು ಮಹಾದೇವ ಎಂಬ ಬೌದ್ಧ ಭಿಕ್ಷುಗಳನ್ನು ಕಳುಹಿಸಿದುದು ತಿಳಿದು ಬರುತ್ತದೆ. ಕ್ರಮೇಣ ಕನ್ನಡನಾಡಿನ ಹಲವು ಪ್ರದೇಶಗಳಲ್ಲಿ ಬೌದ್ಧ ವಿಹಾರಗಳು ಸ್ಥಾಪಿತವಾದವು.

ಶಾತವಾಹನರ ಕಾಲವು ದಖ್ಖನ್ನಿನಲ್ಲಿ ಬೌದ್ಧ ಧರ್ಮದ ಉತ್ಕೃಷ್ಟ ಕಾಲವೆಂದು ಪರಿಗಣಿಸಲ್ಪಟ್ಟಿದೆ. ಬೌದ್ಧ ಧರ್ಮದ ಮೇಲ್ಮೆಗಾಗಿ ನೂರಾರು ಸಂಖ್ಯೆಯಲ್ಲಿ ವಿಹಾರಗಳೂ, ಚೈತ್ರಗಳೂ, ಬೌದ್ಧ ಗುಹಾಂತರ್ದೇವಾಲಯಗಳೂ ಶಾತವಾಹನರ ಸಾಮ್ರಾಜ್ಯದಲ್ಲಿ ಸ್ಥಾಪಿತವಾದವು. ಅಜಂತ ಮತ್ತು ಇತರ ಸ್ಥಳಗಳ ಪ್ರಸಿದ್ಧ ಗುಹಾಂತರದೇವಾಲಯಗಳು ಆ ಕಾಲದಲ್ಲಿ ಅಸ್ತಿತ್ವಕ್ಕೆ ಬಂದವು. ಕ್ರಮೇಣ ಅವುಗಳ ಮಾದರಿಯನ್ನನುಸರಿಸಿ ಇವರ ತರುವಾಯ ಬಂದ ಅನೇಕ ದಖ್ಖನ್ನಿನ ಅರಸು ಮನೆತನಗಳು ಅನುಕರಣೆ ಮಾಡಿ ದೇವಾಲಯಗಳನ್ನು ನಿರ್ಮಾಣ ಮಾಡಿದರು. ಅಶೋಕನ ಪರಿಶ್ರಮದಿಂದ ಬನವಾಸಿಯಲ್ಲಿ ಹಬ್ಬಿದ ಬೌದ್ಧಮತ, ಅಲ್ಲಿ ಅನೇಕ ಸ್ತೂಪಗಳ ರಚನೆಗೆ ಪ್ರೇರಣೆಯಾಗಿತ್ತು. ಕ್ರಿ.ಶ. 7 ನೇ ಶತಮಾನದಲ್ಲಿ ಬನವಾಸಿಗೆ ಭೇಟಿ ನೀಡಿದ್ದ ಹೂಯನ್‌ತ್ಸಾಂಗನ ಅಭಿಪ್ರಾಯದಂತೆ, ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಂಘಾರಾಮಗಳಿದ್ದವು.

ತಲಕಾಡು ಗಂಗರ ಹಲವು ಶಾಸನಗಳಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಸಂಗತಿಗಳು ತಿಳಿದು ಬರುತ್ತವೆ. ಕ್ರಿ.ಶ. 4ನೇ ಶತಮಾನದ ಕೊನೆಯಲ್ಲಿ ಆಳ್ವಿಕೆ ನಡೆಸಿದ ಗಂಗ ಸಂತತಿಯ ಹರಿವರ್ಮನ ಕಾಲದ ಘಟನೆಯೊಂದು ಬೌದ್ಧ ಧರ್ಮದ ಸಂಗತಿಯನ್ನೊಳಗೊಂಡಿದೆ. ಹರಿವರ್ಮನ ಆಸ್ಥಾನಕ್ಕೆ ಆಗಮಿಸಿದ ವಾದಿಭಗಜೇಂದ್ರ ಎಂಬ ಬಿರುದನ್ನು ಹೊಂದಿದ್ದ ಬೌದ್ಧ ಸನ್ಯಾಸಿಯೋರ್ವನನ್ನು ಮಾಧವಭಟ್ಟ ಎಂಬ ಬ್ರಾಹ್ಮಣನು ವಾದದಲ್ಲಿ ಸೋಲಿಸಿ ರಾಜನಿಂದ ಒಂದು ಗ್ರಾಮವನ್ನು ಬಹುಮಾನವಾಗಿಯೂ ಮತ್ತು ವಾದಿಭ ಗಜಸಿಂಹ ಎಂಬ ಬಿರುದನ್ನು ಪಡೆದನು. ಈ ಸಂಗತಿಯು ವೈದಿಕ ಮತದ ಉನ್ನತಿಯ ಹಾಗೂ ಬೌದ್ಧ ಧರ್ಮದ ಅವನತಿಯ ಸಂಕೇತವಾಗಿದ್ದಿತ್ತೆಂದು ಅಭಿಪ್ರಾಯ ಪಡಲಾಗಿದೆ. ಕ್ರಿ.ಶ. 5 ನೇ ಶತಮಾನದ ಉತ್ತರಾರ್ಧದಲ್ಲಿ ಆಳುತ್ತಿದ್ದ ತಲಕಾಡಿನ ಗಂಗರಾಜನಾದ ತಡಂಗಲ ಮಾಧವನ ಮೆಳೆಕೋಟೆ ಶಾಸನದ ಪ್ರಕಾರ ಅಲ್ಲಿದ್ದ ಒಂದು ಬೌದ್ಧ ವಿಹಾರಕ್ಕೆ ಭೂಮಿಯನ್ನು ದಾನ ಮಾಡಿದನು. ಬೌದ್ಧ ವಿಹಾರವಿದ್ದ ಸ್ಥಳವನ್ನು "ಶಾಕ್ಯಶಿಲಾ" ಎಂಬ ಹೆಸರಿನಿಂದ ಕರೆಯಲಾಗಿದ್ದು, ಸಮೀಪದಲ್ಲಿ ಒಂದು ಕಟಾಕವೂ (ಕೆರೆ) ಇದ್ದುದಾಗಿ ತಿಳಿದು ಬರುತ್ತದೆ.

ಬಾದಾಮಿ ಚಾಳುಕ್ಯರ ಕಾಲದಲ್ಲಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಹೆಚ್ಚು ಮಾಹಿತಿಯು ದೊರೆಯುವುದಿಲ್ಲ. ಹೂಯನ್ ತ್ಸಾಂಗನು ಆ ಕಾಲದಲ್ಲಿ ಬೌದ್ಧ ಕೇಂದ್ರಗಳನ್ನು ಸಂದರ್ಶಿಸಿದ್ದನು. ಅವನು ಅಜಂತಾದ ಸುಂದರವಾದ ಗುಹಾಂತರ ದೇವಾಲಯಗಳನ್ನು, ಬನವಾಸಿ ಮತ್ತು ಇತರೆಡೆಗಳಲ್ಲಿದ್ದ ಬೌದ್ಧ ವಿಹಾರಗಳನ್ನು ನೋಡಿದ್ದನು. ಹೂಯನ್‌ತ್ಸಾಂಗನ ಬರವಣಿಗೆಯಿಂದ ಸಾಮ್ರಾಜ್ಯದಲ್ಲಿ ಸುಮಾರು ಒಂದುನೂರು ಬೌದ್ಧ ವಿಹಾರಗಳೂ ಮತ್ತು 10 ಸಾವಿರ ಮಂದಿ ಬೌದ್ಧ ಭಿಕ್ಷುಗಳೂ ಇದ್ದರೆಂದು ತಿಳಿದು ಬರುತ್ತದೆ. ಬೌದ್ಧ ವಿಹಾರಗಳು ದುಃಸ್ಥಿತಿಯಲ್ಲಿದ್ದು ಕ್ಷೀಣಗತಿಯಲ್ಲಿದ್ದುದನ್ನು ಚೀಣಾ ದೇಶದ ಯಾತ್ರಿಕನು ಮನಗಂಡನು.

## 28.3 ರಾಷ್ಟ್ರಕೂಟರು ಮತ್ತು ಬೌದ್ಧ ಧರ್ಮ

ರಾಷ್ಟ್ರಕೂಟರ ಕಾಲದ ವೇಳೆಗೆ ಬೌದ್ಧ ಧರ್ಮದ ಅನುಯಾಯಿಗಳು ದಖ್ಖನ್ನಿನಲ್ಲಿ ಕೇವಲ ಕೆಲವೇ ಸ್ಥಳಗಳಲ್ಲಿ ಮಾತ್ರ ಇದ್ದರೆಂಬುದಾಗಿ ತಿಳಿದು ಬರುತ್ತದೆ. ರಾಜಾಶ್ರಯ ತಪ್ಪಿದುದರಿಂದಲೂ, ಹಾಗೂ ಜೈನ ಮತ್ತು ವೈದಿಕ ಧರ್ಮಗಳ ತೀವ್ರತರವಾದ ಸ್ಪರ್ಧೆಯಿಂದಲೂ ಬೌದ್ಧಧರ್ಮವು ಅದೃಶ್ಯವಾಗತೊಡಗಿತು. ಮುಂಬಯಿ ಬಳಿಯ ಕನ್ಹೇರಿ, ಸೊಲ್ಲಾಪುರ ಜಿಲ್ಲೆಯ ಕಂಪಿಲ, ಧಾರವಾಡ ಜಿಲ್ಲೆಯ ದಂಬಾಳ್ ಮೊದಲಾದ ಸ್ಥಳಗಳಲ್ಲಿ ಮಾತ್ರ ಬೌದ್ಧ ವಿಹಾರಗಳೂ, ಅದರ ಅನುಯಾಯಿಗಳು ಇದ್ದರು. ಕನ್ಹೇರಿಯಲ್ಲಿ ಹೆಚ್ಚು ಸಂಖ್ಯೆಯಲ್ಲಿ ಬೌದ್ಧಮತೀಯರು ವಾಸಿಸುತ್ತಿದ್ದರು. ಅಲ್ಲಿನ ಬೌದ್ಧ ವಿಹಾರವನ್ನು ಯಾತ್ರಾರ್ಥಿಗಳು ಸಂದರ್ಶಿಸಿ ದಾನ ಧರ್ಮ ಮಾಡುತ್ತಿದ್ದರೆಂದೂ ಅಲ್ಲಿನ ವಿಹಾರವು ದೊಡ್ಡ ಗ್ರಂಥ ಭಂಡಾರವನ್ನು ಹೊಂದಿತ್ತೆಂದೂ ಶಾಸನಗಳಿಂದ ತಿಳಿದು ಬರುತ್ತದೆ. ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಬಳ್ಳಿಗಾಮೆಯಲ್ಲಿ ಮಾತ್ರ ಒಂದು ಬೌದ್ಧ ವಿಹಾರವಿದ್ದುದಾಗಿಯೂ ಮತ್ತು ರಾಣಿಯೊಬ್ಬಳು ದಾನಧರ್ಮ ಮಾಡಿದ ಸಂಗತಿ ತಿಳಿದು ಬರುತ್ತದೆ. ಬೌದ್ಧ ಧರ್ಮವು ಕ್ರಿ.ಶ. 4 ನೇ ಶತಮಾನದಿಂದ ಅವನತಿ ಹೊಂದಿ ಕ್ರಮೇಣ ಅದೃಶ್ಯವಾಯಿತೆಂದು ತಿಳಿದುಬರುತ್ತದೆ.

## 28.4 ಬೌದ್ಧ ಧರ್ಮದ ವಿಲೀನತೆಯ ದೃಷ್ಟಾಂತಗಳು

ಆದರೆ ಬೌದ್ಧ ಧರ್ಮವು ದಖನ್ ಒಳಗೊಂಡಂತೆ ಕರ್ನಾಟಕದಲ್ಲಿ ಪ್ರಚಾರವಾಗಿತ್ತೆಂಬ ಮತ್ತು ಅದು ಜನಪ್ರಿಯತೆಯನ್ನು ಗಳಿಸಿತ್ತೆಂಬ ಸಂಗತಿಗಳು ಅಲ್ಲಲ್ಲಿ ದೊರೆಯುವ ಮಾಹಿತಿಗಳಿಂದ ಖಚಿತವಾಗುತ್ತದೆ. ಉದಾಹರಣೆಗಾಗಿ ಒಂದೆರಡು ದೃಷ್ಟಾಂತಗಳನ್ನು ಗಮನಿಸಬಹುದು. ಕರ್ನಾಟಕದ ರಾಜಧಾನಿಯಾದ ಬೆಂಗಳೂರು ನಗರವು ಈ ಪ್ರದೇಶವು ಬೌದ್ಧ ಧರ್ಮದ ಕೇಂದ್ರವೊಂದಾಗಿರಬೇಕೆಂದು ತಿಳಿದು ಬರುತ್ತದೆ. ಈಗ ಧರ್ಮರಾಯನ ಗುಡಿಯೆಂದು ಕರೆಯಲ್ಪಟ್ಟು ಕರಗದೇವತೆಯ ಉತ್ಸವಕ್ಕೆ ಪ್ರಸಿದ್ಧವಾಗಿರುವ ಆಲಯವು ಪ್ರಾಚೀನ ಕಾಲದಲ್ಲಿ ಮಹಾಯಾನ ಪಂಥದ ಕೇಂದ್ರವಾಗಿದ್ದು ಆ ಪಂಥದ ದೇವತೆಯಾದ ತಾರಭಗವತಿಯ ಆರಾಧನೆ ಅಲ್ಲಿ ನಡೆಯುತ್ತಿತ್ತೆಂದು ತಿಳಿದು ಬರುತ್ತದೆ. ಬೌದ್ಧ ಧರ್ಮವು ಕ್ಷೀಣಿಸಿದ ನಂತರ ಅಳಿದುಳಿದ ಆ ಧರ್ಮೀಯರು ಹಿಂದೂ ಧರ್ಮದ ಪಂಥಗಳಿಗೆ ಪರಿವರ್ತನೆ ಹೊಂದಿ ತಮ್ಮ ದೇವತೆಯನ್ನು ಪರಿವರ್ತಿಸಿ ಪೂಜಿಸುವ ವಿಧಾನವು ಆಚರಣೆಗೆ ಬಂದಿರಬಹುದೆಂದು

ಅಭಿಪ್ರಾಯ ಪಡಲಾಗಿದೆ. ಅಲ್ಲಿ ಆ ಕಾಲದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಬೌದ್ಧ ಸನ್ಯಾಸಿಗಳಿದ್ದು ಅವರ ಉಪಯೋಗಕ್ಕಾಗಿ ತಟಾಕವೊಂದು ನಿರ್ಮಾಣವಾಗಿದ್ದು ಅದು ಧರ್ಮಾಂಬುಧಿ ಎಂದು ಪ್ರಸಿದ್ಧವಾಗಿರಬೇಕೆಂದೂ ಅನಂತರ ಅದೂ ಸಹ ಕಾಲಕ್ರಮದಲ್ಲಿ ಆಜುಬಾಜಿನಲ್ಲಿದ್ದ ವಿಹಾರಗಳ ಸಮೇತ ಪರಿವರ್ತನೆ ಹೊಂದಿ ಪುನರ್ ನಿರ್ಮಾಣಗೊಂಡಿರುವುದು ವೇದ್ಯವಾಗುತ್ತದೆ. ಇತ್ತೀಚೆಗೆ ಬೆಂಗಳೂರು ಬಳಿಯ ಬನ್ನೇರುಘಟ್ಟದ ಬಳಿಯಲ್ಲಿ ಬೌದ್ಧ ಗುಹೆಯೆಂದು ಗುರುತಿಸಲಾದ ವಿಶಾಲ ಗುಹಾಲಯವು ಸಹ ಮೇಲ್ಕಂಡ ಸಂಗತಿಗೆ ಪೂರಕವಾಗಿದೆ. ಮಂಗಳೂರು ನಗರದ ಕದ್ರಿ ಪ್ರದೇಶದಲ್ಲಿ ಇಂದಿಗೂ ಅವಲೋಕಿತೇಶ್ವರ ಬುದ್ಧನ ಮೂರ್ತಿಯು ಪೂಜೆಗೊಳ್ಳುತ್ತಿರುವುದನ್ನು ಕಾಣಬಹುದು. ಧರ್ಮಸ್ಥಳವು ಸಹ ಪ್ರಾಚೀನ ಕಾಲದಲ್ಲಿ ಮಹಾಯಾನ ಬೌದ್ಧ ಪಂಥದ ಕೇಂದ್ರವಾಗಿದ್ದು ಆ ಪಂಥದ ದೇವತೆಗಳಲ್ಲೊಬ್ಬನಾದ ಅವಲೋಕಿತೇಶ್ವರ ಮಂಜುಶ್ರೀಯನ್ನು ಅಲ್ಲಿ ಆರಾಧಿಸಲಾಗುತ್ತಿದ್ದು, ಬೌದ್ಧ ಮತವು ಕ್ಷೀಣಿಸಿದ ನಂತರ ಅದು ಕಾಲಕ್ರಮೇಣದಲ್ಲಿ ಜೈನ ಹಾಗೂ ಹಿಂದೂ ಧರ್ಮದ ಪ್ರಭಾವಕ್ಕೊಳಗಾಯಿತೆಂದು ತಿಳಿದು ಬರುತ್ತದೆ. ಪ್ರಾರಂಭದ ಬೌದ್ಧ ದೇವತೆಯಾದ ಮಂಜುಶ್ರೀಯ ಉಪಾಸನೆ, ಹಿಂದೂ ಅರ್ಚಕ, ಜೈನಪಾರಪತ್ಯಗಳಿಗೆ ಇಂದಿನ ಧರ್ಮಸ್ಥಳವು ಉದಾಹರಣೆಯಾಗಿದೆ. ಇಂತಹ ಅನೇಕ ನಿದರ್ಶನಗಳನ್ನು ಕನ್ನಡನಾಡಿನಲ್ಲಿ ಗುರುತಿಸಬಹುದು. ಒಟ್ಟಿನಲ್ಲಿ ಬೌದ್ಧ ಧರ್ಮವು ಜನತೆಯ ಸಾಂಸ್ಕೃತಿಕ ಜೀವನದ ಮೇಲೆ ಆಳವಾದ ಪ್ರಭಾವ ಬೀರಿ, ಅದು ಕ್ರಮೇಣ ಅದೃಶ್ಯವಾಯಿತು. ಆದರೆ ಸಂಘ ಸಂಸ್ಥೆಗಳ ಸ್ಥಾಪನೆ, ಧಾರ್ಮಿಕ ಹಾಗೂ ಸಾಮಾಜಿಕ ನೀತಿ ನಿಯಮಗಳು, ವಿದ್ಯಾಭ್ಯಾಸ, ಪಾಂಡಿತ್ಯ ಮಿಗಿಲಾಗಿ ವಾಸ್ತುಶಿಲ್ಪ ಮತ್ತು ಕಲೆಗೆ ಬೌದ್ಧ ಧರ್ಮ ವಿಶಿಷ್ಟ ಕಾಣಿಕೆ ನೀಡಿದೆ.

## 28.5 ಜೈನ ಧರ್ಮ

ಜೈನಧರ್ಮವೂ ಸಹ ಕ್ರಿ.ಪೂ. ಐದನೇ ಶತಮಾನದ ಅವಧಿಯಲ್ಲಿಯೇ ಕರ್ನಾಟಕವನ್ನು ಪ್ರವೇಶಿಸಿ ಶಕ್ತಿಯುತವಾಗಿ ಬೆಳೆಯಿತು. ಅದು ಕನ್ನಡ ಭಾಷೆ, ಸಾಹಿತ್ಯ, ಜನಜೀವನ, ನೈತಿಕ ಮೌಲ್ಯಗಳು, ಕಲೆ ಮತ್ತು ಸಂಸ್ಕೃತಿಗೆ ಅಪಾರ ಕಾಣಿಕೆ ನೀಡಿದೆ. ಪ್ರಾಚೀನ ಕಾಲದಲ್ಲಿ ಕರ್ನಾಟಕವನ್ನಾಳಿದ ಹಲವಾರು ರಾಜಮನೆತನಗಳು ಜೈನ ಧರ್ಮವನ್ನು ಅವಲಂಬಿಸಿದ್ದವು. ಹಾಗೂ ಅನೇಕ ರಾಜಮನೆತನಗಳು ಜೈನಯತಿಗಳ ಪ್ರಭಾವ ಮತ್ತು ಸ್ಫೂರ್ತಿಯಿಂದಲೇ ಅಸ್ತಿತ್ವಕ್ಕೆ ಬಂದವೆಂದೂ ಹೇಳಲಾಗಿದೆ. ಇಂತಹ ಹೇಳಿಕೆಗಳು ಉತ್ಪ್ರೇಕ್ಷೆಯಿಂದ ಕೂಡಿದಾಗ್ಗೂ ಜೈನ ಧರ್ಮವು ಕನ್ನಡ ನಾಡಿನಲ್ಲಿ ಪ್ರಭಾವಶಾಲಿಯಾಗಿದ್ದು, ಅದನ್ನು ರಾಜಮನೆತನಗಳು ಪೋಷಿಸಿ ಪ್ರೋತ್ಸಾಹ ನೀಡಿದುದಕ್ಕೆ ಸಾಕಷ್ಟು ಪುರಾವೆಗಳಿವೆ.

## 28.6 ಭದ್ರಬಾಹುಪರಂಪರೆ ; ಶಾತವಾಹನ, ಕದಂಬ ಮತ್ತು ಬಾದಾಮಿ ಚಾಳುಕ್ಯರ ಕಾಲದಲ್ಲಿ ಜೈನಮತದ ಪ್ರಗತಿ

ಶ್ರವಣ ಬೆಳಗೊಳದಲ್ಲಿ ಲಭ್ಯವಾಗಿರುವ ಕ್ರಿ.ಶ. ಏಳನೇ ಶತಮಾನದ ಶಾಸನ ಹಾಗೂ ಕೆಲವು ಗ್ರಂಥಗಳ ಪ್ರಕಾರ ಮೌರ್ಯ ಯುಗದಲ್ಲಿ ಜೈನ ಧರ್ಮವು ಕರ್ನಾಟಕದಲ್ಲಿ ಪ್ರಚಾರಕ್ಕೆ ಬಂದಿತ್ತು. ಭದ್ರಬಾಹುವು ಉಜ್ಜೈನಿಯಲ್ಲಿದ್ದಾಗ ಉತ್ತರ ಭಾರತದಲ್ಲಿ ಹನ್ನೆರಡು ವರ್ಷಗಳ ದೀರ್ಘ ಕಾಲದ ಕ್ಷಾಮವುಂಟಾಗುವುದೆಂದು ಮುಂಚಿತವಾಗಿ ಅರಿತು ತನ್ನ ಹಲವು ಮಂದಿ ಶಿಷ್ಯರೊಡಗೂಡಿ ಕನ್ನಡ ನಾಡಿನ ಕಲ್ಬಪ್ಪು ಅಥವಾ ಇಂದಿನ ಶ್ರವಣ ಬೆಳಗೊಳಕ್ಕೆ ಬಂದು ನೆಲಸಿದನು. ಇವನೊಡನೆ ಮೌರ್ಯ ಸಂತತಿಯ ಚಂದ್ರಗುಪ್ತನು ಬಂದು ಇಲ್ಲಿ ನೆಲಸಿ ಕೊನೆಗೆ ಸಲ್ಲೇಖನ ವಿಧಾನದಿಂದ ಮುಕ್ತಿಯನ್ನು ಪಡೆದನೆಂದು ಹೇಳಲಾಗಿದೆ. ಭದ್ರ ಬಾಹುವಿನೊಡನೆ ಶ್ರವಣಬೆಳಗೊಳಕ್ಕೆ ಬಂದು ಮುಕ್ತಿ ಹೊಂದಿದ ಮೌರ್ಯಚಕ್ರವರ್ತಿಯು ಅಶೋಕನ ಮೊಮ್ಮಗನಾದ ಸಂಪ್ರಾತಿ ಚಂದ್ರಗುಪ್ತ ಮೌರ್ಯನಾಗಿರಬೇಕೆಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಶ್ರವಣಬೆಳಗೊಳವು ಈ ವೇಳೆಗಾಗಲೇ ಜೈನ ಧರ್ಮದ ಪ್ರಮುಖ ಕೇಂದ್ರವಾಗಿದ್ದು ಆ ಧರ್ಮವು ಈ ಪ್ರದೇಶದಲ್ಲಿ ಪ್ರಸಾರವಾಗಿತ್ತೆಂದು ತಿಳಿದು ಬರುತ್ತದೆ. ಅಂದಿನಿಂದ ಇಂದಿನವರೆಗೂ ಶ್ರವಣ ಬೆಳಗೊಳವು ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡು ಬಂದಿದೆ. ಜೈನ ಧರ್ಮದ ಪ್ರಸಿದ್ಧ ಯತಿ ಹಾಗೂ ವಿದ್ವಾಂಸ ಕುಂದಕುಂದಾಚಾರ್ಯನು ಕ್ರಿ.ಶ. ಒಂದು ಅಥವಾ ಎರಡನೇ ಶತಮಾನದಲ್ಲಿ ಶಾತವಾಹನ ಕಾಲದಲ್ಲಿ ಜೀವಿಸಿದ್ದಿರಬೇಕೆಂದು ಗೊತ್ತಾಗಿದೆ. ಅನಂತರದ ಹಲವಾರು ಜೈನಯತಿಗಳು ತಾವು ಕುಂದ ಕುಂದಾನ್ವಯದವರೆಂದು ಹೇಳಿಕೊಂಡಿರುವರು. ಕನ್ನಡನಾಡು, ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲಿ ಪ್ರಚಲಿತವಿರುವ ಪರಂಪರೆಗಳ ಪ್ರಕಾರ ಅವರನ್ನು ತಮ್ಮ ತಮ್ಮ ನಾಡಿನವರೆಂದು ಕರೆದುಕೊಳ್ಳಲಾಗಿದೆ. ಕುಂದ ಕುಂದರು ಅನೇಕ ಗ್ರಂಥಗಳನ್ನು ರಚಿಸಿ ಪ್ರಸಿದ್ಧರಾಗಿರುವರು. ಅನಂತರ ಕದಂಬ ಕಾಕುತ್ಸ ವರ್ಮನು ಹಲಸಿಯ ಜೈನ ಯತಿಗಳಿಗೆ ಭೂಮಿ ದಾನ ಮಾಡಿದನೆಂದು ತಿಳಿದು ಬರುತ್ತದೆ. ಹಲಸಿಯ ಬಸದಿಗೆ ಮೃಗೇಶವರ್ಮನೂ ಸಹ ದಾನಧರ್ಮ ನೀಡಿದ ಸಂಗತಿಯು ತಿಳಿದು ಬಂದಿದೆ, ಕದಂಬ ಸಂತತಿಯ ಮತ್ತೊಬ್ಬ ರಾಜನಾದ ರವಿವರ್ಮನು ಜೈನ ವಿದ್ವಾಂಸರಿಂದ ಆಡಳಿತ ಹಾಗೂ ಧರ್ಮಕ್ಕೆ ಸಂಬಂಧಿಸಿದಂತೆ ಸಲಹೆ ಪಡೆಯುತ್ತಿದ್ದನು. ಬಾದಾಮಿ ಚಾಳುಕ್ಯರ ಕಾಲದಲ್ಲೂ ಜೈನ ಮತಕ್ಕೆ ಪ್ರೋತ್ಸಾಹ ನೀಡಲಾಗಿತ್ತು. ಬಾದಾಮಿಯಲ್ಲಿ ವಿಷ್ಣು ಗುಹಾಲಯದ ಜೊತೆ ಮಂಗಳೇಶನ ಕಾಲದಲ್ಲಿ ಕೊರೆಸಿದ ಜೈನ ಗುಹಾಲಯಗಳಿವೆ. ಪಟ್ಟದ ಕಲ್ಲು ಮತ್ತು ಇತರ ಕಡೆಗಳಲ್ಲೂ ಜೈನ ಬಸದಿಗಳು ಬಾದಾಮಿ ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾದವು. ಪುಲಿಕೇಶಿಯ ಆಸ್ಥಾನದಲ್ಲಿ ವಿದ್ವಾಂಸನಾಗಿದ್ದ

ಜೈನಕವಿ ರವಿ ಕೀರ್ತಿಯು ಐಹೊಳೆಯಲ್ಲಿ ಮೆಗುತಿ ಜಿನಾಲಯವನ್ನು ಕಟ್ಟಿಸಿದನು. ಚಾಳುಕ್ಯರ ಕಾಲದಲ್ಲಿ ಧಾರವಾಡ ಜಿಲ್ಲೆಯ ಅಣ್ಣಿಗೇರಿ ಮತ್ತು ಲಕ್ಷ್ಮೇಶ್ವರದಲ್ಲೂ ಜಿನಾಲಯಗಳು ಕಟ್ಟಲ್ಪಟ್ಟು ವಿನಯಾದಿತ್ಯ ಮತ್ತು ವಿಜಯಾದಿತ್ಯ ಮೊದಲಾದವರು ದತ್ತಿ ನೀಡಿದರು.

## 28.7 ತಲಕಾಡಿನ ಗಂಗರು ಮತ್ತು ಜೈನ ಸಂಪ್ರದಾಯಗಳು

ಗಂಗರ ಆರಂಭದ ಅರಸರು ಜೈನರು ಹಾಗೂ ಆ ಸಂತತಿಯ ಸ್ಥಾಪನೆಯಲ್ಲಿ ನೆರವಾದವರು ಸಿಂಹನಂದಿ ಎಂಬ ಜೈನಯತಿಯರೆಂದು ನಂಬಲಾಗಿದ್ದಿತು. ಆದರೆ ಈಚಿನ ಸಂಶೋಧನೆಗಳು ಈ ನಂಬಿಕೆಯನ್ನು ತಿರಸ್ಕರಿಸಿವೆ. ಆರಂಭದ ಅರಸರು ವೈದಿಕ ಮತಾವಲಂಬಿಯಾಗಿದ್ದರೆಂದು ದೃಢಪಡಿಸಲಾಗಿದೆ ಮತ್ತು ಗಂಗರ ಅರಸ ಎರಡನೆ ಶಿವಮಾರನ ಕಾಲದಿಂದ ಜೈನ ಧರ್ಮ ರಾಜಕೀಯ ಆಶ್ರಯ ಪಡೆಯಿತು. ಕ್ರಿ.ಶ. 810 ರ ಸುಮಾರಿನಲ್ಲಿ ಇಮ್ಮಡಿ ಶಿವಮಾರನು ಜೈನಮತಕ್ಕೆ ಪರಿವರ್ತಿತನಾದನು. ಅಂದಿನಿಂದ ಕೊನೆಯವರೆಗೆ ಆಳಿದ ಈ ಸಂತತಿಯ ರಾಜರು ಜೈನಮತಾವಲಂಬಿಗಳಾಗಿದ್ದರು. ಅವರ ಕಾಲದಲ್ಲಿ ಶ್ರವಣ ಬೆಳಗೊಳವು ಹೆಚ್ಚಿನ ಪ್ರಾಮುಖ್ಯತೆ ಪಡೆಯಿತು. ಅಲ್ಲಿ ಕ್ರಮೇಣ ಹೆಚ್ಚು ಸಂಖ್ಯೆಯಲ್ಲಿ ಬಸದಿಗಳು ನಿರ್ಮಾಣವಾದವು. ಗಂಗವಾಡಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಜೈನ ಧರ್ಮವು ವಿಶೇಷವಾಗಿ ವ್ಯಾಪಕವಾಯಿತು. ಗಂಗರ ಆಶ್ರಯದಲ್ಲಿ ಅನೇಕ ವಿದ್ವಾಂಸರು ಗ್ರಂಥಗಳನ್ನು ರಚಿಸಿದರು. ಗಂಗರು ವೈದಿಕ ಮತಾವಲಂಬಿಗಳಾಗಿದ್ದಾಗಲೂ ಜೈನ ಧರ್ಮವನ್ನು ಪೋಷಿಸಿದರು. ಶಬ್ದಾವತಾರದ ಕರ್ತೃವಾದ ಪೂಜ್ಯಪಾದನು ಗಂಗರ ಸುಪ್ರಸಿದ್ಧ ಪ್ರಭುಗಳಲ್ಲೊಬ್ಬನಾಗಿದ್ದ ದುರ್ವಿನೀತನ ಆಸ್ಥಾನದಲ್ಲಿ ಹಲವು ಕಾಲ ಇದ್ದುದಾಗಿ ತಿಳಿದು ಬರುತ್ತದೆ. ಕೊನೆಯ ಗಂಗರಸರ ಕಾಲದಲ್ಲಿ ಅಮಾತ್ಯನಾಗಿದ್ದ ಚಾವುಂಡರಾಯನು ತಾನೇ ವಿದ್ವಾಂಸನಾಗಿದ್ದುದಲ್ಲದೆ ವಿದ್ವಾಂಸರಿಗೆ ವಿಶೇಷ ಮನ್ನಣೆ ನೀಡಿದನು. ಅವನು ಕ್ರಿ.ಶ. 982 ರಲ್ಲಿ ಶ್ರವಣ ಬೆಳಗೊಳದ ಜಗತ್ಪ್ರಸಿದ್ಧ ಗೊಮ್ಮಟ ಮೂರ್ತಿಯನ್ನು ಅಖಂಡ ಶಿಲೆಯಲ್ಲಿ ಕೆತ್ತಿಸಿದನು. ಚಾವುಂಡರಾಯನನ್ನು ಕನ್ನಡ ನಾಡಿನಲ್ಲಿ ಜೈನಧರ್ಮದ ಅಭ್ಯುದಯದ ಅಗ್ರಮಾನ್ಯರಲ್ಲಿ ಪ್ರಥಮನೆಂದು ಅನೇಕ ಶಾಸನಗಳಲ್ಲಿ ಹೆಸರಿಸಲಾಗಿದೆ. ಕ್ರಿ.ಶ. ಒಂಭತ್ತು ಮತ್ತು ಹತ್ತನೇ ಶತಮಾನಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಗಂಗವಾಡಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಜೈನ ಬಸದಿಗಳು ನಿರ್ಮಾಣವಾದವು.

## 28.8 ರಾಷ್ಟ್ರಕೂಟರ ಕಾಲದಲ್ಲಿ ಜೈನಧರ್ಮದ ಏಳಿಗೆ

ತಲಕಾಡು ಗಂಗರ ಆಳ್ವಿಕೆಯ ಉತ್ತರಾರ್ಧದ ಕಾಲದಲ್ಲಿ ಪ್ರಬಲ ಸಾಮ್ರಾಜ್ಯ ಸ್ಥಾಪಿಸಿದ ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಜೈನಧರ್ಮವು ಉತ್ಕೃಷ್ಟವಾಗಿತ್ತು. ಕ್ರಿ.ಶ. 9, 10 ಮತ್ತು 11 ನೇ ಶತಮಾನಗಳನ್ನು ಕರ್ನಾಟಕದಲ್ಲಿ ಜೈನಧರ್ಮದ ಉತ್ತುಂಗ ಕಾಲ ಎಂದು ಹೇಳಬಹುದಾಗಿದೆ. ರಾಷ್ಟ್ರಕೂಟ ಚಕ್ರವರ್ತಿಗಳಲ್ಲಿ ಹಲವರು ಜೈನಮತಾವಲಂಬಿಗಳಾಗಿದ್ದರು ಮತ್ತು ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು. ಸಾಮ್ರಾಜ್ಯದಲ್ಲಿ ಜೈನ ದೇಗುಲಗಳನ್ನು ಕಟ್ಟಲಾಯಿತು. ಮಿಗಿಲಾಗಿ ಆ ಕಾಲದಲ್ಲಿ ಅನೇಕ ಸ್ಥಳಗಳು ಜೈನಧರ್ಮದ ಉತ್ಕೃಷ್ಟ ಕೇಂದ್ರಗಳಾಗಿದ್ದವು. ಶ್ರವಣ ಬೆಳಗೊಳ, ಬಂಕಾಪುರ, ಲಕ್ಷ್ಮೇಶ್ವರ, ಕೊಪ್ಪಳ ಮೊದಲಾದ ಕೇಂದ್ರಗಳು ಪ್ರಸಿದ್ಧವಾಗಿದ್ದವು. ರಾಷ್ಟ್ರಕೂಟ ರಾಜಧಾನಿಯಾದ ಮಾನ್ಯಖೇಟವು ಸಹ ಅಂತಹ ಮುಖ್ಯ ಕೇಂದ್ರಗಳಲ್ಲೊಂದಾಗಿತ್ತು. ಅನೇಕ ಸುಪ್ರಸಿದ್ಧ ಜೈನ ಪಂಡಿತರೂ, ಕವಿಗಳೂ ಹಾಗೂ ಸಂತರೂ ಅಲ್ಲಿ ವಾಸಿಸುತ್ತಿದ್ದರು. ಅಮೋಘವರ್ಷ ನೃಪತುಂಗನು ಜೈನ ಧರ್ಮಾವಲಂಬಿಯಾಗಿದ್ದನೆಂತಲೂ ಜಿನಸೇನಾ ಚಾರ್ಯರು ಅವನ ರಾಜಗುರುವಾಗಿದ್ದರೆಂದು ತಿಳಿದು ಬರುತ್ತದೆ. ಆ ಧರ್ಮದ ಮತ್ತೊಬ್ಬ ವಿದ್ವಾಂಸನಾದ ವೀರಾಚಾರ್ಯನು ಅಮೋಘವರ್ಷನ ವಿದ್ಯಾಗುರುವಾಗಿದ್ದನು. ಅಮೋಘವರ್ಷನ ಪ್ರಮುಖ ಅಮಾತ್ಯ ಮತ್ತು ದಂಡನಾಯಕನಾದ ಬಂಕೇಶ ಮತ್ತು ಅವನ ಮಗ ಲೋಕಾದಿತ್ಯರು ಸಹ ಜೈನ ಧರ್ಮೀಯರಾಗಿದ್ದು ಅದಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು. ರಾಷ್ಟ್ರಕೂಟರ ಮುಮ್ಮಡಿ ಕೃಷ್ಣ ಮತ್ತು ನಾಲ್ಕನೇ ಇಂದ್ರ ಅವರೂ ಸಹ ಜೈನ ಮತಾವಲಂಬಿಗಳಾಗಿದ್ದರೆಂದು ತಿಳಿದು ಬರುತ್ತದೆ. ಆ ಕಾಲದ ಸುಪ್ರಸಿದ್ಧ ವಿದ್ವಾಂಸರಾದ ವೀರಾಚಾರ್ಯ, ಒಂದನೇ ಜಿನಸೇನ, ಎರಡನೇ ಜಿನಸೇನ, ಗುಣಭದ್ರ, ಅಕಳಂಕ ಸೋಮದೇವ, ಗುಣವರ್ಮ, ಪ್ರಭಾನಂದಿ, ದವಳನಂದಿ ಮೊದಲಾದ ಜೈನಾಚಾರ್ಯರು ದಾರ್ಶನಿಕ ಹಾಗೂ ಇತರ ಉದ್ಗ್ರಂಥಗಳನ್ನು ರಚಿಸಿದರು. ಪಂಪ, ಪೊನ್ನ, ರನ್ನ ಮೊದಲಾದ ಕವಿ ಶ್ರೇಷ್ಠರು ಕನ್ನಡ ಭಾಷೆಯಲ್ಲಿ ಗ್ರಂಥ ರಚನೆ ಮಾಡಿದ ಅಗ್ರಗಣ್ಯ ಕವಿಗಳಾಗಿದ್ದಾರೆ. ಹೀಗೆ ರಾಷ್ಟ್ರಕೂಟರ ಕಾಲವು ಕರ್ನಾಟಕದಲ್ಲಿ ಜೈನ ಧರ್ಮದ ಉತ್ತುಂಗ ಕಾಲವಾಗಿದ್ದಿತು.

## 28.9 ಹೊಯ್ಸಳರು ಮತ್ತು ಜೈನ ಧರ್ಮ

ಹೊಯ್ಸಳ ಮನೆತನದ ಪ್ರಾರಂಭದ ರಾಜರು ಜೈನ ಧರ್ಮೀಯರು. ಈ ಸಂತತಿಯ ಜೊತೆಗೆ ಸಣ್ಣ ಪುಟ್ಟ ಸಂಸ್ಥಾನಗಳನ್ನು ಸ್ಥಾಪಿಸಿ ಸಾಮಂತ ಮನೆತನಗಳಾಗಿ ಆಳ್ವಿಕೆ ನಡೆಸುತ್ತಿದ್ದ ಚೆಂಗಾಳ್ವ, ಪೊಂಬುರ್ಚದ ಶಾಂತಾರ, ಉಚ್ಚಂಗಿಯ ಪಾಂಡ್ಯ ಮೊದಲಾದ ಮನೆತನಗಳು ಜೈನ ಧರ್ಮೀಯರಾಗಿದ್ದರು. ಕಲ್ಯಾಣ ಚಾಳುಕ್ಯ ಮತ್ತು ಕಳಚೂರಿ ಮನೆತನಗಳು ಹಿಂದೂ ಧರ್ಮಾಂವಲಂಬಿಗಳಾಗಿದ್ದರೂ ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದರು. ಹೊಯ್ಸಳ ಸಂತತಿಯು ಓರ್ವ ಜೈನಮುನಿಯ ಪ್ರೋತ್ಸಾಹ ಹಾಗೂ ಪ್ರಭಾವದಿಂದ ಅಸ್ತಿತ್ವಕ್ಕೆ

ಬಂದಿತೆಂದು ಬಣ್ಣಿಸಲಾಗಿದೆ. ಒಟ್ಟಿನಲ್ಲಿ 11 ಮತ್ತು 12 ನೇ ಶತಮಾನಗಳಲ್ಲಿ ಜೈನಧರ್ಮವು ಕರ್ನಾಟಕದಲ್ಲಿ ಪುರೋಭಿವೃದ್ಧಿ ಪಥದಲ್ಲಿದ್ದಿತು. ಪ್ರಾರಂಭದಿಂದ ವಿಷ್ಣುವರ್ಧನನ ಕಾಲದವರೆಗಿನ ಹೊಯ್ಸಳ ರಾಜರು ಜೈನಮತೀಯರಾಗಿದ್ದರು. ವಿಷ್ಣುವರ್ಧನನು ಶ್ರೀರಾಮನುಜಾಚಾರ್ಯರಿಂದ ವೈಷ್ಣವ ಮತ ಸ್ವೀಕರಿಸಿದರು. ಅನಂತರ ಹೊಯ್ಸಳ ರಾಜರು ಹಿಂದೂ ಧರ್ಮಾವಲಂಬಿಗಳಾದರೂ ಜೈನಮತಕ್ಕೆ ಪ್ರೋತ್ಸಾಹ ನೀಡುವುದನ್ನು ಮುಂದುವರಿಸಿದರು. ಇಮ್ಮಡಿ ವಿನಯಾದಿತ್ಯನ ದಂಡನಾಯಕನಾದ ಈಚಿರಾಜ, ಒಂದನೇ ಬಲ್ಲಾಳನ ಸಚಿವರಾದ ಮರಿಯಾನೆ ಮತ್ತು ಬಾಹುಬಲಿ ಅನಂತರ ವಿಷ್ಣುವರ್ಧನನ ಪ್ರಧಾನಾಮಾತ್ಯ ಹಾಗೂ ಪ್ರಧಾನ ದಂಡನಾಯಕ ಗಂಗರಾಜ ಹಾಗೂ ಇತರ ದಂಡನಾಯಕರಾದ ಪುಗಿಸಮಯ್ಯ, ಚೋಕಿಮಯ್ಯ ಹುಲ್ಲ ಮೊದಲಾದವರು ಪ್ರಸಿದ್ಧರು. ವೈಷ್ಣವ ಪಂಥಾವಲಂಬಿಯಾದ ವಿಷ್ಣುವರ್ಧನನ ಪಟ್ಟದ ರಾಣಿ ಶಾಂತಳೆಯು ಜೈನ ಧರ್ಮದ ನಿಷ್ಠ ಅನುಯಾಯಿಗಳಾಗಿದ್ದಳು. ಅಮಾತ್ಯ ಗಂಗರಾಜ ಮತ್ತು ದಂಡನಾಯಕ ಹುಲ್ಲಯ್ಯ ಇವರನ್ನು ಚಾವುಂಡರಾಯನ ನಂತರ ಜೈನ ಧರ್ಮದ ಪ್ರಮುಖ ಪೋಷಕರೆಂದು ಗುರುತಿಸಲಾಗಿದೆ. ಇವರ ಕಾಲದಲ್ಲಿ ಹೊಯ್ಸಳ ರಾಜ್ಯದಲ್ಲಿ ನೂರಾರು ಬಸದಿಗಳು ಸ್ಥಾಪನೆಯಾದವು. ಹಳೆಯ ಬಸದಿಗಳು ದುರಸ್ತಿಯಾದವು. ಹೊಯ್ಸಳ ರಾಜಧಾನಿಯಾದ ದೊರಸಮುದ್ರದಲ್ಲಿ ಸುಪ್ರಸಿದ್ಧ ಬಸದಿಗಳು ನಿರ್ಮಾಣವಾದವು. ಶ್ರವಣಬೆಳಗೊಳದಲ್ಲಿಯೂ ಸಹ ಗಂಗರಾಜ, ಪಟ್ಟದರಸಿ ಶಾಂತಳ ಮತ್ತು ಇತರರಿಂದ ಅನೇಕ ಬಸದಿಗಳು ನಿರ್ಮಾಣವಾದವು. ಹೊಯ್ಸಳರ ಎರಡನೇ ಬಲ್ಲಾಳನ ಕಾಲದಲ್ಲೂ ಜೈನ ಧರ್ಮವು ಪ್ರಗತಿ ಕಂಡಿತು. ಕನ್ನಡ ಪ್ರಸಿದ್ಧ ಕವಿ ಚಕ್ರವರ್ತಿತ್ರಯರಲ್ಲೊಬ್ಬನಾದ ಜನ್ನನು ಎರಡನೇ ಬಲ್ಲಾಳನ ಆಸ್ಥಾನದ ಕವಿಯಾಗಿದ್ದನು. ಅಲ್ಲದೆ ಇತರ ಪ್ರಸಿದ್ಧ ಕವಿಗಳಾದ ಅಭಿನವ ಪಂಪ, ನಯಸೇನ, ಅಂಡಯ್ಯ, ಕೇಶಿರಾಜ ಮೊದಲಾದವರು ಹೊಯ್ಸಳರ ಕಾಲದವರು.

## 28.10 ಕರ್ನಾಟಕದಲ್ಲಿ ಜೈನ ಧರ್ಮದ ಇಳಿಮುಖ

ಕ್ರಿ.ಶ. 12 ನೇ ಶತಮಾನದ ಅಂತ್ಯದಿಂದ ಕರ್ನಾಟಕದಲ್ಲಿ ಜೈನಧರ್ಮದ ಪ್ರಭಾವದ ಇಳಿಮುಖವನ್ನು ಗುರುತಿಸಬಹುದು. ಶ್ರೀರಾಮಾನುಜಾಚಾರ್ಯರ ಆಗಮನದಿಂದ ವಿಷ್ಣುವರ್ಧನನು ವೈಷ್ಣವ ಪಂಥಕ್ಕೆ ಸೇರಿದ ಮೇಲೆಯೂ ಸಹ ಹೊಯ್ಸಳ ನಾಡಿನಲ್ಲಿ ಜೈನಧರ್ಮವು ಪ್ರಭಾವಿಶಾಲಿಯಾಗಿಯೇ ಇದ್ದಿತು. ಕಾಲಕ್ರಮೇಣ ವೈಷ್ಣವ, ಶೈವ ಹಾಗೂ ವೀರಶೈವ ಧರ್ಮಗಳು ಪ್ರಬಲವಾಗುತ್ತಾ ಬಂದವು. ರಾಜಮನೆತನವು ಸರ್ವಧರ್ಮ ಸಮಾನತೆಯ ನೀತಿಯನ್ನು ಮುಂದುವರಿಸಿಕೊಂಡು ಬಂದರೂ ಸಹ ಸಮಾಜದಲ್ಲಿ ಮೇಲ್ಕಂಡ ಪಂಥಗಳ ಪೈಪೋಟಿ ಆರಂಭವಾಯಿತು. ಮೊದಮೊದಲು ಉತ್ತರ ಕರ್ನಾಟಕದಲ್ಲಿ ಜೈನ ಧರ್ಮವು ಕ್ಷೀಣಿಸಿತು. ಆ ಕಾಲದಲ್ಲಿ ಅನೇಕ ಜೈನ ಬಸದಿಗಳು ಶಿವಾಲಯವಾಗಿ ಮಾರ್ಪಾಟು ಹೊಂದಿದವು. ಜೈನಧರ್ಮ ಜನಸಾಮಾನ್ಯರ ಬೆಂಬಲ ಉಳಿಸಿಕೊಳ್ಳಲಾಗಲಿಲ್ಲ. ಕ್ರಮೇಣ ಹದಿಮೂರನೇ ಶತಮಾನದ ಪ್ರಾರಂಭದಿಂದ ಹೊಯ್ಸಳ ರಾಜ್ಯದಲ್ಲೂ ಅದೇ ಪರಿಸ್ಥಿತಿ ಉಂಟಾಯಿತು. ಆವರೆಗೂ ಅಧಿಕ ಸಂಖ್ಯೆಯಲ್ಲಿ ಸ್ಥಾಪಿತವಾಗುತ್ತಿದ್ದ ಜೈನ ಶಾಸನಗಳ ಸಂಖ್ಯೆಯು ಕ್ಷೀಣಿಸತೊಡಗಿತು. ಅನಂತರ ಜೈನಧರ್ಮವು ಪಶ್ಚಿಮ ಕರಾವಳಿಯ ಪ್ರದೇಶದಲ್ಲಿ ಆಶ್ರಯ ಪಡೆದು ಹಲವು ಕಾಲ ಪ್ರೋತ್ಸಾಹ ಗಳಿಸಿತು. ಹೀಗೆ ಜೈನ ಧರ್ಮವು ಉನ್ನತಿಯ ಕಾಲದಲ್ಲಿ ಕರ್ನಾಟಕದಲ್ಲಿ ಆಡಳಿತ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಗಳು, ಭಾಷೆ, ಸಾಹಿತ್ಯ ಮತ್ತು ಕಲೆಗೆ ಅಚ್ಚಳಿಯದ ಕೊಡುಗೆಗಳನ್ನು ನೀಡಿದೆ.

## 28.11 ಪ್ರಾಚೀನ ತಮಿಳು ನಾಡಿನಲ್ಲಿ ಜೈನಮತ ಆಚರಣೆ

ಪ್ರಾಚೀನ ತಮಿಳು ನಾಡಿನಲ್ಲಿ ಸಂಗಮ ಯುಗದ ಕಾಲದಲ್ಲಿ ಬೌದ್ಧ ಮತ್ತು ಜೈನ ಧರ್ಮಗಳ ಅಸ್ತಿತ್ವದ ಬಗ್ಗೆ ಸ್ಪಷ್ಟ ಉಲ್ಲೇಖನಗಳು ದೊರೆಯುವುದಿಲ್ಲ. ಆದರೆ ಸಂಗಮ ಯುಗದ ತರುವಾಯ ಪಲ್ಲವರ ಕಾಲದಲ್ಲಿ ಈ ಧರ್ಮಗಳು ಪ್ರಚಾರದಲ್ಲಿದ್ದವೆಂದು ತಿಳಿದು ಬರುತ್ತದೆ. ಪ್ರಾರಂಭದಲ್ಲಿ ಒಂದನೇ ಮಹೇಂದ್ರವರ್ಮನ್ ಪಲ್ಲವನೂ, ಮಾರವರ್ಮನ್ ಸುಂದರ ಪಾಂಡ್ಯನು ಜೈನಮತದ ನಿಷ್ಠ ಅನುಯಾಯಿಗಳಾಗಿದ್ದರೆಂದೂ, ಅವರು ಪ್ರಸಿದ್ಧ ಶೈವ ಸಂತರಾದ ಅಪ್ಪಾರರಿಂದ ಶೈವ ಮತಾವಲಂಬಿಗಳಾದರೆಂದು ತಿಳಿದು ಬರುತ್ತದೆ. ಕ್ರಿ.ಶ. 6ನೇ ಶತಮಾನದಿಂದ ತಮಿಳುನಾಡಿನಲ್ಲಿ ಶೈವ ಸಂತರಾದ ನಾಯನ್ಮಾರರೂ ವೈಷ್ಣವ ಸಂತರಾದ ಆಳ್ವಾರರೂ ತಮ್ಮ ತಮ್ಮ ಪಂಥಗಳ ಪ್ರಚಾರ ಕಾರ್ಯವನ್ನು ಅನನ್ಯ ಆಸಕ್ತಿಯಿಂದ ಕೈಗೊಂಡರು. ಈ ಕಾರಣದಿಂದ ತಮಿಳುನಾಡಿನಲ್ಲಿ ಬೌದ್ಧ ಜೈನ ಮತಗಳು ತಮ್ಮ ಪ್ರಭಾವ ಕಳೆದು ಕೊಂಡವು. ಹೂಯನ್ ತ್ಸಾಂಗನ ಆಗಮನದ ವೇಳೆಗೆ ಇಲ್ಲಿಯು ಬೌದ್ಧ ಮತ ಕ್ಷೀಣಿಸಿದ್ದಿತು. ಹ್ಯೂಯನ್ ತ್ಸಾಂಗನ ಪ್ರಕಾರ ದಕ್ಷಿಣದಲ್ಲಿ ಜೈನ ದಿಗಂಬರ ಪಂಥ ಮಾತ್ರ ಅಸ್ತಿತ್ವದಲ್ಲಿದ್ದಿತು. ಕ್ರಮೇಣ ಜೈನಮತ ತಮಿಳು ನಾಡಿನಲ್ಲಿ ತನ್ನ ಪ್ರಭಾವವನ್ನು ಕಳೆದುಕೊಳ್ಳತೊಡಗಿತ್ತು. ಮಹಾಯಾನ ಬೌದ್ಧ ಪಂಥದ ಪ್ರಸಿದ್ಧ ವಿದ್ವಾಂಸರಲ್ಲೊಬ್ಬನಾದ ಧಿನ್ನಾಗ ಕಂಚಿಯವನೆಂಬ ಪ್ರತೀತಿ ಇದೆ. ನಳಂದ ವಿಶ್ವವಿದ್ಯಾನಿಲಯದ ಆಚಾರ್ಯರಲ್ಲೊಬ್ಬನಾದ ಧರ್ಮಪಾಲ ಕಂಚಿಯವನೆಂಬುದಾಗಿ ಹೂಯನ್‌ತ್ಸಾಂಗನು ತಿಳಿಸಿದ್ದಾನೆ. ಪಲ್ಲವರ ತರುವಾಯ ಈ ಎರಡು ಧರ್ಮಗಳು ತಮ್ಮ ಪ್ರಾಬಲ್ಯವನ್ನು ಕಳೆದುಕೊಂಡು ಶೈವ-ವೈಷ್ಣವ ಪಂಥಗಳ ಉನ್ನತಿಗೆ ಎಡಮಾಡಿಕೊಟ್ಟವು.

## 28.12 ಸಾರಾಂಶ

ಮೇಲಿನ ಘಟಕದ ಅಧ್ಯಯನದಿಂದ ಕೆಲವು ಮೂಲಭೂತ ಐತಿಹಾಸಿಕ ಸಂಗತಿಗಳನ್ನು ನಿಮ್ಮ ಗಮನಕ್ಕೆ ತರಲು ಇಲ್ಲಿ ಯತ್ನಿಸಲ್ಪಾಗಿದೆ. ಈ ಎರಡು ಧರ್ಮಗಳು ಸುಸಂಘಟಿತವಾಗಿದ್ದು ನಿರ್ದಿಷ್ಟ ತತ್ವದರ್ಶನಗಳನ್ನು ಮೈಗೂಡಿಸಿಕೊಂಡು ದಕ್ಷಿಣ ಭಾರತದ ಸಮಾಜವನ್ನು ಪ್ರವೇಶಿಸಿದವು. ಮೊದಲೆ ಅಸ್ತಿತ್ವದಲ್ಲಿದ್ದ ವೈಧಿಕ ಪಂಥಗಳಾದ ಶೈವ, ವೈಷ್ಣವ, ಸಂಪ್ರದಾಯಗಳೊಡನೆ ಜೈನ-ಬೌದ್ಧ ಧರ್ಮಗಳು ದಕ್ಷಿಣ ಭಾರತದ ಸಮಾಜದಲ್ಲಿ ಸೇರ್ಪಡೆಯಾಗಿ "ಚರ್ತುಸಮಯ" ಸಂಪ್ರದಾಯಗಳಾಗಿ ರೂಪುಗೊಂಡವು.

ಸಾಹಿತ್ಯ ಕ್ಷೇತ್ರದಲ್ಲಿ ಪ್ರಾಕೃತ, ಸಂಸ್ಕೃತ, ಕನ್ನಡ, ತಮಿಳು ಇತರೆ ಸ್ಥಳೀಯ ಭಾಷೆ, ಸಾಹಿತ್ಯದ ಬೆಳವಣಿಗೆಗೆ ಈ ಧರ್ಮಗಳು ವಿಶೇಷವಾಗಿ ಜೈನಧರ್ಮ ಅಪಾರ ಸೇವೆ ಸಲ್ಲಿಸಿರುವುದನ್ನು ನೀವು ಈ ಪಾಠದಲ್ಲಿ ಗಮನಿಸಿದ್ದೀರಿ.

ಹಾಗೆಯೇ, ಕಲೆ ಮತ್ತು ವಾಸ್ತುಶಿಲ್ಪದ ವಲಯದಲ್ಲಿ ಚೈತಾಲಯ, ಗುಹಾಂತರ ದೇವಾಲಯ, ವಿಹಾರಗಳು, ಬಸದಿಗಳು ಸೇರ್ಪಡೆಯಾಗಿ ದಕ್ಷಿಣ ಭಾರತದ ಕಲಾಸಂಪತ್ತನ್ನು ಶ್ರೀಮಂತಗೊಳಿಸಿವೆ. ಈ ಧರ್ಮಗಳ ತತ್ವದರ್ಶನಗಳು ದಕ್ಷಿಣ ಭಾರತದ ಜನ ಜೀವನವನ್ನು ರೂಪಿಸಿರುವುದನ್ನು ಕಾಣಬಹುದು. ಆಳುವ ವರ್ಗ ಮತ್ತು ವ್ಯಾಪಾರ ವರ್ಗದವರು ಈ ಧರ್ಮಗಳ ಅನುಯಾಯಿಗಳಾಗಿ ಆಧರ್ಮಗಳ ಏಳಿಗೆಗೆ ಶ್ರಮಿಸಿರುವುದನ್ನು ಗಮನಿಸಬಹುದು.

## 28.13 ಸ್ವಪರೀಕ್ಷೆ ಪ್ರಶ್ನೆಗಳು

1. ದಕ್ಷಿಣ ಭಾರತದಲ್ಲಿ ಬೌದ್ಧ ಧರ್ಮದ ವ್ಯಾಪಕತೆ ಮತ್ತು ಅದರ ಕೊಡುಗೆಗಳನ್ನು ಪರಿಶೀಲಿಸಿ.
2. ಕರ್ನಾಟಕದಲ್ಲಿ ಜೈನಧರ್ಮದ ಕೊಡುಗೆಗಳನ್ನು ವಿವರಿಸಿ.
3. ದಕ್ಷಿಣ ಭಾರತದಲ್ಲಿ ಜೈನಧರ್ಮ ಮತ್ತು ಬೌದ್ಧ ಧರ್ಮದ ಬೆಳವಣಿಗೆಯಲ್ಲಿ ರಾಜಮನೆತನಗಳ ಕೊಡುಗೆಗಳನ್ನು ಪರಿಶೀಲಿಸಿ.
4. ದಕ್ಷಿಣ ಭಾರತದಲ್ಲಿ ಬೌದ್ಧ ಧರ್ಮ ಮತ್ತು ಜೈನ ಧರ್ಮಗಳ ಅವನತಿಗೆ ಕಾರಣಗಳನ್ನು ವಿಶ್ಲೇಷಿಸಿ.

## 28.14 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


| | | | |
|---|---|---|---|
| 1. | ಆರ್.ಆರ್. ದಿವಾಕರ್ (ಸಂ) | : | ಕರ್ನಾಟಕ ಪರಂಪರೆ (ಸಂ 1) |
| 2. | K.A. Neelakantasastry | : | A History of South India |
| 3. | Yazdani , G. | : | The Early History of Deccan |
| 4. | K.A.N. Sastry | : | History and Culture of Tamils |
| 5. | P.B. Desai | : | A History of Karnataka |
| 6. | N. Subramanian | : | The Sangam Polity |
| 7. | R.G. Bhandarkar | : | Early History of Deccan |
| 8. | K. Gopala Chari | : | Early History of the Andra |
| 9. | M.V. Krishna Rao | : | A Brief Survey of Music Tradition in Religion and art in Karnataka |
| 10. | Chakravarti ,U. | : | The Social Dimension of Early Buddhism |
| 11. | R.N. Nandi | : | Social Roots of Religion in Ancient India |
| 12. | Romila Thapar (Ed) | : | Recent Perspectives of Early Indian History |
| 13. | ಬಿ. ಷೇಕ್ ಅಲಿ (ಸಂ) | : | ಕರ್ನಾಟಕ ಚರಿತ್ರೆ (ಸಂಪುಟ 1 ಮತ್ತು 2) |

# ಟಿಪ್ಪಣಿಗಳು

# ಘಟಕ - 29

# ದಕ್ಷಿಣ ಭಾರತದಲ್ಲಿ ವೈಷ್ಣವ ಧರ್ಮ

*ವಿಷಯ ಕ್ರಮ*


29.0 ಘಟಕದ ಉದ್ದೇಶ

29.1 ಪೀಠಿಕೆ

29.2 ಶಾತವಾಹನ ಕಾಲದಲ್ಲಿ ವೈಷ್ಣವ ಪಂಥ

29.3 ಬಾದಾಮಿ ಚಾಳುಕ್ಯ ಮತ್ತು ಗಂಗರ ಕಾಲದಲ್ಲಿ ವೈಷ್ಣವ ಮತಾಚರಣೆ

29.4 ರಾಷ್ಟ್ರಕೂಟ ಮತ್ತು ಸೇವುಣರ ಪ್ರೋತ್ಸಾಹ

29.5 ವೈಷ್ಣವ ಧರ್ಮ ಮತ್ತು ಹೊಯ್ಸಳರು

29.6 ತಮಿಳುನಾಡಿನಲ್ಲಿ ವೈಷ್ಣವ ಧರ್ಮದ ಬೆಳವಣಿಗೆ

29.7 ರಾಮಾನುಜಚಾರ್ಯರು ಮತ್ತು ಶ್ರೀ ವೈಷ್ಣವ ಪಂಥದ ಬೆಳವಣಿಗೆ.

29.7.1 ವಿಶಿಷ್ಟಾ ದ್ವೈತ

29.8 ಮಧ್ವಾಚಾರ್ಯರು

29.8.1 ದ್ವೈತ ಸಿದ್ಧಾಂತ

29.9 ಸಾರಾಂಶ

29.10 ಸ್ವಪರೀಕ್ಷೆ ಪ್ರಶ್ನೆಗಳು

29.11 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 29.0 ಘಟಕದ ಉದ್ದೇಶ

ದಕ್ಷಿಣ ಭಾರತದ ಸಮಾಜದಲ್ಲಿ ವೈದಿಕ ಪಂಥಗಳಲ್ಲೊಂದಾದ ವೈಷ್ಣವ ಧರ್ಮದ ಇತಿಹಾಸ ಮತ್ತು ಅದರ ಪ್ರಭಾವದ ವ್ಯಾಪಕತೆಯನ್ನು ತಿಳಿಸುವುದು ಈ ಘಟಕದ ಉದ್ದೇಶವಾಗಿದೆ. ಈ ಪಾಠವನ್ನು ಅಭ್ಯಾಸ ಮಾಡಿದ ಮೇಲೆ ಈ ಕೆಳಗಿನ ಅಂಶಗಳನ್ನು ನೀವು ಗಮನಿಸವಿರಿ:

1) ವಿಷ್ಣುವಿನ ಪರಿಕಲ್ಪನೆಯು ಭಾರತದ ಸಂಸ್ಕೃತಿಯಷ್ಟೇ ಪುರಾತನವಾದುದು. ವಿಷ್ಣು ಸರ್ವೋತ್ತಮ ತತ್ವವನ್ನು ಕ್ರಿ.ಪೂರ್ವ ಶತಮಾನಗಳಲ್ಲೇ ಪ್ರತಿಪಾದಿಸಲಾಗಿದೆ.

ಶಾತ ವಾಹನರ ಕಾಲದಲ್ಲೇ ವಿಷ್ಣು ಪಂಥವು ದಕ್ಷಿಣ ಭಾರತವನ್ನು ಪ್ರವೇಶಿಸಿತು. ಶಾತವಾಹನ ನಾಡಿನಲ್ಲಿ ಸಾಕಷ್ಟು ಪ್ರಮಾಣದಲ್ಲಿ ವ್ಯಾಪಿಸಿತು. ಹಾಗೆಯೇ ಕದಂಬ ಅರಸರು, ಬಾದಾಮಿ ಚಾಳುಕ್ಯರು ಈ ಪಂಥದ ಅನುಯಾಯಿಗಳಾಗಿದ್ದು ಅನೇಕ ದೇವಾಲಯಗಳನ್ನು ನಿರ್ಮಿಸಿದರು.

ತಲಕಾಡಿನ ಗಂಗರು, ರಾಷ್ಟ್ರಕೂಟರು, ಸೇವುಣರು, ಹೊಯ್ಸಳರು. ಈ ಪಂಥವು ವ್ಯಾಪಕವಾಗಿ ಹರಡಲು ಪ್ರೋತ್ಸಾಹ ನೀಡಿದರು.

ತಮಿಳುನಾಡಿನಲ್ಲಿ ಸಂಗಮ ಅರಸರು, ಪಲ್ಲವರು, ಚೋಳರು ಈ ಪಂಥದ ಅನುಯಾಯಿಗಳಾಗಿದ್ದರು.

ರಾಮಾನುಜಾ ಚಾರ್ಯರ ಶ್ರೀ ವೈಷ್ಣವ ಪಂಥದ ಪ್ರಭಾವವನ್ನು ಈ ಪಾಠದಲ್ಲಿ ತಿಳಿಯುವಿರಿ.

ಹಾಗೆಯೇ ಮಧ್ವಾಚಾರ್ಯರ ದ್ವೈತ ಸಿದ್ಧಾಂತದ ಮಹತ್ವನ್ನು ತಿಳಿಯುವುದು ಈ ಪಾಠದ ಉದ್ದೇಶವಾಗಿದೆ.

ಸಾಹಿತ್ಯ, ತತ್ವಶಾಸ್ತ್ರ, ಶಿಕ್ಷಣ, ಕಲೆ ವಾಸ್ತು ಶಿಲ್ಪ ಕ್ಷೇತ್ರದಲ್ಲೂ ಈ ಧರ್ಮದ ಕೊಡುಗೆಗಳನ್ನು ತಿಳಿಯುವಿರಿ.

## 29.1 ಪೀಠಿಕೆ

ಈ ಘಟಕವು ವೈಷ್ಣವ ಧರ್ಮದ ಉಗಮ, ಪ್ರಚಾರ, ಮತ್ತು ಸಮಾಜದ ಮೇಲೆ ಅದರ ಪ್ರಭಾವವನ್ನೂ ಪರಿಚಯಿಸಿಕೊಳ್ಳುವಿರಿ. ಹಾಗೆಯೇ, ದಕ್ಷಿಣ ಭಾರತದ ಅರಸು ಮನೆತನಗಳು ಈ ಧರ್ಮದ ಏಳಿಗೆಗೆ ಕೈಗೊಂಡ ಉದಾರ ಕೊಡುಗೆಗಳನ್ನು ಗಮನಿಸುವಿರಿ. ಅರಸು ಮನೆತನಗಳಲ್ಲಿ ಶಾತವಾಹನರು, ಗಂಗರು, ಬಾದಾಮಿ ಚಾಳುಕ್ಯರು ರಾಷ್ಟ್ರಕೂಟರು, ಹೊಯ್ಸಳರು, ಸೇವುಣರು, ಪಲ್ಲವರು ಚೋಳರು ನೀಡಿದ ಅಪಾರ ಬೆಂಬಲ ಮತ್ತು ಪ್ರೋತ್ಸಾಹವನ್ನು ಅಭ್ಯಾಸಿಸುವಿರಿ. ಸಾಂಸ್ಕೃತಿಕ ವಲಯದಲ್ಲಿ ಈ ಧರ್ಮದ ಕೊಡುಗೆಗಳನ್ನು ಪರಿಚಯಿಸಿಕೊಳ್ಳುವಿರಿ.

## 29.2 ಶಾತವಾಹನರ ಕಾಲದಲ್ಲಿ ವೈಷ್ಣವ ಪಂಥ

ವೈದಿಕ ಧರ್ಮದಲ್ಲಿ ವೈಷ್ಣವ, ಶೈವ ಪಂಥಗಳು ಒಂದೇ ರಥದ ಎರಡು ಚಕ್ರಗಳಿದ್ದಂತೆ ಎಂಬ ಭಾವನೆಗಳು ಇವೆ. ವಿಷ್ಣುವಿನ ಸ್ತುತಿಯನ್ನೊಳಗೊಂಡ ಶ್ಲೋಕಗಳು ಋಗ್ವೇದ ಕಾಲದಿಂದಲೂ ಪ್ರಚಲಿತವಾಗಿವೆ. ಕ್ರಮೇಣ ವಿಷ್ಣು ಸರ್ವೋತ್ತಮತ್ವವನ್ನು ಪ್ರತಿ ಪಾದಿಸುವ ಭಾಗವತ ಶಾಖೆಯು ಕ್ರಿ.ಪೂ. ದ ಶತಮಾನಗಳಲ್ಲಿ ರೂಢಿಗೆ ಬಂದು ವಿಕಾಸವಾಯಿತು. ಶಾತವಾಹನರ ಕಾಲದ ವೇಳೆಗಾಗಲೇ ವೈಷ್ಣವ ಪಂಥವು ಕರ್ನಾಟಕವನ್ನು ಪ್ರವೇಶಿಸಿತು. ಶಾತವಾಹನ ರಾಜರು ವೈಷ್ಣವ ಮತಾವಲಂಬಿಗಳಾಗಿದ್ದರು. ಅವರಲ್ಲಿ ಅನೇಕರು ಅಶ್ವಮೇದ, ರಾಜಸೂಯ ಮೊದಲಾದ ಯಾಗಗಳನ್ನು ಆಚರಿಸಿದರು. ಎರಡನೇ ಶಾತಕರ್ಣಿ ಬ್ರಾಹ್ಮಣರಿಗೆ ಗೋವುಗಳನ್ನು, ಭೂಮಿಯನ್ನು ಮತ್ತು ವಿಶೇಷ ದಕ್ಷಿಣೆಯನ್ನು ದಾನ ಮಾಡಿದುದಾಗಿ ಆತನ ನಾನಾಘಾಟ್ ಶಾಸನದಿಂದ ತಿಳಿದು ಬರುತ್ತದೆ. ಅನೇಕ ಶಾಸನಗಳಲ್ಲಿ ಇಂದ್ರ, ಸಂಕರ್ಷಣ, ವಾಸುದೇವ, ಮೊದಲಾದ ದೇವತೆಗಳನ್ನು ಸ್ಮರಿಸಲಾಗಿದೆ. ರಾಮಾಯಣವನ್ನು ಮಹಾಭಾರತದ ಕಾವ್ಯಗಳು ಮತ್ತು ಪುರಾಣಗಳು ಶಾತವಾಹನ ನಾಡಿನಲ್ಲಿ ಸಾಕಷ್ಟು ಪ್ರಚಾರದಲ್ಲಿದ್ದವು. ವೈಷ್ಣವ ಪಂಥ ದಕ್ಷಿಣ ಭಾರತದಲ್ಲಿ ಆರ್ಯಕರಣದಷ್ಟೇ ಪುರಾತನವಾದುದು. ಕದಂಬ ಅರಸರು ಶೈವ ಮತಾವಲಂಬಿಯಾಗಿದ್ದರು ವೈಷ್ಣವ ಪಂಥದ ಹೆಸರುಗಳನ್ನು ಅನೇಕ ಅರಸರು ಹೊಂದಿದ್ದರು. ರಘು, ಕೃಷ್ಣ, ಹರಿ ಮುಂತಾದ ಹೆಸರುಗಳು ವೈಷ್ಣವ ಮತದ ಜನಪ್ರಿಯತೆಗೆ ಸಾಕ್ಷಿಯಾಗಿದೆ. ಈ ಮನೆತನದ ಹಲ್ಮಡಿ ಶಾಸನ ಅಚ್ಯುತ (ವಿಷ್ಣು) ಸ್ತುತಿಯಿಂದ ಪ್ರಾರಂಭಗೊಳ್ಳುತ್ತದೆ.

## 29.3 ಬಾದಾಮಿ ಚಾಳುಕ್ಯ ಮತ್ತು ಗಂಗರ ಕಾಲದಲ್ಲಿ ವೈಷ್ಣವ ಮತಾಚರಣೆ

ಬಾದಾಮಿ ಚಾಳುಕ್ಯರು ನಿಷ್ಠಾವಂತ ವೈಷ್ಣವ ಮತಾವಲಂಬಿಗಳಾಗಿದ್ದರು. ವಿಷ್ಣುವಿನ ಅವತಾರಗಳಲ್ಲೊಂದಾದ ವರಾಹವನ್ನು ತಮ್ಮ ರಾಜ ಚಿನ್ಹೆಯನ್ನಾಗಿ ಹೊಂದಿದ್ದರು. ತಾವು 'ಪರಮ ಭಾಗವತ'ರೆಂದು ಬಹಳ ಹೆಮ್ಮೆಯಿಂದ ಕರೆದುಕೊಂಡಿದ್ದಾರೆ. ಶ್ರೀ ಪೃಥ್ವಿ ವಲ್ಲಭ (ವಿಷ್ಣುವಿನ ಅರ್ಧಾಂಗಿನಿ) ಎಂಬುವುದು ಅವರ ಮೆಚ್ಚಿನ ಬಿರುದುಗಳಲ್ಲೊಂದಾಗಿದ್ದಿತು. ವಿಷ್ಣು ಅಸುರರಿಂದ ಪೃಥ್ವಿಯನ್ನು ರಕ್ಷಿಸಿದ ಹಾಗೆ ತಾವು ಭೂಮಂಡಲವನ್ನೂ ರಕ್ಷಿಸುವರೆಂದು ನಂಬಿದ್ದರು. ಮಂಗಳೇಶನು ಬಾದಾಮಿಯಲ್ಲಿ ವೈಷ್ಣವ ಗುಹಾಲಯವನ್ನು ನಿರ್ಮಿಸಿದನು. ಇಧು ಅವರ ವೈಷ್ಣವ ಪಂಥದಲ್ಲಿನ ನಿಷ್ಠೆ ಮತ್ತು ಜನಪ್ರಿಯತೆಗೆ ಸಾಕ್ಷಿಯಾಗಿದೆ. ಎರಡನೇ ಪುಲಿಕೇಶಿಯವರೆಗಿನ ಎಲ್ಲಾ ಆರಂಭದ ಚಾಳುಕ್ಯ ಅರಸರು ವೈಷ್ಣವ ಮತಾವಲಂಬಿಯಾಗಿದ್ದು ಐಹೊಳೆಯಲ್ಲಿ ಅನೇಕ ವೈಷ್ಣವ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಬಾದಾಮಿ ಚಾಳುಕ್ಯರು ವರಾಹ ಲಾಂಛನವನ್ನು ಹೊಂದಿದ್ದು 'ಪರಮ ಭಾಗವತ' ಎಂಬ ಬಿರುದನ್ನು ಧರಿಸಿ ವೈಷ್ಣವ ಪಂಥವನ್ನು ಪೋಷಿಸಿದರು.

ತಲಕಾಡಿನ ಗಂಗರು ಪ್ರಾರಂಭದ ದಿಸೆಯಿಂದ ಕ್ರಿ.ಶ. ಒಂಭತ್ತನೇ ಶತಮಾನದವರೆಗೂ ವೈದಿಕ ಮತೀಯರಾಗಿದ್ದು ವೈಷ್ಣವ ಧರ್ಮವನ್ನು ಪೋಷಿಸಿದರು. ಅವರಲ್ಲಿ ಅನೇಕರು ವೈಷ್ಣವ ಪಂಥಾವಲಂಬಿಗಳಾಗಿದ್ದು ಕಮಲೋದರ, ಮಾಧವ, ಶಕ್ರ ತುಲ್ಯ ಪರಾಕ್ರಮ : ಮೊದಲಾದ ಬಿರುದುಗಳನ್ನು ಹೊಂದಿದ್ದರು. ಅವರ ಅನೇಕ ಶಾಸನಗಳು 'ಭಾಗವತ ಪದ್ಮನಾಭ'ಶ್ಲೋಕಗಳನ್ನು ಉಲ್ಲೇಖಿಸುತ್ತವೆ. ಕೊಂಗುಣಿವರ್ಮನ ತಂದೆಯ ಹೆಸರು ಪದ್ಮನಾಭ. ಹಾಗೆಯೇ ಇನ್ನು ಅನೇಕ ಅರಸರ ಹೆಸರು ವೈಷ್ಣವ ಸಂಪ್ರದಾಯವನ್ನು ಪ್ರತಿಬಿಂಬಿಸುತ್ತವೆ: ಮಾಧವ, ವಿಷ್ಣುಗೋಪ, ಹರಿವರ್ಮನ್, ಕೃಷ್ಣವರ್ಮ, ಶ್ರೀ ವಿಕ್ರಮ, ಶ್ರೀ ಪುರುಷ ಇತ್ಯಾದಿ ಹೆಸರುಗಳು ವೈಷ್ಣವ ಪರಂಪರೆಯನ್ನು ಸೂಚಿಸುತ್ತವೆ. ವಿಷ್ಣುಗೋಪನು ತಾನು 'ನಾರಾಯಣ ಚರಣ ನ್ಯೂದಿತ' ಎಂದು ಕರೆದುಕೊಂಡಿದ್ದಾನೆ.

## 29.4 ರಾಷ್ಟ್ರಕೂಟ ಮತ್ತು ಹೊಯ್ಸಳರ ಪ್ರೋತ್ಸಾಹ

ರಾಷ್ಟ್ರಕೂಟರು ಆರಂಭದಲ್ಲಿ ವೈಷ್ಣವ ಮತಾವಲಂಬಿಯಾಗಿದ್ದರು. ವಿಷ್ಣುವಿನ ವಾಹನವಾದ ಗರುಡನು ಅವರ ಮನೆತನದ ಲಾಂಛನವಾಗಿದ್ದಿತು. ಅವರ ಹೆಸರುಗಳಾದ ಕೃಷ್ಣ ಗೋವಿಂದ, ಧೃವ, ಇತ್ಯಾದಿಗಳು ಅವರ ವೈಷ್ಣವ ನಿಷ್ಠೆಯನ್ನು ಬೆಂಬಲಿಸುತ್ತವೆ. ಅವರ ಅನೇಕ ಶಾಸನಗಳು ವಿಷ್ಣು ಸ್ಮರಣೆಯಿಂದ ಆರಂಭಗೊಳ್ಳುತ್ತವೆ. ಅವರ ಬಿರುದುಗಳಾದ ಶ್ರೀ ವಲ್ಲಭ, ಪೃಥ್ವಿ, ವಲ್ಲಭ, ಕೀರ್ತಿ ನಾರಾಯಣ ಮತ್ತು ವೀರ ನಾರಾಯಣ ಎಂಬುವು ಅವರ ವೈಷ್ಣವ ಸಂಪ್ರದಾಯಕ್ಕೆ ಸಾಕ್ಷಿಯಾಗಿದೆ. ಅಮೋಘ ವರ್ಷನು ಜೈನ ಅರಸನೆಂದು ಪ್ರಸಿದ್ಧಿಯಾಗಿದ್ದರೂ ವಿಷ್ಣುವಿನ ಬಗ್ಗೆ ಅಪಾರ ಶ್ರದ್ಧೆ ಹೊಂದಿದ್ದು ತನ್ನ ಸಂಜನ್ ಶಾಸನವನ್ನು 'ವೀರನಾರಣ' ಸ್ತುತಿಯಿಂದ ಆರಂಭ ಮಾಡಿದ್ದಾನೆ ಮತ್ತು 'ವೀರನಾರಾಯಣ'ಎಂಬ ಬಿರುದನ್ನು ಧರಿಸಿದ್ದಾನೆ. ಇದೇ ಶಾಸನವು ಅವನು ಕೊಲ್ಲಾಪುರದ ಮಹಾಲಕ್ಷ್ಮಿಯ ಭಕ್ತನೆಂದು ರುಜುವಾತು ಪಡಿಸುತ್ತದೆ. ಕೃಷ್ಣನು ಎಲ್ಲೋರದ ಬಳಿ ಕೈಲಾಸನಾಥ ದೇವಾಲಯವನ್ನು ನಿರ್ಮಿಸಿದ್ದಾನೆ.

ಸೇವುಣರ ಆಸ್ಥಾನದಲ್ಲಿದ್ದ ಚಕ್ರಧಾರನು ಭಿನ್ನವಾದ ವಿಷ್ಣು ಭಕ್ತಿಯನ್ನು ಪ್ರಸಾರ ಮಾಡಿದನು. ಅವನು ಸ್ಥಾಪಿಸಿದ ಪಂಥಕ್ಕೆ ಮಹಾನುಭಾವ ಪಂಥವೆಂದು ಮಹಾರಾಷ್ಟ್ರದಲ್ಲಿ ಪ್ರಸಿದ್ಧಿಗೆ ಬಂದಿತು. ಈ ಪಂಥದಲ್ಲಿ ಕೃಷ್ಣನನ್ನು ಸರ್ವೋತ್ತಮನೆಂದು ಪರಿಗಣಿಸಿ, ದತ್ತಾತ್ರಯನನ್ನು ಕೃಷ್ಣನ ಅವತಾರವೆಂದು ಪ್ರಚಾರ ಮಾಡಲಾಯಿತು. ಈ ಪರಿಕಲ್ಪನೆಯನ್ನು ಭಗವದ್ಗೀತೆಯಿಂದ ಪಡೆಯಲಾಯಿತು. ಇದರ ಪ್ರಭಾವ ಕನ್ನಡನಾಡಿನ ಮೇಲೆ ಅತ್ಯಲ್ಪವಾಗಿದ್ದಿತು. ಆದರೆ ವಿಠಲನ ಭಕ್ತಿ ಚಳುವಳಿಯಿಂದ ಉಂಟಾದ ವರಕಾರಿ ಪಂಥವು 14ಮತ್ತು 15ನೇ ಶತಮಾನದಲ್ಲಿ ಮಹಾರಾಷ್ಟ್ರದಲ್ಲಿ ಏಳಿಗೆ ಹೊಂದಿ ಕರ್ನಾಟಕದ ಮೇಲೂ ಪ್ರಭಾವವನ್ನು ಬೀರಿರುವುದನ್ನು ಕಾಣಬಹುದು. ಇಂದೂ ಸಹ ಕರ್ನಾಟಕದಲ್ಲಿ ಮರಾಠಿ ಮಾತನಾಡುವ ಜನರಲ್ಲಿ ಈ ಪಂಥವು ಬಹಳ ಜನಪ್ರಿಯವಾಗಿದೆ. ಜ್ಞಾನದೇವ, ನಾಮದೇವ, ತುಕರಾಮ್ ಮುಂತಾದ ಮರಾಠಿ ಸಂತರು ವಿಠಲನನ್ನು ಕುರಿತು ರಚಿಸಿರುವ ಪದ್ಯಗಳು ಬಹಳ ಜನಪ್ರಿಯವಾಗಿದೆ. ಮಾಧವ ಸಂತರಲ್ಲಿಯೂ ಕೂಡ ಈ ವಿಠಲನ ಪಂಥ ರೂಢಿಯಲ್ಲಿದೆ. ಪುರಂದರ ವಿಠಲ ಎಂಬುವುದು ಪುರಂದರ ದಾಸರ ಮುದ್ರಿತವಾಗಿದ್ದಿತು.

## 29.5 ವೈಷ್ಣವ ಧರ್ಮ ಮತ್ತು ಹೊಯ್ಸಳರು

ಹೊಯ್ಸಳ ಅರಸರು ಆರಂಭದಲ್ಲಿ ಜೈನಮತ ಅನುಯಾಯಿಗಳು. ರಾಮಾನುಜಚಾರ್ಯರ ಪ್ರಭಾವದಿಂದ ವಿಷ್ಣುವರ್ಧನನು ಮತಾಂತರಗೊಂಡ ನಂತರ ವೈಷ್ಣವ ಧರ್ಮ ಕರ್ನಾಟಕದಲ್ಲಿ ಬಹಳ ಜನಪ್ರಿಯವಾಗಿ ಬೆಳೆಯಿತು. ವಿಷ್ಣುವರ್ಧನನು ಬೇಲೂರಿನ ಕೇಶವ ದೇವಾಲಯ ಸೇರಿದಂತೆ ಐದು ವೈಷ್ಣವ ದೇವಾಲಯಗಳನ್ನು ನಿರ್ಮಿಸಿದನು. ಇವನ ತರುವಾಯ ಬಂದ ಅನೇಕ ಹೊಯ್ಸಳ ಅರಸರು ವೈಷ್ಣವ ಮತಾವಲಂಬಿಯಾಗಿ ವಿಶೇಷ ಪ್ರೋತ್ಸಾಹ ನೀಡಿದರು. ಹೊಯ್ಸಳರ ಆಳ್ವಿಕೆಯ ಕೊನೆಯ ಕಾಲದಲ್ಲಿ ಮಧ್ವಚಾರ್ಯರು

ದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡಿ ಹರಿಯೇ ಸರ್ವೋತ್ತಮ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದರು. ಸೇವುಣರು ವೈಷ್ಣವರಾಗಿದ್ದು ರಾಷ್ಟ್ರಕೂಟ ಹಾಗೆ ಗರುಡನನ್ನು ತಮ್ಮ ಮನೆತನದ ಲಾಂಛನವನ್ನಾಗಿಸಿಕೊಂಡರು. ವಿಜಯನಗರದ ಸಾಳುವ, ತುಳುವ ಮತ್ತು ಅರವೀಡು ಮನೆತನದವರು ಶ್ರೀ ವೈಷ್ಣವರಾಗಿದ್ದರು. ತರವಾಯ ಮೈಸೂರು ಅರಸರು ಶ್ರೀ ವೈಷ್ಣವ ಮತಾವಲಂಬಿಯಾಗಿದ್ದು ಪರಕಾಲ ಮಠದ ಭಕ್ತರಾಗಿದ್ದರು. ಕರ್ನಾಟಕದಲ್ಲಿ ಇಂದು ಸಹ ವೈಷ್ಣವ ಮತ ಜನಪ್ರಿಯವಾದ ಪಂಥವಾಗಿದ್ದು, ಶ್ರೀರಂಗಪಟ್ಟಣ, ಮೇಲುಕೋಟೆ, ಮತ್ತು ಉಡುಪಿಗಳು ಈ ಪಂಥದ ಪ್ರಮುಖ ಕೇಂದ್ರಗಳಾಗಿದೆ.

ವಿಷ್ಣುಭಕ್ತಿಯನ್ನು ಕುರಿತು ಅನೇಕ ಕನ್ನಡ ಸಾಹಿತ್ಯ ಕೃತಿಗಳು ರಚನೆಯಾದವು. ಹೊಯ್ಸಳರ ಕಾಲದ ರುದ್ರಭಟ್ಟ ಕವಿಯಿಂದ ರಚಿತವಾದ 'ಜಗನ್ನಾಥ ವಿಜಯ' ವು ಪ್ರಮುಖವಾದ ಕೃತಿ. ವಿಜಯನಗರ ಕಾಲದ ಕುಮಾರ ವ್ಯಾಸರು ಶ್ರೀ ಕೃಷ್ಣನನ್ನು ತನ್ನ ಇಷ್ಟದೇವನನ್ನಾಗಿ ಮಾಡಿಕೊಂಡು ಅವನ ಮಾಹಿತಿಯನ್ನು ಕುರಿತು ಕಾವ್ಯ ರಚಿಸಿದರು. ಹಾಗೆಯೇ ಗದುಗಿನ ವೀರನಾರಾಯಣ, ನರಹರಿಕವಿ ಮತ್ತು ಚಾಟು ವಿಠಲನಾಥ ಮೊದಲಾದವರು ವೈಷ್ಣವ ಕವಿಗಳು. ಈ ಪಂಥದವರು ದಾಸ ಸಾಹಿತ್ಯದ ಬೆಳವಣಿಗೆಗೆ ಅಪಾರ ಕಾಣಿಕೆ ನೀಡಿದ್ದಾರೆ. ಅವರಲ್ಲಿ ಪ್ರಮುಖರಾದವರು ವ್ಯಾಸತೀರ್ಥರು, ಪುರಂದರ, ಕನಕ ಮತ್ತು ವಾದಿರಾಜರು. ಇವರೆಲ್ಲರೂ ಮಾಧ್ವ ಮತ ಅನುಯಾಯಿಗಳಾಗಿದ್ದು ಕೀರ್ತನೆ ಪ್ರಕಾರ ಸಾಹಿತ್ಯ ಬೆಳವಣಿಗೆಗೆ ಸಹಕಾರಿಯಾಗಿದ್ದಾರೆ. ಹಾಗೆಯೇ 18 ನೇ ಶತಮಾನದಲ್ಲಿ ಕನ್ನಡದಲ್ಲಿ ಶ್ರೀ ವೈಷ್ಣವ ಸಾಹಿತ್ಯ ಸೃಷ್ಟಿಯಾಯಿತು. ತಿರುಮಲರಾಯ, ಸಿಂಗರಾರ್ಯ, ಮೈಸೂರಿನ ಚಿಕ್ಕದೇವರಾಯ, ಹೊನ್ನಮ್ಮ ಮತ್ತು ಲಕ್ಷ್ಮೀಶರು ಈ ಪಂಥದ ಪ್ರಮುಖ ಕವಿಗಳು. ಹೀಗೆ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಅಪಾರ ಕಾಣಿಕೆ ನೀಡಿದ್ದಾರೆ. ಸಂಸ್ಕೃತದಲ್ಲಿ ರಚಿತವಾದ ಬಹಳ ಜನಪ್ರಿಯವಾದ ಭಾಗವತ ಪುರಾಣವು ಕರ್ನಾಟಕದಲ್ಲೆ ರಚಿತವಾಯಿತೆಂದು ನಂಬಲಾಗಿದೆ.

## 29.6 ತಮಿಳುನಾಡಿನಲ್ಲಿ ವೈಷ್ಣವ ಧರ್ಮದ ಬೆಳವಣಿಗೆ

ತಮಿಳು ನಾಡಿನಲ್ಲಿ ಸಂಗಮ ಯುಗದ ಪ್ರಾರಂಭದಲ್ಲಿ ಧಾರ್ಮಿಕ ಚಟುವಟಿಕೆಗಳೂ, ಪೂಜಾವಿಧಾನಗಳು ವೈದಿಕ ಪದ್ಧತಿಗಿಂತ ಭಿನ್ನವಾಗಿದ್ದವು. ಆದರೆ ವೈದಿಕ ಧರ್ಮ ಕ್ರಮೇಣ ದಕ್ಷಿಣದಲ್ಲಿ ಪ್ರಚಾರವಾಗುತ್ತಾ ಬಂದಿತು. ಆರ್ಯ ದ್ರಾವಿಡ ಸಂಪ್ರದಾಯಗಳು ಮಿಲನಗೊಂಡು ವರ್ಣವ್ಯವಸ್ಥೆ ಆಚರಣೆಗೆ ಬಂದಿತು. ದೇವಾಲಯ ನಿರ್ಮಾಣ ಪದ್ಧತಿ ಆಚರಣೆಗೆ ಬಂದಿತು. ಮುರುಗನ್ ಮೂರ್ತಿ ಪೂಜೆ ಮತ್ತು ಆರಾಧನೆಯೊಂದಿಗೆ ಆದೇವತೆಯ ಸಾಧನೆಗಳು ಕಥೆ ರೂಪದಲ್ಲಿ ಪ್ರಚಲಿತವಾಗಿದ್ದವು. ಕ್ರಮೇಣ ಮುರುಗ-ಕಾರ್ತೀಕೇಯ, ಬಲದೇವ, ಕೃಷ್ಣ-ವಿಷ್ಣು ಆರಾಧನೆಗಳು ಪ್ರಚಾರಕ್ಕೆ ಬಂದಿತು. ವಿಷ್ಣುವನ್ನು ತುಳಸಿಯೊಡನೆ ಪೂಜಿಸುವ ಪದ್ಧತಿ ಸಂಗಮ ಯುಗದಲ್ಲಿ ಜಾರಿಯಲ್ಲಿದ್ದಿತು.

ಪಲ್ಲವರ ಕಾಲದಲ್ಲಿ ಸಹ ಬೌದ್ಧ -ಜೈನ ದರ್ಶನಗಳ ಪ್ರಭಾವ ಕುಗ್ಗಿ ಶೈವ ಮತ್ತು ವೈಷ್ಣವ ಪಂಥಗಳು ಪ್ರಾಬಲ್ಯಕ್ಕೆ ಬಂದವು. ಕ್ರಿ.ಶ. 6 ನೇ ಶತಮಾನದಿಂದ ವೈಷ್ಣವ ಸಂತರಾದ ಆಳ್ವಾರರೂ ತಮ್ಮ ಪಂಥದ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡರು. ಆಳ್ವಾರರು ಸರಳ ಜೀವಿಗಳೂ, ಕಾರ್ಯ ತತ್ಪರರೂ ಆಗಿದ್ದರು. ಆಳ್ವಾರರು ಸಮಾಜದ ಎಲ್ಲಾ ವರ್ಗಗಳಿಗೆ ಸೇರಿದವರಾಗಿದ್ದರು. ಇವರ ಭಕ್ತಿ, ಶ್ರದ್ಧೆಗಳ ಫಲವಾಗಿ ವೈಷ್ಣವ ಪಂಥ ವಿಶೇಷವಾಗಿ ಪ್ರಸಾರಕ್ಕೆ ಬಂದಿತು. ಪಲ್ಲವರ ಉನ್ನತಿಯ ಕಾಲದಲ್ಲಿ ಪೊರ್ಯೆಯ್ ಆಳ್ವಾರ್, ಪುದತ್ತಾಳ್ವಾರ್, ಪೆರಿಯಾಳ್ವಾರ್ ಮೊದಲಾದ ಪ್ರಸಿದ್ಧ ವೈಷ್ಣವ ಸಂತರು ವೈಷ್ಣವ ಪಂಥದ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು. ವಿಷ್ಣು ದೇವಾಲಯಗಳು ನಿರ್ಮಾಣಗೊಂಡವು. ಭಾಗವತ ತಮಿಳು ಭಾಷೆಗೆ ಪಲ್ಲವರ ಕಾಲದಲ್ಲಿ ಪ್ರಪ್ರಥಮವಾಗಿ ತರ್ಜುಮೆಯಾಯಿತು. ಪಲ್ಲವರ ಕಾಲದಲ್ಲಿ ಕಟ್ಟಲಾದ ದೇವಾಲಯಗಳಲ್ಲಿ ಭಾಗವತದ ಘಟನಾವಳಿಗಳನ್ನು ಶಿಲ್ಪಕ್ಕೆ ಅಳವಡಿಸಿಕೊಳ್ಳಲಾಗಿದೆ. ಆಳ್ವಾರರು ಪಲ್ಲವರ ಕಾಲದಲ್ಲಿ ತಮಿಳು ಭಾಷೆಯಲ್ಲಿ ಭಕ್ತಿ ಭಾವ ಪ್ರಧಾನವಾದ ಗೀತೆಗಳನ್ನು ರಚಿಸಿದರು. ವೈಷ್ಣವ ಸಂತರಾದ ನಮ್ಮಾಳ್ವಾರ್, ಪೆರಿಯಾಳ್ವಾರ್, ಅಂಡಾಳ್ ಮೊದಲಾದವರು ಅನೇಕ ತಮಿಳು ಕೃತಿಗಳನ್ನು ರಚಿಸಿದರು. ಒಂದನೇ ಮಹೇಂದ್ರವರ್ಮನ ಸಮಕಾಲೀನರಾದ ತಿರುಮಲೆಶೈ ಆಳ್ವಾರರು "ನನ್ಮುಖತ್ತಿರುವಂದಾಡಿ" ಮತ್ತು ""ತಿರುಚ್ಛಂದವಿರುತ್ತಾನ್" ಎಂಬ ಗ್ರಂಥಗಳನ್ನು ರಚಿಸಿದರು.

ಚೋಳರ ಕಾಲದಲ್ಲಿ ವೈದಿಕ ಪಂಥಗಳಾದ ವೈಷ್ಣವ ಮತ್ತು ಶೈವ ಸಂಪ್ರದಾಯಗಳು ತಮ್ಮ ಸಂಪೂರ್ಣ ಬೆಳವಣಿಗೆಯನ್ನು ತಲುಪಿತೆಂದು ಕೆ.ಎ. ನೀಲಕಂಠಶಾಸ್ತ್ರಿಗಳು ಅಭಿಪ್ರಾಯ ಪಡುತ್ತಾರೆ. ಇವರ ಕಾಲದಲ್ಲಿ ವೈಷ್ಣವ ಪಂಥ ದೊಡ್ಡ ಪ್ರಮಾಣದಲ್ಲಿ ಪ್ರಗತಿಯನ್ನು ಸಾಧಿಸಿತು. ಇವರ ಕಾಲದಲ್ಲಿಯೇ ವೈಷ್ಣವ ಆಳ್ವಾರರು ತಮ್ಮ ಪಂಥಕ್ಕೆ ಬೇಕಾದ ಸೈದ್ಧಾಂತಿಕ ರೂಪುರೇಶೆಗಳನ್ನು ರೂಪಿಸಿದರು. ನಾಥಮುನಿ ಆಳ್ವಾಂದರ್ ಅಥವಾ ಯಮುನಾ ಚಾರ್ಯರು ಮತ್ತು ರಾಮಾನುಜರು ಈ ಕಾಲದ ಸುಪ್ರಸಿದ್ಧ ದಾರ್ಶನಿಕರು. ಹೀಗೆ ವೈಷ್ಣವ ಪಂಥ ದಕ್ಷಿಣ ಭಾರತದಾದ್ಯಂತ ಕಾಲಕ್ರಮೇಣದಲ್ಲಿ ಪ್ರಬಲ ಶಕ್ತಿಯಾಗಿ ಬೆಳೆಯಲು ಈ ಆಚಾರ್ಯರ ಪ್ರಯತ್ನವೇ ಕಾರಣವಾಗಿದ್ದಿತು.

## 29.7 ರಾಮಾನುಜಚಾರ್ಯರು ಮತ್ತು ಶ್ರೀ ವೈಷ್ಣವ ಪಂಥದ ಬೆಳವಣಿಗೆ (ಕ್ರಿ.ಶ. 1017-1134)

ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದಕರಾದ ಶ್ರೀ ರಾಮಾನುಜಚಾರ್ಯರು ತಮಿಳು ನಾಡಿನಲ್ಲಿ ಜನಿಸಿ ತಮ್ಮ ಸಿದ್ಧಾಂತಗಳನ್ನು ಪ್ರಚಾರ ಮಾಡಲು ದೇಶ ಪರ್ಯಟನೆ ಮಾಡಿದರೆಂದು ತಿಳಿದು ಬರುತ್ತದೆ. ಇವರು ಹೊಯ್ಸಳ ನಾಡಿಗೆ ಬಂದು ಮೇಲ್ಕೋಟೆ ಮತ್ತು ಇತರ ಸ್ಥಳಗಳಲ್ಲಿ ಇಪ್ಪತ್ತು ವರ್ಷಗಳ ಕಾಲ ತಂಗಿದ್ದು ತಮ್ಮ ಸಿದ್ಧಾಂತವನ್ನು ಪ್ರಚಾರ ಮಾಡಿದರು.

ಇವರು ಮದರಾಸಿನ ಸಮೀಪದ ಶ್ರೀಪೆರಂಬ ದೂರಿನಲ್ಲಿ ಕ್ರಿ.ಶ. 1017 ರಲ್ಲಿ ಹುಟ್ಟಿದರು. ಕಾಂತಿಮತಿ ಮತ್ತು ಕೇಶವಸೋಮಯಾಜಿ ಎಂಬುವರು ಇವರ ಮಾತಾಪಿತೃಗಳು. ಉಪನಯನ ಕರ್ಮವು ನೆರವೇರಿದ ಕೂಡಲೇ ಬಾಲಕ ರಾಮಾನುಜ ಅದ್ವೈತ ವೇದಾಂತಿಯಾಗಿದ್ದು ಯಾದವ ಪ್ರಕಾಶರಲ್ಲಿ ಅಧ್ಯಯನ ಕೈಗೊಂಡರು. ಆದರೆ ಯಾದವ ಪ್ರಕಾಶರ ವಿಚಾರವಾದವನ್ನು ರಾಮಾನುಜರು ಒಪ್ಪಲಿಲ್ಲ. ಭಿನ್ನಾಭಿಪ್ರಾಯದ ಕಾರಣ ಗುರುಶಿಷ್ಯ ಸಂಬಂಧವು ಮುರಿದು ಬಿತ್ತು. ಅನಂತರ ಯಮುನಾಚಾರ್ಯರ ಶಿಷ್ಯನಾದ ಕಾಂಚಿಪೂರ್ಣ ಎಂಬುವನ ಬಳಿಯಲ್ಲಿ ತಮ್ಮ ಅಧ್ಯಯನವನ್ನು ಮುಂದುವರಿಸಿದರು. ಕಾಂಚಿಪೂರ್ಣನು ಬ್ರಾಹ್ಮಣನಲ್ಲದಿದ್ದರೂ ಸಹ ಅವರಿಬ್ಬರಲ್ಲಿ ಪರಸ್ಪರ ಗಾಢವಾದ ಪ್ರೀತಿ ವಿಶ್ವಾಸ ಬೆಳೆಯಿತು. ಅನಂತರ ರಾಮಾನುಜರು ಗೃಹಸ್ಥಾಶ್ರಮವನ್ನು ತ್ಯಜಿಸಿ ಸನ್ಯಾಸ ಕೈಗೊಂಡು ಧರ್ಮ ಪ್ರಚಾರದಲ್ಲಿ ತೊಡಗಿದರು. ಆ ವೇಳೆಗೆ ಯಮುನಾಚಾರ್ಯರು ಸ್ವರ್ಗಸ್ಥರಾದರು. ಅವರ ಇಂಗಿತದಂತೆ ರಾಮಾನುಜರನ್ನು ಶ್ರೀರಂಗಕ್ಕೆ ಆಹ್ವಾನಿಸಿ ಗೌರವ ಪೂರ್ವಕವಾಗಿ ಅವರನ್ನು ಯಮುನಾ ಚಾರ್ಯರ ಉತ್ತರಾಧಿಕಾರಿಯೆಂದು ಅಂಗೀಕರಿಸಲಾಯಿತು. ಅನಂತರ ಇವರ ಪೂರ್ವಗುರುವಾದ ಯಾದವ ಪ್ರಕಾಶ ಮೊದಲಾದವರು ರಾಮಾನುಜರ ಅನುಯಾಯಿಗಳಾದರು.

ಶ್ರೀರಂಗದಲ್ಲಿ ನೆಲಸಿ ಇವರು ತಮ್ಮ ಅಧ್ಯಯನ ವನ್ನು ಬೋಧನೆಯನ್ನು ಗ್ರಂಥ ರಚನಾ ಕಾರ್ಯವನ್ನು ಮುಂದುವರಿಸಿದರು. ತಮ್ಮ ಮೊದಲ ಗ್ರಂಥವಾದ ವೇದಾಂತ ಸಂಗ್ರಹದಲ್ಲಿ ಶಂಕರರ ಮಾಯವಾದವನ್ನು ಖಂಡಿಸಿದರು. ಬೋಧಾಯನ ಮಾರ್ಗವನ್ನು ಅನುಸರಿಸಿ ಬ್ರಹ್ಮ ಸೂತ್ರಕ್ಕೆ ಭಾಷ್ಯ ಬರೆಯಲು ಕಾಶ್ಮೀರದವರೆಗೂ ದೇಶ ಪರ್ಯಟನ ಮಾಡಿದರು. ಅನಂತರ ತಮ್ಮ ಭಾವಿಷ್ಯವನ್ನು ಪೂರ್ಣಗೊಳಿಸಿದರು. ಶ್ರೀ ರಾಮಾನುಜರಿಂದ ರಚಿತವಾದ ಈ ಭಾಷ್ಯಕ್ಕೆ ಶ್ರೀ ಭಾಷ್ಯಾ ಎಂದು ಹೆಸರಾಗಿದೆ. ಶ್ರೀರಾಮಾನುಜಾಚಾರ್ಯರು ತಮ್ಮ ಸಿದ್ಧಾಂತ ಪ್ರಸಾರಕ್ಕೆ ಮಥುರ, ಬದರಿನಾಥ್, ಕಾಶ್ಮೀರ, ಕಾಶಿ, ಪುರಿಜಗನ್ನಾಥ್ ಮೊದಲಾದ ಸ್ಥಳಗಳನ್ನು ಸಂದರ್ಶಿಸಿ ತಿರುಪತಿಗೆ ಬಂದು ಅಲ್ಲಿಂದ ಶ್ರೀರಂಗಂ ತಲುಪಿದರು.

### *29.7.1 ವಿಶಿಷ್ಟಾದ್ವೈತ*

ಆಳ್ವಾರರಿಂದ ಪ್ರಾರಂಭವಾಗಿ ನಾಥಮುನಿ ಮತ್ತು ಯಮುನಾಚಾರ್ಯರಿಂದ ಪ್ರಚಾರಕ್ಕೆ ಬಂದ ಈ ಸಂಪ್ರದಾಯಕ್ಕೆ ಶ್ರೀ ರಾಮಾನುಜರು ಪ್ರಚಾರ ಮಾಡಿದ ಪಂಥಕ್ಕೆ ವಿಶಿಷ್ಟಾದ್ವೈತ ಎಂದು ಹೆಸರಾಗಿದೆ. ರಾಮಾನುಜರ ಸಿದ್ಧಾಂತದಲ್ಲಿ ಚಿತ್, ಅಚಿತ್ ಮತ್ತು ಈಶ್ವರ ಎಂಬ ಮೂರು ಅಂಶಗಳಿವೆ. ಚಿತ್ ಎಂದರೆ ಆತ್ಮ, ಅಚಿತ್ ಎಂದರೆ ಅಚೇತನ ಜಗತ್ತು. ಈಶ್ವರ ಎಂದರೆ ಪರಮಾತ್ಮ. ಜೀವಾತ್ಮ ಮತ್ತು ಅಚೇತನ ಜಗತ್ತು ಇವೆರಡೂ ಪರಮಾತ್ಮನ ವಿಶೇಷಣಗಳು. ಪರಮಾತ್ಮನನ್ನು ಬಿಟ್ಟು ಉಳಿದೆಲ್ಲವೂ ನಶ್ವರ ಮತ್ತು ಕ್ಷಣಿಕ. ಶ್ರೀರಾಮಾನುಜರು ಕರ್ಮಯೋಗ ಮತ್ತು ಜ್ಞಾನ ಮಾರ್ಗಗಳೆರಡು ಭಕ್ತಿಗೆ ಅಗತ್ಯವೆಂದು ತಿಳಿಸಿದರಲ್ಲದೆ ಭಕ್ತಿ ಸಾಧನೆಯ ಪ್ರಕಾರಗಳನ್ನು ಪ್ರತಿಪಾದಿಸಿದ್ದಾರೆ. ರಾಮಾನುಜರು ವಿಷ್ಣು ಪೂಜೆ ಮಾಡುವ ಹದಿನಾರು ವಿಧಾನಗಳನ್ನು ಪ್ರಚಾರ ಮಾಡಿದರು. ಇವರ ಸಿದ್ಧಾಂತದ ಪ್ರಕಾರ ಮೋಕ್ಷವೆಂದರೆ ಇಹಲೋಕದ ಬಿಡುಗಡೆ ಮಾತ್ರವಲ್ಲದೆ ಭಗವಂತನ ಸಾನ್ನಿಧ್ಯದಲ್ಲಿ ಅತ್ಯುನ್ನತ ಆನಂದ ಪಡೆಯುವುದು. ಇವರು ಲಕ್ಷ್ಮೀ ನಾರಾಯಣ ಪೂಜೆಯನ್ನು ಪ್ರಚಾರಗೊಳಿಸಿದರು.

ಶ್ರೀರಾಮನುಜಾಚಾರ್ಯರು ಕಾರ್ಯಕಾರಣ ನಿಮಿತ್ತವಾಗಿ ಕರ್ನಾಟಕದ ದಕ್ಷಿಣದಲ್ಲಿ ಆಳುತ್ತಿದ್ದ ಹೊಯ್ಸಳ ರಾಜ್ಯಕ್ಕೆ ಬಂದರು. ಇವರ ಆಗಮನಕ್ಕೆ ಬೇರೆ ಬೇರೆ ಕಾರಣಗಳನ್ನು ಕೊಡಲಾಗಿದೆ. ತಮಿಳು ನಾಡಿನಲ್ಲಿ ಶ್ರೀರಾಮಾನುಜರ ಪ್ರಭಾವದಿಂದ ಶ್ರೀ ವೈಷ್ಣವ ಪಂಥವು ವಿಶೇಷವಾಗಿ ಪ್ರಚಾರವಾಯಿತೆಂದೂ ಇದನ್ನು ಸಹಿಸದ ಶೈವನಾದ ಚೋಳರಾಜನೊಬ್ಬನ ಉಪದ್ರವದಿಂದ ಪಾರಾಗಲು ಇಲ್ಲಿಗೆ ಬಂದರೆಂದು ತಿಳಿದು ಬರುತ್ತದೆ. ಇದಕ್ಕಿಂತ ಮಿಗಿಲಾಗಿ ಇವರು ಈ ಪ್ರದೇಶದಲ್ಲಿದ್ದ ಶ್ರೀ ವೈಷ್ಣವ ಕ್ಷೇತ್ರಗಳನ್ನು ಸಂದರ್ಶಿಸುವುದರ ಮುಖಾಂತರ ತಮ್ಮ ಸಿದ್ಧಾಂತವನ್ನು ಪ್ರಚಾರ ಮಾಡುವುದಕ್ಕಾಗಿ ಬಂದರೆಂದು ವಿಧಿತವಾಗುತ್ತದೆ. ಕ್ರಿ.ಶ. 1095 ರ ವೇಳೆಗೆ ಶ್ರೀ ರಾಮಾನುಜರು ನೀಲಗಿರಿಯ ಮುಖಾಂತರ ಕನ್ನಡ ನಾಡನ್ನು ಪ್ರವೇಶಿಸಿ ರಾಮನಾಥಪುರ, ಮಿರ್ಲೆ, ಸಾಲಿಗ್ರಾಮ ಮೊದಲಾದ ಸ್ಥಳಗಳಲ್ಲಿ ಸ್ವಲ್ಪ ಕಾಲ ತಂಗಿದ್ದು ಅನಂತರ ತೊಂಡನೂರಿಗೆ ಬಂದು ಹೊಯ್ಸಳ ವಿಷ್ಣುವರ್ಧನನ್ನು ತಮ್ಮ ಪಂಥಕ್ಕೆ ಸೆರಿಸಿಕೊಂಡರು. ತೊಂಡನೂರಿನಲ್ಲಿ ಶ್ರೀರಾಮಾನುಜರ ಆಗಮನಾರ್ಥವಾಗಿ ನರಸಿಂಹ ದೇವಾಲಯವನ್ನು ಕಟ್ಟಲಾಯಿತು. ಅಲ್ಲಿಂದ ಅವರು ಮೇಲ್ಕೋಟೆಗೆ ಬಂದರು. ಅಲ್ಲಿ ಶ್ರೀರಾಮಾನುಜರಿಂದ ನಾರಾಯಣ ವಿಗ್ರಹವು ಸ್ಥಾಪಿಸಲ್ಪಟ್ಟು ವಿಶಿಷ್ಟಾದ್ವೈತ ಪಂಥವು ವಿಶೇಷ ಪ್ರಚಾರಕ್ಕೆ ಬಂದಿತು. ಅಲ್ಲಿನ ಯತಿರಾಜ ಮಠವು ಸಹ ಅವರಿಂದಲೇ ಸ್ಥಾಪಿತವಾಯಿತು.

ಶ್ರೀರಾಮಾನುಜಾಚಾರ್ಯರು ಸುಮಾರು ಇಪ್ಪತ್ತು ವರ್ಷಗಳ ಕಾಲ ಕನ್ನಡ ನಾಡಿನಲ್ಲಿ ನೆಲಸಿದ್ದರು. ಆ ಕಾಲದಲ್ಲಿ ಮೇಲ್ಕೋಟೆ, ತೊಂಡನೂರು, ಹರದನಹಳ್ಳಿ, ಸಾಲಿಗ್ರಾಮ, ಬೇಲೂರು, ತಲಕಾಡು ಮೊದಲಾದ ಅನೇಕ ಸ್ಥಳಗಳಲ್ಲಿ ವಿಷ್ಣು ದೇವಾಲಯಗಳು ನಿರ್ಮಾಣವಾದವು. ಅವರಿಂದ ಸಹಸ್ರಾರು ಮಂದಿ ದೀಕ್ಷೆ ಪಡೆದರು. ಶ್ರೀ ರಾಮಾನುಜರು ವೈದಿಕ ಧರ್ಮದಲ್ಲಿ ಜಟಿಲವಾಗಿದ್ದ ಜಾತಿ ಪದ್ಧತಿಗೆ ಪ್ರಾಮುಖ್ಯತೆ ನೀಡಲಿಲ್ಲ. ಉದಾರ ಧಾರ್ಮಿಕ ನೀತಿಯನ್ನು ಪ್ರತಿಪಾದಿಸಿದರು. ಅಸ್ಪೃಶ್ಯರನ್ನು ತಿರುಕ್ಕುಲತ್ತವರ್ ಎಂಬುದಾಗಿ ಕರೆದರು. ಶ್ರೀ ರಾಮಾನುಜರ ಕಾಲದಲ್ಲಿ ನಿರ್ಮಿತವಾದ ವೈಷ್ಣವ ದೇವಾಲಯಗಳಿಗೆ ಅಸ್ಪೃಶ್ಯರಿಗೆ ಪ್ರವೇಶಾವಕಾಶವನ್ನು ದೊರಕಿಸಿ ಕೊಡಲಾಯಿತು. ಬೇಲೂರು, ಮೇಲ್ಕೋಟೆ ಮೊದಲಾದ ಪ್ರಸಿದ್ಧ ದೇವಾಲಯಗಳಲ್ಲಿ ನಿಯಮಿತ ಕಾಲದಲ್ಲಿ ಅಂದಿನಿಂದಲೂ ಅವರಿಗೆ ಪ್ರವೇಶಕ್ಕೆ ಅವಕಾಶವಿದೆ. ಶ್ರೀ ರಾಮಾನುಜರು ತಮ್ಮ 120 ನೇ ವಯಸ್ಸಿನಲ್ಲಿ ಕ್ರಿ.ಶ. 1137 ರಲ್ಲಿ ಸ್ವರ್ಗಸ್ಥರಾದರು.

ಶ್ರೀ ರಾಮಾನುಜರಿಂದ ಕರ್ನಾಟಕದಲ್ಲಿ ಶ್ರೀ ವೈಷ್ಣವ ಅಥವಾ ವಿಶಿಷ್ಟ ದ್ವೈತ ಸಿದ್ಧಾಂತವು ಹೆಚ್ಚು ಪ್ರಚಾರಕ್ಕೆ ಬಂದಿತು. ಇಲ್ಲಿ ಅನೇಕ ಶ್ರೀ ವೈಷ್ಣವ ಮತ್ತು ವಿಶಿಷ್ಟಾದ್ವೈತ ತತ್ವಗಳ ಕೇಂದ್ರಗಳು ಸ್ಥಾಪನೆಯಾದವು. ಅಲ್ಲದೆ ತೊಂಡನೂರು, ಸಾಲಿಗ್ರಾಮ, ರಾಮನಾಥಪುರ, ನುಗ್ಗೆಹಳ್ಳಿ, ಬೇಲೂರು ಮೊದಲಾದ ಸ್ಥಳಗಳು ಶ್ರೀ ವೈಷ್ಣವರ ಪವಿತ್ರ ಕ್ಷೇತ್ರಗಳಾಗಿವೆ. ಕರ್ನಾಟಕದಿಂದ ಶ್ರೀ ವೈಷ್ಣವ ಪಂಥಾವಲಂಬಿಗಳು ತಮಿಳು ನಾಡಿನ ಯಾತ್ರಾಸ್ಥಳಗಳಿಗೂ ಮತ್ತು ತಮಿಳು ನಾಡಿನಿಂದ ಭಕ್ತಾದಿಗಳು ಕರ್ನಾಟಕದ ಶ್ರೀ ವೈಷ್ಣವ ಕ್ಷೇತ್ರಗಳಿಗೂ ಯಾತ್ರಾರ್ಥಿಗಳಾಗಿ ಹೋಗಿ ಬರುವುದು ಆಚರಣೆಗೆ ಬಂದಿತು. ಇದರಿಂದ ಸಾಮಾಜಿಕವಾಗಿ ನಿಕಟ ಸಂಬಂಧ ಬೆಳೆಯಲು ಸಹಕಾರಿಯಾಯಿತು. ಕ್ರಮೇಣ ಕರ್ನಾಟಕದಲ್ಲಿ ಆಳಿದ ವಿಜಯನಗರ ಚಕ್ರವರ್ತಿಗಳು ಮತ್ತು ಮೈಸೂರಿನ ಒಡೆಯರೂ ಶ್ರೀ ವೈಷ್ಣವ ಪಂಥಕ್ಕೆ ವಿಶೇಷ ಪ್ರೋತ್ಸಾಹ ನೀಡಿದರು.

## 29.8 ಮಧ್ವಾಚಾರ್ಯರು (1238-1317)

ವೈಷ್ಣವ ಪಂಥದ ಪರಂಪರೆಯಲ್ಲಿ ವೈದಿಕ ದರ್ಶನವನ್ನು ಅವಲಂಬಿಸಿರುವ ದ್ವೈತ ಸಂಪ್ರದಾಯವು ಕ್ರಿ.ಶ. ಹದಿಮೂರನೇ ಶತಮಾನದಲ್ಲಿ ಕರ್ನಾಟಕದಲ್ಲಿ ಶ್ರೀ ಮಧ್ವಾಚಾರ್ಯರಿಂದ ಸ್ಥಾಪಿತವಾಯಿತು. ಇವರು ಕನ್ನಡ ನಾಡಿಗೆ ಸೇರಿದವರು. ಉಡುಪಿ ಕ್ಷೇತ್ರಕ್ಕೆ ಸಮೀಪದಲ್ಲಿರುವ ಪಾಜಕ ಎಂಬ ಗ್ರಾಮದ ಬಳಿಯಲ್ಲಿ ಜನಿಸಿದರು. ವೇದವತಿ ಮತ್ತು ಮಧ್ಯಗೇಹಭಟ್ಟ ಎಂಬುವರು ಇವರ ಮಾತಾಪಿತೃಗಳು. ಇವರ ಬಾಲ್ಯದ ಹೆಸರು ವಾಸುದೇವ. ದೃಢಶರೀರವನ್ನು, ಭಗವದ್ಭಕ್ತಿಯನ್ನು ಹೊಂದಿದ್ದ ಬಾಲಕ ವಾಸುದೇವ ತೋಂಟದತಿಲ್ಲಾಯರೆಂಬ ಗುರುಗಳಲ್ಲಿ ವೇದಾಧ್ಯಯನ ಮಾಡಿ, ತಂದೆ ತಾಯಿಗಳ ಅಪ್ಪಣೆ ಪಡೆದು ಅನಂತೇಶ್ವರದ ಅದ್ವೈತ ಪಂಥಿಗಳಾದ ಅಚ್ಯುತ ಪ್ರೇಕ್ಷ ಎಂಬುವರಿಂದ ಸನ್ಯಾಸವನ್ನು ಸ್ವೀಕರಿಸಿ ಪೂರ್ಣಪ್ರಜ್ಞರೆಂಬ ಹೆಸರನ್ನು ಗಳಿಸಿದರು. ಸಕಲ ಶಾಸ್ತ್ರಾಧ್ಯಯನವನ್ನು ಮಾಡಿ ಆನಂದತೀರ್ಥ ಎಂಬ ಹೆಸರಿನಿಂದ ಪ್ರಸಿದ್ಧರಾದರು. ಆ ವೇಳೆಗೆ ಅಲ್ಲಿ ಪ್ರಚಾರದಲ್ಲಿದ್ದ ಅದ್ವೈತ ಸಿದ್ಧಾಂತವನ್ನು ಖಂಡಿಸಿ ವೇದೋಪನಿಷತ್ತುಗಳಲ್ಲಿ ಪ್ರತಿಪಾದಿತವಾಗಿರುವುದು ದ್ವೈತವೆಂದು ಪ್ರಚಾರ ಮಾಡತೊಡಗಿದರು. ಅನಂತರ ಇವರಿಗೆ ಮಧ್ವಾಚಾರ್ಯರೆಂದೂ ಇವರ ಪಂಥಕ್ಕೆ ದ್ವೈತ ಪಂಥವೆಂದೂ ಸಾಮಾನ್ಯವಾಗಿ ಪ್ರಸಿದ್ಧಿಗೆ ಬಂದಿತು. ಉಡುಪಿಯಲ್ಲಿ ಸ್ವಲ್ಪ ಕಾಲವಿದ್ದು ಗೀತಾ ಭಾಷ್ಯವನ್ನು ರಚಿಸಿ ತಮ್ಮ ಗುರುಗಳಾದ ಅಚ್ಯುತ ಪ್ರೇಕ್ಷಕರಿಗೆ ಒಪ್ಪಿಸಿದರು.

ಇವರು ಉತ್ತರ ಭಾರತದ ಪ್ರವಾಸವನ್ನು ಕೈಗೊಂಡು ಗೋವ, ಮಹಾರಾಷ್ಟ್ರ, ಕಾಶಿ ಮೊದಲಾದ ಸ್ಥಳಗಳಿಗೆ ಭೇಟಿ ನೀಡಿ ದ್ವೈತ ಪಂಥವನ್ನು ಪ್ರಚಾರ ಮಾಡಿದರು. ಅಲ್ಲಿಂದ ಹರಿದ್ವಾರಕ್ಕೆ ಹೋಗಿ ಅಲ್ಲಿನ ಅನಂತ ಮಠದಲ್ಲಿ ಹಲವು ಕಾಲ ನೆಲಸಿ ಅಲ್ಲಿ ಬ್ರಹ್ಮಸೂತ್ರಕ್ಕೆ ಭಾಷ್ಯ ಬರೆದು ದ್ವೈತ ಪಂಥವನ್ನು ಪ್ರಚಾರ ಮಾಡಿದರು. ಈ ಪಂಥವನ್ನು ಪ್ರಚಾರ ಮಾಡಲು ಭಗವಾನ್ ಬಾದರಾಯಣರು ಪ್ರೋತ್ಸಾಹಿಸಿದರೆಂದು ನಂಬಲಾಗಿದೆ. ಹರಿದ್ವಾರ ಮತ್ತು ಇತರ ಕಡೆಗಳಲ್ಲಿ ವೈಷ್ಣವ ಪಂಥವನ್ನು ಪ್ರಚಾರ ಮಾಡಿ ಅನೇಕ ಸ್ಥಳಗಳನ್ನು ಸಂದರ್ಶಿಸಿ ಅದ್ವೈತ ಪಂಥಿಗಳನ್ನು ವಾದದಲ್ಲಿ ಸೋಲಿಸಿ ಉಡುಪಿಗೆ ಹಿಂದಿರುಗಿದರು. ಬರುವಾಗ ದ್ವಾರಕದಿಂದ ಶ್ರೀ ಕೃಷ್ಣನ ಪ್ರತಿಮೆಯನ್ನು ತಂದು ಉಡುಪಿಯಲ್ಲಿ ಪ್ರತಿಷ್ಠಾಪಿಸಿದರು. ಅನಂತರ ಅವರ ಗುರುಗಳಾದ ಅಚ್ಯುತ ಪ್ರೇಕ್ಷಕರಾದಿಯಾಗಿ ಅನೇಕ ಮಂದಿ ವಿದ್ವಾಂಸರೂ ಇತರರೂ ದ್ವೈತ ಸಿದ್ಧಾಂತವನ್ನು ಒಪ್ಪಿ ವೈಷ್ಣವ ಪಂಥವನ್ನು ಸ್ವೀಕರಿಸಿದರು. ಮಧ್ವಾಚಾರ್ಯರು ಅನೇಕ ಗ್ರಂಥಗಳನ್ನು ರಚಿಸಿದರು. ಅವರಿಂದ ರಚಿತವಾದ ಹತ್ತು ಸಿದ್ಧಾಂತದ ಪ್ರಕರಣಗಳಲ್ಲಿ ವಿಷ್ಣು ತತ್ವ ನಿರ್ಣಯ ಎಂಬುವುದು ಅತಿ ಪ್ರಮುಖವಾದುದು. ಅವರಿಂದ ವಿರಚಿತವಾದ ದ್ವಾದಶ ಸ್ತೋತ್ರವು ಭಕ್ತಿ ಪ್ರಧಾನವಾದುದು. ಕಾಲಕ್ರಮದಲ್ಲಿ ವೈಷ್ಣವ ಪಂಥದ ಪಂಡಿತರೂ, ಆಚಾರ್ಯರೂ ಮೇಲ್ಕಂಡ ಗ್ರಂಥಗಳಿಗೆ ಟಿಪ್ಪಣಿಗಳನ್ನು ರಚಿಸಿ ಈ ಪಂಥದ ಸಿದ್ಧಾಂತಗಳನ್ನು ಪ್ರತಿಪಾದಿಸುವುದು ಮತ್ತು ವಿಷ್ಣುವಿನಲ್ಲಿ ಅಚಲ ಭಕ್ತಿಯಿಟ್ಟು ಅವನ ಸರ್ವೋತ್ತಮತೆಯನ್ನು ನಂಬುವುದರ ಮೂಲಕ ಮೋಕ್ಷವನ್ನು ಗಳಿಸಬಹುದೆಂದೂ ಈ ಪಂಥೀಯರ ನಂಬಿಕೆಯಾಗಿದೆ.

### 29.8.1 ದ್ವೈತ ಸಿದ್ಧಾಂತ

ಮಧ್ವಾಚಾರ್ಯರು ಪ್ರತಿಪಾದಿಸಿದ ದ್ವೈತ ಸಿದ್ಧಾಂತದ ತಿರುಳನ್ನು ಈ ರೀತಿಯಾಗಿ ಸಂಗ್ರಹಿಸಲಾಗಿದೆ. ಶ್ರೀ ಹರಿಯೇ ವೇದೋಪನಿಷತ್ತುಗಳಲ್ಲಿ ಪ್ರತಿಪಾದಿಸಿದ ಪರಬ್ರಹ್ಮನು. ಈತನು ಸರ್ವೋತ್ತಮ. ಸಕಲ ಜ್ಞಾನ ಪರಿಪೂರ್ಣನು; ದೋಷ ರಹಿತನು; ಸಚ್ಚಿದಾನಂದ ಸ್ವರೂಪನು; ಪುರುಷೋತ್ತಮನು; ಸರ್ವಾಂತರ್ಯಾಮಿಯು; ಆದ್ಯಂತರಹಿತನು; ಸೃಷ್ಟಿ, ಸ್ಥಿತಿ ಲಯಗಳ ಕರ್ತೃ. ಹರಿಯು ಮಹಾಲಕ್ಷ್ಮೀಯಿಂದೊಡಗೂಡಿರುವವನು. ಸೃಷ್ಟಿಕಾಯದಲ್ಲಿ ಲಕ್ಷ್ಮಿಯು ವಿಷ್ಣುವಿಗೆ ನೆರವಾಗುವಳು. ಮಧ್ವ ಮತದ ಪ್ರಕಾರ ಜಗತ್ತಿನಲ್ಲಿ ಭೇದ ಪ್ರಕಾರಗಳು ಅಸಂಖ್ಯವಾಗಿವೆ. ಅವುಗಳನ್ನು ಐದು ಗುಂಪುಗಳಾಗಿ ಪರಿಗಣಿಸಲಾಗಿದೆ. ಅವುಗಳೆಂದರೆ ಜೀವೇಶ್ವರ ಭೇದ, ಪರಸ್ಪರ ಜೀವಭೇದ, ಜಡೇಶ್ವರ ಭೇದ, ಜಡ ಜೀವ ಭೇದ, ಪರಸ್ಪರ ಜಡಭೇದ. ಇವುಗಳನ್ನು ಪಂಚವೇದಗಳೆಂದು ಕರೆಯಲಾಗಿದೆ. ಜೀವಾತ್ಮರು ಪರಬ್ರಹ್ಮನಿಂದ ಭಿನ್ನವೆನ್ನುವ ಮಧ್ವಾಚಾರ್ಯರ ತತ್ವವು ಶಂಕರರ ಅದ್ವೈತಕ್ಕಿಂತ ತೀವ್ರತರವಾದ ಭೇದವನ್ನು ಹೊಂದಿದೆ. ಶಂಕರರು ಜಗತ್ತನ್ನು ಮಾಯೆಯೆಂದು ಕರೆದರೆ ಮಧ್ವರು ಜಗತ್ತನ್ನು ಸತ್ಯ ಎಂದು ಕರೆದು ಅದ್ವೈತ ಸಿದ್ಧಾಂತವನ್ನು ವಿಶ್ಲೇಷಿಸಿ ಖಂಡಿಸಿದ್ದಾರೆ.

ಮಧ್ವಾ ಚಾರ್ಯರು ದೇಶ ಪರ್ಯಟನೆಯ ಮಾಡಿ, ಧರ್ಮ ಪ್ರಚಾರ ಮಾಡುತ್ತ ಗ್ರಂಥವನ್ನು ರಚಿಸುತ್ತ ದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡಿದರು. ಉಡುಪಿಯಲ್ಲಿ ಮಧ್ವಾಚಾರ್ಯರು ತಮ್ಮ ಎಂಟು ಮಂದಿ ಶಿಷ್ಯರನ್ನು ಪರ್ಯಾಯ ವ್ಯವಸ್ಥೆಯಿಂದ ಕ್ರಮಬದ್ಧವಾಗಿ ಪೂಜೆಗೆ ನಿಯೋಜಿಸಿದರು. ಈ ಶಿಷ್ಯರಿಂದ ಪ್ರಚಾರಕ್ಕೆ ಬಂದ ಅಷ್ಟ ಮಠಗಳು ಇಂದಿಗೂ ಉಡುಪಿಯಲ್ಲಿವೆ. ಇವರು ಸಂಸ್ಕೃತದಲ್ಲೇ ಗ್ರಂಥ ರಚನೆ ಮಾಡಿದರೂ ಸಹ ಅವರ ಅನುಯಾಯಿಗಳು ಕನ್ನಡ ಭಾಷೆ ಮತ್ತು ಸಂಸ್ಕೃತ ಪ್ರಸಾರಕ್ಕೆ ವಿಶೇಷ ಸಹಕಾರಿಯಾದರು. ಕನ್ನಡ ನಾಡಿನವರಾದ ಮಧ್ವಾಚಾರ್ಯರು ಧಾರ್ಮಿಕ ಪಂಥಗಳಲ್ಲಿ ಒಂದು ವಿಶಿಷ್ಟವಾದ ಪಂಥವನ್ನು ಪ್ರತಿಪಾದಿಸಿ ಭಕ್ತಿ ಮಾರ್ಗಕ್ಕೆ ಚಾಲನೆ ನೀಡಿದರು. ಮಧ್ವರ ಜೀವಿತ ಕಾಲದಲ್ಲಿ, ಅನಂತರ ಅವರ ಶಿಷ್ಯರಿಂದ ಕನ್ನಡ ನಾಡು ಮತ್ತು ಇತರ ಕಡೆಗಳಲ್ಲೂ ಅನೇಕ ಮಠಗಳನ್ನು ಸ್ಥಾಪನೆ ಮಾಡಿ ವೈಷ್ಣವ ಪಂಥವನ್ನು ಪ್ರಚಾರ ಮಾಡಿದರು. ಮಧ್ವಾಚಾರ್ಯರ ನಿಕಟ ಅನುಯಾಯಿಗಳಾದ ಜಯತೀರ್ಥರು, ವ್ಯಾಸರಾಯರು, ವಿಜಯೇಂದ್ರರು, ವಾದಿರಾಜರು, ರಾಘವೇಂದ್ರ ಸ್ವಾಮಿಗಳು ಆಧ್ಯಾತ್ಮಿಕತೆ ಮತ್ತು ಭಕ್ತಿ ಪಂಥಕ್ಕೆ ವಿಶೇಷ ಕಾಣಿಕೆ ಸಲ್ಲಿಸಿದ್ದಾರೆ.

## 29.9 ಸಾರಾಂಶ

ಈ ಮೇಲಿನ ಅಧ್ಯಯನದಿಂದ ವೈಷ್ಣವ ಧರ್ಮದ ಐತಿಹಾಸಿಕ ಬೆಳವಣಿಗೆಯನ್ನು ಅರ್ಥ ಮಾಡಿಕೊಡಲು ಯತ್ನಿಸಲಾಗಿದೆ. ಈ ಧರ್ಮದ ಆರಂಭದ ಕಲ್ಪನೆ, ವಿಷ್ಣುವಿನ ಸರ್ವೋತ್ತಮ ತತ್ವದ ಪ್ರತಿಪಾದನೆ. ಆತನ ವಿವಿಧ ಅವತಾರಗಳು ಮತ್ತು ಅವುಗಳ ಪ್ರಭಾವವನ್ನು ಗಮನಿಸಿದ್ದೀರಿ. ಇದರ ಐತಿಹಾಸಿಕ ಬೆಳವಣಿಗೆಗೆ ದಕ್ಷಿಣ ಭಾರತದ ರಾಜಮನೆತನಗಳು ಅಪಾರ ಕೊಡುಗೆ ನೀಡಿವೆ.

ಈ ಧರ್ಮವನ್ನು ಪುನರ್ ವ್ಯಾಖ್ಯಾನ ಮಾಡಿ ಪ್ರಸಿದ್ಧಿಗೊಳಿಸಿದ ಆಚಾರ್ಯರಲ್ಲಿ ರಾಮಾನುಜ ಚಾರ್ಯರು ಮತ್ತು ಮಧ್ವಾಚಾರ್ಯರು ಪ್ರಮುಖರು. ಇವರ ವ್ಯಾಪಕ ಪ್ರಚಾರದಿಂದ ಈ ಧರ್ಮ ದಕ್ಷಿಣ ಭಾರತದ ಸಮಾಜದಲ್ಲಿ ಭದ್ರವಾಗಿ ಬೇರು ಬಿಡಲು ಸಹಕಾರಿಯಾಯಿತು.

ಸಾಹಿತ್ಯ, ತತ್ವಶಾಸ್ತ್ರ ಹಾಗೂ ವಾಸ್ತುಶಿಲ್ಪ ಕಟ್ಟಡಗಳ ಬೆಳವಣಿಗೆ ಮೇಲೆ ಈ ಪಂಥ ಅಪಾರ ಪ್ರಭಾವ ಬೀರಿರುವುದನ್ನು ಕಾಣಬಹುದು. ಈ ಪಂಥಗಳ ಪ್ರಭಾವದಿಂದ ದಕ್ಷಿಣ ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಸುಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳು ಉದಯಿಸಿ ದಕ್ಷಿಣ ಭಾರತೀಯರ ಸಂಪರ್ಕ ಸೇತುವೆಯಾಗಿ ರೂಪುಗೊಂಡಿರುವುದನ್ನು ಗಮನಿಸಬಹುದಾಗಿದೆ.

## 29.10 ಸ್ವಪರೀಕ್ಷೆ ಪ್ರಶ್ನೆಗಳು

1. ದಕ್ಷಿಣ ಭಾರತದಲ್ಲಿ ವೈಷ್ಣವ ಧರ್ಮದ ಉಗಮ ಮತ್ತು ವಿಕಾಸವನ್ನು ಗುರುತಿಸಿ.
2. ವೈಷ್ಣವ ಧರ್ಮದ ಬೆಳವಣಿಗೆಯಲ್ಲಿ ದಕ್ಷಿಣ ಭಾರತದ ರಾಜಮನೆತನಗಳ ಪೋಷಣೆ ಮತ್ತು ಪ್ರೋತ್ಸಾಹವನ್ನು ಪರಿಶೀಲಿಸಿರಿ.
3. ಶ್ರೀ ವೈಷ್ಣವ ಪಂಥದ ಬೆಳವಣಿಗೆಗೆ ರಾಮಾನುಜಾಚಾರ್ಯರ ಕೊಡುಗೆಗಳನ್ನು ವಿವರಿಸಿರಿ.
4. ಸಾಹಿತ್ಯ, ತತ್ವಶಾಸ್ತ್ರ ವಾಸ್ತುಶಿಲ್ಪ ಬೆಳವಣಿಗೆಗೆ ವೈಷ್ಣವ ಧರ್ಮದ ಕೊಡುಗೆಗಳನ್ನು ವಿವರಿಸಿರಿ.

## 29.11 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1. Nagaraja Rao .P. : Introduction to Vedantha
2. Hiriyanna .M. : Essentials of Indian Philosophy
3. Radha Krishna .S. : The History of Philosophy : Eastern and Western
4. Srinivasachary ,P.N. : Ramanuja (Vishistadwaitha) History of Philosophy- Eastern and Western
5. R.G. Bhadarkar : Vaishnva and Shaivism and other minor Religious system
6. P.B. Desai : A History of Karnataka
7. K.A.N. Sastry : A History of South India
8. R.R. Diwakar (Ed) : Karnataka through the Ages
9. R.R. Diwakar (Ed) : ಕರ್ನಾಟಕ ಪರಂಪರೆ (ಸಂ. 1)
10. ಬಿ. ಷೇಕ್ ಅಲಿ ಮತ್ತು ಬಿ. ಸುರೇಂದ್ರ ರಾವ್ : ಕರ್ನಾಟಕ ಚರಿತ್ರೆ, ಸಂಪುಟ -2
11 Romila Thapar (Ed) : Recent Perspcetives of Early Indian History

# ಘಟಕ - 30

## ಶೈವ ಧರ್ಮ ಮತ್ತು ವೀರಶೈವ ಪಂಥ

### ವಿಷಯ ಕ್ರಮ


30.0 ಘಟಕದ ಉದ್ದೇಶ

30.1 ಪೀಠಿಕೆ

30.2 ಶಾತವಾಹನ, ಕದಂಬರ ಕಾಲದಲ್ಲಿ ಶೈವ ಪಂಥದ ಆಚರಣೆಗಳು

30.3 ಬಾದಾಮಿ ಚಾಳುಕ್ಯರ ಕಾಲದಲ್ಲಿ ಶೈವಧರ್ಮ ಮತ್ತು ಲಕುಲಶೈವ ಅಥವಾ ಕಾಳಮುಖ ಪಂಥದ ಬೆಳವಣಿಗೆ

30.3.1 ರಾಷ್ಟ್ರಕೂಟ, ಹೊಯ್ಸಳರ ಕಾಲದಲ್ಲಿ ಕಾಳಮುಖ; ಕಲ್ಯಾಣಿ ಚಾಳುಕ್ಯರು ಮತ್ತು ವಿಜಯನಗರ ಆರಂಭದ ಅರಸರ ಕಾಲದಲ್ಲಿ ಕಾಳಮುಖ ಪಂಥದ ಕ್ರಿಯಾಶಕ್ತಿ ಪ್ರಭೇದದ ಬೆಳವಣಿಗೆ

30.4 ಶಂಕರಾಚಾರ್ಯರ ಸ್ಮಾರ್ಥ ಸಂಪ್ರದಾಯದ ಬೆಳವಣಿಗೆ ಮತ್ತು ಅದ್ವೈತ ಸಿದ್ಧಾಂತ ಪ್ರತಿಪಾದನೆ

30.5 ವೀರ ಶೈವ ಪಂಥದ ಬೆಳವಣಿಗೆ

30.6 ಬಸವಣ್ಣನವರ ಜೀವನ ಮತ್ತು ಸಾಧನೆ

30.7 ಕಲ್ಯಾಣದಲ್ಲಿ ಕ್ರಾಂತಿ ಮತ್ತು ಬಸವಣ್ಣನವರ ಸಾಮಾಜಿಕ ಸುಧಾರಣೆಗಳು

30.8 ಸಾರಾಂಶ

30.9 ಸ್ವಪರೀಕ್ಷೆ ಪ್ರಶ್ನೆಗಳು

30.10 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು

## 30.0 ಘಟಕದ ಉದ್ದೇಶ

* ಶೈವ ಧರ್ಮ ಮತ್ತು ವೀರಶೈವ ಪಂಥಗಳ ಐತಿಹಾಸಿಕ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳುವುದು ಈ ಪಾಠದ ಉದ್ದೇಶವಾಗಿದೆ. ಈ ಘಟಕವನ್ನು ಪರಿಚಯಿಸಿಕೊಂಡ ಮೇಲೆ ಈ ಕೆಳಗಿನ ವಿಷಯಗಳನ್ನು ಗ್ರಹಿಸಲು ಸಮರ್ಥರಾಗುವಿರಿ.
* ಶೈವ ಪಂಥವು ಭಾರತದ ನಾಗರೀಕತೆಯಷ್ಟೇ ಪುರಾತನವಾದುದು. ಶಿವ ಕಲ್ಪನೆ, ಲಿಂಗ ಪೂಜಾಚರಣೆಗಳು ನಮ್ಮ ಭಾರತದ ಸಂಸ್ಕೃತಿಯಲ್ಲಿ ಆಳವಾಗಿ ಬೇರು ಬಿಟ್ಟು ಆ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿ ಮುಂದುವರಿದಿದೆ.
* ದಕ್ಷಿಣ ಭಾರತದಲ್ಲಿ ಶಾತವಾಹನ, ಕದಂಬ, ಬಾದಾಮಿ ಚಾಳುಕ್ಯರ ಕಾಲದಲ್ಲಿ ಅದರ ಆಚರಣೆಯನ್ನು ಗುರುತಿಸಬಹುದು.
* ಆರಂಭದ ಕಾಲದಲ್ಲಿ ಲಕುಲಶೈವ ಅಥವಾ ಕಾಲಮುಖ ಶ್ವೇತ ಪಂಥವು ಜನಪ್ರಿಯವಾಗಿದ್ದಿತು.
* ರಾಷ್ಟ್ರಕೂಟ, ಹೊಯ್ಸಳರ ಕಾಲದಲ್ಲಿ ಲಕುಲೀಶ ಶೈವ ಪಂಥದ ಕೆಲವು ಪ್ರಮುಖ ಕೇಂದ್ರಗಳನ್ನು ಕಾಣಬಹುದು.
* ಕಲ್ಯಾಣಿ ಚಾಳುಕ್ಯ ಹಾಗೂ ವಿಜಯನಗರ ಆರಂಭದ ಅರಸರ ಕಾಲದಲ್ಲಿ 'ಶಕ್ತಿ' 'ಕ್ರಿಯಾಶಕ್ತಿ' ವಂಶಶಕ್ತಿ ಮುಂತಾದ ಪ್ರಭೇದಗಳನ್ನು ಕಾಣಬಹುದು.
* ಶಂಕರಾಚಾರ್ಯರು ಶೈವ ಧರ್ಮದ ಸ್ಮಾರ್ಥ ಸಂಪ್ರದಾಯವನ್ನು ಜನಪ್ರಿಯಗೊಳಿಸಿದರು ಮತ್ತು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು.
* ಶೈವ ಧರ್ಮದ ಇತಿಹಾಸದಲ್ಲಿ ವೀರಶೈವ ಪಂಥದ ಸ್ಥಾಪನೆ ಮತ್ತು ಬೆಳವಣಿಗೆ ಅತ್ಯಂತ ಮುಖ್ಯವಾದ ಘಟನೆಯಾಗಿದ್ದಿತು.
* ಬಸವಣ್ಣನವರು ಸಾಮಾಜಿಕ ಕ್ರಾಂತಿಯ ಹರಿಕಾರರು ಅವರ ಸಾಮಾಜಿಕ ಸುಧಾರಣೆಗಳ ಮಹತ್ವ ಸಮಾಜದ ಮೇಲೆ ಅವುಗಳ ಪ್ರಭಾವ.

## 30.1 ಪೀಠಿಕೆ

ಈ ಘಟಕವು ಎರಡು ವಿಷಯಗಳನ್ನೊಳಗೊಂಡಿದೆ. ಪುರಾತನ ರೂಪದ ಶೈವ ಧರ್ಮದ ಅಸ್ತಿತ್ವ ಮತ್ತು ಬೆಳವಣಿಗೆಯನ್ನು ತಿಳಿಸುತ್ತದೆ ಹಾಗೂ ವೀರಶೈವ ಪಂಥ ಸ್ಥಾಪನೆ ಹಾಗೂ ಆ ಪಂಥದ ಕ್ರಾಂತಿಕಾರಕ ಸಾಮಾಜಿಕ ಸುಧಾರಣೆಗಳನ್ನು ನಿಮಗೆ ಪರಿಚಯಿಸಿಕೊಡುತ್ತದೆ. ಶಿವನ ಕಲ್ಪನೆ ಮತ್ತು ಅದರ ಆಚರಣೆಗಳು ಭಾರತದ ನಾಗರೀಕತೆಯಷ್ಟೇ ಪುರಾತನವಾಗಿದ್ದು ನಮ್ಮ ಸಂಸ್ಕೃತಿಯ ವಿಕಾಸದಲ್ಲಿ ಹಾಸುಹೊಕ್ಕಾಗಿ ಬೆಳೆದಿರುವುದನ್ನು ಇತಿಹಾಸದಲ್ಲಿ ಕಾಣಬಹುದು.

ದಕ್ಷಿಣ ಭಾರತದಲ್ಲಿ ಐತಿಹಾಸಿಕವಾಗಿ ಶಾತವಾಹನ, ಕದಂಬ ಅರಸರು, ಗಂಗರು, ಬಾದಾಮಿ ಚಾಳುಕ್ಯರು, ರಾಷ್ಟ್ರಕೂಟರು, ಪಲ್ಲವರು, ಚೋಳರು, ಹೊಯ್ಸಳರು ಮತ್ತು ಸೇವುಣರು, ಆರಂಭದ ವಿಜಯನಗರದ ಅರಸರು ಈ ಪಂಥದ ಪೋಷಕರಾಗಿ ಅದರ ಸರ್ವತೋಮುಖ ಬೆಳವಣಿಗೆಗೆ ಕಾರಣರಾಗಿರುವುದನ್ನು ಕಾಣಬಹುದು. ಈ ಶೈವ ಸಂಪ್ರದಾಯ ಆಳುವ ಅರಸರಿಂದ ಹಿಡಿದು ಶ್ರೀಸಾಮಾನ್ಯರವರೆಗೂ ಮನ್ನಣೆ ಪಡೆದಿದ್ದ ಬಹು ಜನಪ್ರಿಯ ಪಂಥವಾಗಿ ರೂಪುಗೊಂಡಿದೆ.

ಲಕುಲಶೈವ ಅಥವಾ ಕಾಳಮುಖ ಪಂಥವು ಶೈವ ಧರ್ಮದ ಪುರಾತನ ಸಂಪ್ರದಾಯವಾಗಿದ್ದು ಅನೇಕ ರಾಜಮನೆತನಗಳ ಆಶ್ರಯ, ಬೆಂಬಲವನ್ನು ಪಡೆದಿದ್ದಿತು.

ಶಂಕರಾಚಾರ್ಯರು ನಿರ್ದಿಷ್ಟವಾದ ಶೈವ ಪಂಥವನ್ನು ಪ್ರಚಾರ ಮಾಡದಿದ್ದರೂ ಅವರ ಅನುಯಾಯಿಗಳಾದ ಸ್ಮಾರ್ಥರು ಶೈವ ಸಂಪ್ರದಾಯಗಳನ್ನು ಆಚರಿಸುವುದು ರೂಢಿಯಲ್ಲಿದೆ. ಶಂಕರರು ಅದ್ವೈತ ಸಿದ್ಧಾಂತ ಪ್ರತಿಪಾದಕರಾಗಿದ್ದರು.

ಶೈವ ಧರ್ಮದ ಇತಿಹಾಸದಲ್ಲಿ ವೀರಶೈವ ಪಂಥದ ಸ್ಥಾಪನೆ ಮತ್ತು ಬಸವಣ್ಣನವರ ಸಾಮಾಜಿಕ ಸುಧಾರಣೆಗಳು ಕ್ರಾಂತಿಕಾರಕವಾಗಿದ್ದು ಸಮಾಜದ ಮೇಲೆ ಆಳವಾದ ಪರಿಣಾಮವನ್ನು ಬೀರಿವೆ.

## 30.2 ಶಾತವಾಹನ, ಕದಂಬರ ಕಾಲದಲ್ಲಿ ಶೈವ ಪಂಥದ ಆಚರಣೆಗಳು

ಶೈವ ಪಂಥವು ಭಾರತದ ಇತಿಹಾಸ ಮತ್ತು ನಾಗರೀಕತೆಯಷ್ಟೇ ಪುರಾತನವಾದುದು. ಸಿಂಧೂ ಕಣಿವೆಯ ನಾಗರೀಕತೆಯ ಜನರು ಮಾತೃದೇವತೆಯ ಜೊತೆ ಜೊತೆಗೆ ಶಿವ, ಪಶುಪತಿ, ವೃಷಭ ಹಾಗೂ ಲಿಂಗ ಪೂಜೆ ಆಚರಣೆಗಳು ಅಸ್ತಿತ್ವದಲ್ಲಿದ್ದವೆಂದು ತಿಳಿದು ಬರುತ್ತದೆ. ದಕ್ಷಿಣ ಭಾರತದಲ್ಲಿ ಶಾತವಾಹನರು ಮತ್ತು ಸಂಗಮ ಯುಗದ ಕಾಲದಲ್ಲಿಯೇ ಶಿವ-ವಿಷ್ಣುವಿನ ಆಚರಣೆ ಸಮಾಜದಲ್ಲಿ ರೂಢಿಯಲ್ಲಿದ್ದಿತು. ಕರ್ನಾಟಕದಲ್ಲಿ ಕದಂಬರ ಕಾಲದ ತಾಳಗುಂದ ಶಾಸನವು ಪ್ರಣವೇಶ್ವರ ಎಂಬ ಶಿವ ದೇವಾಲಯದ ಬಗೆಗೆ ಉಲ್ಲೇಖ ನೀಡುತ್ತದೆ. ಶಾತವಾಹನರ ಅರಸ ಶಾತಕರ್ಣಿ ಮತ್ತು ಬನವಾಸಿಯ ಚುಟು ಅರಸರು ಪ್ರಣವೇಶ್ವರ ದೇವಾಲಯಕ್ಕೆ ಬಂದು ಪೂಜೆ ಕೈಗೊಳ್ಳುತ್ತಿದ್ದರೆಂದು ತಿಳಿದು ಬರುತ್ತದೆ. ಈ ಶಿವ ದೇವಾಲಯವು ಕ್ರಿ.ಶ. 3 ನೇ ಶತಮಾನದಷ್ಟು ಪುರಾತನವಾದುದೆಂದು ತಿಳಿಯಬಹುದಾಗಿದೆ. 4ನೇ ಶತಮಾನದಿಂದ ಆಳ್ವಿಕೆ ಆರಂಭಿಸಿದ ಬನವಾಸಿ ಕದಂಬರು ತಮ್ಮ ಮನೆತನದ ದೇವತೆಯಾದ ಮಧುಕೇಶ್ವರನ ಆರಾಧಕರಾಗಿದ್ದರು. ಶಿವನ ಮಗನಾದ ಮುಕ್ಕಣ್ಣ ಅಥವಾ ತ್ರಿನೇತ್ರನು ಅವರ ಮನೆತನದ ಮೂಲಪುರುಷನೆಂದು ನಂಬಿದ್ದರು. ಕ್ರಿ.ಶ. 450 ತಾಲಗುಂದ ಶಾಸನವು 'ನಮಃಶಿವಾಯ' ಸ್ತುತಿಯಿಂದ ಆರಂಭಗೊಳ್ಳುತ್ತದೆ. ಶಿವ ಗೋಕನವು ರಾಮಾಯಣ ಕಾಲದಂದು ಶಿವ ಕ್ಷೇತ್ರವಾಗಿ ಪ್ರಸಿದ್ಧಿಯನ್ನು ಪಡೆದ್ದಿತು. ಕದಂಬರು ಅದರ ಆರಾಧಕರಾಗಿದ್ದರು.

## 30.3 ಬಾದಾಮಿ ಚಾಳುಕ್ಯರ ಕಾಲದಲ್ಲಿ ಶೈವಧರ್ಮ ಮತ್ತು ಲಕುಲಶೈವ ಅಥವಾ ಕಾಳಮುಖ ಪಂಥದ ಬೆಳವಣಿಗೆ

ಬಾದಾಮಿ ಚಾಳುಕ್ಯರು ಆರಂಭದಲ್ಲಿ ವೈಷ್ಣವರಾಗಿದ್ದರು. ಶೈವ ಪಂಥಕ್ಕೆ ಉದಾರ ಪೋಷಣೆ ನೀಡುವಲ್ಲಿ ಹಿಂದೆ ಬೀಳಲಿಲ್ಲ. ನಟರಾಜ, ಅರ್ಧನಾರೀಶ್ವರ, ಮಹಿಷ ಮರ್ಧಿನಿ ಮತ್ತು ಹರಿಹರ ವಿಗ್ರಹಗಳನ್ನು ಬಾದಾಮಿಯ ಗುಹೆಯಲ್ಲಿ ಇವರ ಕಾಲದಲ್ಲಿ ಕಾಣಬಹುದು. ಕದಂಬರು ಹಾಗೂ ಬಾದಾಮಿ ಚಾಳುಕ್ಯರು ಕಾರ್ತಿಕೆಯ ಆರಾಧಕರಾಗಿದ್ದರು. ಮಹಾಕೂಟ ಶಾಸನವು ಮಹಾಕೂಟೇಶ್ವರ ದೇವಾಲಯಕ್ಕೆ ಮಂಗಳೇಶ್ವರನು ನೀಡಿದ ದಾನದ ಬಗ್ಗೆ ಮಾಹಿತಿಯನ್ನು ಒದಗಿಸುತ್ತದೆ. ಕ್ರಿ.ಶ. 640 ರ ಸಮಯದಲ್ಲಿ ಹೂಯನ್‌ತ್ಸಾಂಗ ಚಾಳುಕ್ಯ ಸಮ್ರಾಜ್ಯಕ್ಕೆ ಭೇಟಿ ನೀಡಿ ಶಿವಾರಾಧಕರು ಹಣೆಯಲ್ಲಿ ವಿಭೂತಿ ಧರಿಸುತ್ತಿದ್ದ ಬಗ್ಗೆ ಮಾಹಿತಿಯನ್ನು ನೀಡುತ್ತಾನೆ. ಹಣೆ ಮತ್ತು ಶರೀರದ ಮೇಲೂ ವಿಭೂತಿ ಹಚ್ಚಿಕೊಂಡ ಅಪಾರ ಸಂಖ್ಯೆಯ ಶೈವ ಭಕ್ತರನ್ನು ಕಾಣಬಹುದೆಂದು ತಿಳಿಸುತ್ತಾನೆ. ಒಂದನೇ ವಿಕ್ರಮನ ಕಾಲದಿಂದ ಚಾಳುಕ್ಯ ಅರಸರು ಶೈವ ಮತಾವಲಂಬಿಗಳಾದರೆಂದೂ, ನವಸೇರಿ ಶಾಸನವು ಒಂದನೇ ವಿಕ್ರಮನನ್ನು ಮಹೇಶ್ವರನೆಂದು ಸಂಬೋಧಿಸುತ್ತದೆ. ಈ ದೊರೆಯನ್ನು ಶೈವ ಮತಕ್ಕೆ ಪರಿವರ್ತಿಸುವುದರಲ್ಲಿ ಲಕುಲಶೈವ ಅಥವಾ ಪಾಶುಪಥ ಪಂಥದವರ ಪಾತ್ರ ಬಹುಮುಖ್ಯವಾದುದೆಂದು ಆರ್.ಎಸ್. ಪಂಚಮುಖಿಯವರು ಅಭಿಪ್ರಾಯ ಪಡುತ್ತಾರೆ. ಇವನ ಮಗ ವಿನಯಾದಿತ್ಯನ ರಾಣಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರ ಪ್ರತಿಮೆಯನ್ನು ಬಾದಾಮಿಯಲ್ಲಿ ಸ್ಥಾಪಿಸಿದಳು ಮತ್ತು ಪಟ್ಟದ ಕಲ್ಲಿನ ಬಳಿ ವಿಜಯೇಶ್ವರ ಎಂಬ ಶೈವ ದೇವಾಲಯವನ್ನು ಅವಳ ಮಗ ವಿಜಯಾದಿತ್ಯನು ನಿರ್ಮಿಸಿದನು. ಪಲ್ಲವರ ಆಕ್ರಮಣ ಕಾಲದಲ್ಲಿ ಅನೇಕ ವೈಷ್ಣವ ದೇವಾಲಯಗಳನ್ನು ಶಿವದೇವಾಲಯಗಳಾಗಿ ಪರಿವರ್ತಿಸಲಾಯಿತೆಂದು ತಿಳಿದು ಬರುತ್ತದೆ. ಎರಡನೇ ವಿಕ್ರಮಾದಿತ್ಯನ ರಾಣಿ ಪಟ್ಟದ ಕಲ್ಲಿನ ಬಳಿ ಲೋಕೆಶ್ವರ ಮತ್ತು ತ್ರಿಲೋಕೇಶ್ವರ ದೇವಾಲಯಗಳನ್ನು ನಿರ್ಮಿಸಿದಳು.

### *30.3.1 ರಾಷ್ಟ್ರಕೂಟ, ಹೊಯ್ಸಳರ ಕಾಲದಲ್ಲಿ ಕಾಳಮುಖ; ಕಲ್ಯಾಣ ಚಾಳುಕ್ಯರು ಮತ್ತು ವಿಜಯನಗರದ ಆರಂಭದ ಅರಸರ ಕಾಲದಲ್ಲಿ ಕ್ರಿಯಾಶಕ್ತಿ ಪ್ರಭೇದದ ಬೆಳವಣಿಗೆ*

ಆರಂಭದ ಶತಮಾನಗಳಲ್ಲಿ ಬಹು ಜನಪ್ರಿಯ ಶೈವ ಪಂಥವೆಂದರೆ ಲಕುಲಶೈವ ಅಥವಾ ಕಾಲಮುಖ ಶೈವ ಪಂಥ. ಐತಿಹಾಸಿಕವಾಗಿ ಶೈವ ಪಂಥದ ಲಕುಲೀಶನಿಂದ ಸ್ಥಾಪಿತವಾದುದೆಂದು ನಂಬಲಾಗಿದೆ. ಲಕುಲೇಶ ಹಾಗೂ ಪಾಶುಪಥ ಶಾಖೆಗಳನ್ನು ಒಂದೇ ಹೆಸರಿನಿಂದ ನಿರ್ದೇಶಿಸಲಾಗಿದೆ. ಶೈವ ಪಂಥದ ಪ್ರಭೇದಗಳಾದ ಪಾಶುಪತ, ಕಾಳಮುಖ ಲಕುಲ ಮತ್ತು ಮಹೇಶ್ವರ ಶಾಖೆಗಳು ಸುಮಾರಾಗಿ ಪ್ರಮಾಣದಿಂದ ಒಂದೇ ಎಂಬುದಾಗಿ ಬರೆಯಲಾಗಿದೆ. ಲಕುಲೀಶನಿಗೆ ಅರ್ಪಿತವಾದ ದೇವಾಲಯವೊಂದನ್ನು ಬಾದಾಮಿ ಚಾಳುಕ್ಯರ ಕಾಲದಲ್ಲಿ ಮಹಾಕೂಟದಲ್ಲಿ ಕಟ್ಟಿಸಲಾಗಿದೆ. ಲಕುಲೀಶ ಪಾಶುಪಥ ಪಂಥದ ಆಚಾರ್ಯರನ್ನು ರಾಷ್ಟ್ರಕೂಟರ ಮತ್ತು ಹೊಯ್ಸಳರ ಶಾಸನಗಳಲ್ಲಿ ವೇದ ವೇದಾಂಗ, ಮೀಮಾಂಸ ಮೊದಲಾದ ಶಾಸ್ತ್ರಗಳು ಮತ್ತು ಕಾವ್ಯ ನಾಟಕಗಳಲ್ಲಿ ಪರಿಣಿತರೆಂದು ವರ್ಣಿಸಲಾಗಿದೆ. ರಾಷ್ಟ್ರಕೂಟ ಕೃಷ್ಣನಿಂದ ಎಲ್ಲೋರದಲ್ಲಿ ನಿರ್ಮಿತವಾದ ಎಣೆಯಿಲ್ಲದ ಅಂದಿನ ಕನ್ನರೇಶ್ವರ (ಕೈಲಾಸನಾಥ) ದೇವಾಲಯವು ಈ ಪಂಥದ್ದೆಂದು ಗೊತ್ತಾಗಿದೆ. ಹೊಯ್ಸಳರ ಕಾಲದಲ್ಲಿ ಬಳ್ಳಿಗಾಮೆ, ಗದಗ, ಅರಸಿಕೆರೆ ಮೊದಲಾದ ಸ್ಥಳಗಳು ಲಾಕುಲೀಶ ಶೈವ ಪಂಥದ ಕೇಂದ್ರಗಳಾಗಿದ್ದವು. ಹೊಯ್ಸಳರ ಕಾಲದಲ್ಲಿ ಹೊಯ್ಸಳೇಶ್ವರ, ಸೋಮನಾಥದೇವಾಲಯಗಳು ಸುಪ್ರಸಿದ್ಧ ಶಿವದೇವಾಲಯಗಳಾಗಿವೆ. ಒಂದನೇ ಬಲ್ಲಾಳನು ನಿಷ್ಠಾವಂತ ಶೈವ ಭಕ್ತನಾಗಿದ್ದನು. ಹಾಗೆಯೇ ಕಾಳಚೂರಿ ಬಿಜ್ಜಳ ಮತ್ತು ಅವನ ಮಕ್ಕಳು ಶೈವ ಸಂಪ್ರದಾಯದ ಅನುಯಾಯಿಗಳಾಗಿದ್ದರು. ಕಾಳಮುಖ ಪಂಥದೊಳ ಗೆ 'ಶಕ್ತಿ' 'ಕ್ರಿಯಾಶಕ್ತಿ' 'ವಂಶ ಶಕ್ತಿ' ಮುಂತಾದ ಪ್ರಭೇದಗಳನ್ನು ಕಾಣಬಹುದು. ಕಲ್ಯಾಣಿ ಚಾಳುಕ್ಯರ ಕೆಲವು ಅರಸರು ಮತ್ತು ವಿಜಯ ನಗರದ ಸಂಗಮ ವಂಶಸ್ಥರು ಈ ಪಂಥ

ಸೇರಿದವರಾಗಿದ್ದು ಹರಿಹರ ಮತ್ತು ಬುಕ್ಕರು ಕ್ರಿಯಾಶಕ್ತಿ ಎಂಬುವರನ್ನು ತಮ್ಮ ಗುರುಗಳನ್ನಾಗಿ ಸ್ವೀಕರಿಸಿದ್ದರು. ಈ ಕ್ರಿಯಾಶಕ್ತಿ ಆಚಾರ್ಯರು ಗೋಲಕಿ ಮಠದ ಮುಖ್ಯಸ್ಥರೆಂದು ಕೆಲವು ವಿದ್ವಾಂಸರು ಭಾವಿಸಿದ್ದಾರೆ. ಇಟ್ಟಗಿಯ ಮಹಾದೇವ ಲಕ್ಕುಂಡಿಯ ಕಾಶಿವಿಶ್ವೇಶ್ವರ, ಗದಗಿನ ಸೋಮೇಶ್ವರ ಮತ್ತು ತ್ರಿಕೂಟೇಶ್ವರ ದೇವಸ್ಥಾನಗಳು ಕಲ್ಯಾಣಿ ಚಾಳುಕ್ಯರ ಕಾಲದ ಸುಪ್ರಸಿದ್ಧ ಶಿವದೇವಾಲಯಗಳಾಗಿದ್ದವು.

ಉತ್ತರ ಭಾರತದಲ್ಲಿ ಗುಪ್ತ ಯುಗದಲ್ಲಿ ವೈದಿಕ ಮತವು ಚೇತನಗೊಂಡು ಸಂಸ್ಕೃತ ಭಾಷೆ ಹಾಗೂ ಪುರೋಹಿತ ವರ್ಗದ ಪ್ರಾಬಲ್ಯವು ವೃದ್ಧಿಗೊಂಡು ಬೌದ್ಧ ಧರ್ಮವು ಕ್ರಮೇಣ ಕ್ಷೀಣಿಸಿದುದು ಸರಿಯಷ್ಟೇ. ದಕ್ಷಿಣ ಭಾರತದಲ್ಲೂ ಅದೇ ಕಾಲದಲ್ಲೂ ಹಿಂದೂ ಧರ್ಮವು ಶೈವ ಸಂತರಾದ ಆಡ್ಯಾರರು ಮತ್ತು ವೈಷ್ಣವ ಸಂತರಾದ ಆಳ್ವಾರರಿಂದ ಹೆಚ್ಚು ಹೆಚ್ಚು ಪ್ರವರ್ಧಮಾನವಾಗತೊಡಗಿತು. ಭಕ್ತಿ ಪ್ರಧಾನವಾದ ಈ ಸಂತರ ಪ್ರಚಾರದಿಂದ ತಮಿಳುನಾಡಿನಲ್ಲಿ ಬೌದ್ಧ ಜೈನ ಧರ್ಮಗಳು ತಮ್ಮ ಪ್ರಭಾವವನ್ನು ಕಳೆದುಕೊಳ್ಳತೊಡಗಿದವು. ಶೈವ ವೈಷ್ಣವ ಪಂಥಗಳು ವಿಶಿಷ್ಟ ರೂಪ ತಳೆದು ಪ್ರಚಾರಕ್ಕೆ ಬಂದವು. ಈ ಪಂಥಗಳ ಮೂಲ ಉತ್ತರ ಭಾರತದಲ್ಲಿ ರಚಿತವಾದ ವೇದಗಳು, ಉಪನಿಷತ್ತುಗಳು ಮತ್ತು ಭಗವದ್ಗೀತೆಗಳು. ಈ ಗ್ರಂಥಗಳಿಗೆ ಭಾಷ್ಯಗಳನ್ನು ರಚಿಸಿ ವಿಶೇಷ ಪ್ರಚಾರಕ್ಕೆ ತಂದ ಕಾರ್ಯವು ದಕ್ಷಿಣ ಭಾರತದ ದಾರ್ಶನಿಕರಾದ ಶಂಕರ, ರಾಮಾನುಜ ಮತ್ತು ಮಧ್ವಾಚಾರ್ಯ ಇವರಿಗೆ ಸಲ್ಲುತ್ತದೆ. ಇವರನ್ನು ಧರ್ಮ ಸುಧಾರಕರೆಂದೇ ಪರಿಗಣಿಸಲಾಗಿದೆ.

## 30.4 ಶಂಕರಾಚಾರ್ಯರ ಸ್ಮಾರ್ಥ ಸಂಪ್ರದಾಯದ ಬೆಳವಣಿಗೆ ಮತ್ತು ಅದ್ವೈತ ಸಿದ್ಧಾಂತದ ಪ್ರತಿಪಾದನೆ

ಶಂಕರಾಚಾರ್ಯರು ವೈದಿಕ ಧರ್ಮದ ಪುನಃಶ್ಚೇತನದ ಹರಿಕಾರರಾಗಿದ್ದು ಶೈವ ಧರ್ಮದ ಸ್ಮಾರ್ಥ ಸಂಪ್ರದಾಯವನ್ನು ಜನಪ್ರಿಯಗೊಳಿಸಿದರು. ಇವರು ನಿರ್ದಿಷ್ಟವಾಗಿ ಶೈವ ಪಂಥವನ್ನು ಪ್ರಚಾರ ಮಾಡದಿದ್ದರೂ ಅವರ ಅನುಯಾಯಿಗಳು ಶೈವ ಸಂಪ್ರದಾಯವನ್ನು ಆಚರಿಸುತ್ತಾರೆ. ಶಂಕರರು ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಇವರ ಕಾಲ ಮತ್ತು ಜೀವನದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಹೆಚ್ಚು ಮಂದಿ ವಿದ್ವಾಂಸರ ಅಭಿಪ್ರಾಯದ ಪ್ರಕಾರ ಶಂಕರಾಚಾರ್ಯರು ಕ್ರಿ.ಶ. 788 ರಿಂದ 820 ರವರೆಗೆ ಕೇವಲ 32 ವರ್ಷಗಳ ಕಾಲ ಜೀವಿಸಿದ್ದರು. ಶತಮಾನಗಳ ಅಂತರದಲ್ಲಿ ವಿಭಿನ್ನ ಕರ್ತೃಗಳಿಂದ ರಚಿತವಾದ 'ಶಂಕರ ವಿಜಯ' ಎಂಬ ಗ್ರಂಥಗಳು ಇವರ ಜೀವನ ಮತ್ತು ಸಾಧನೆಗಳನ್ನು ವರ್ಣಿಸುತ್ತವೆ.

ಇವರ ಜೀವನ ವೃತ್ತಾಂತವನ್ನು ತಿಳಿಸುವ ಗ್ರಂಥಗಳ ಪ್ರಕಾರ ಕೇರಳದ ಕಾಲಡಿ ಎಂಬ ಗ್ರಾಮದಲ್ಲಿ ವಾಸವಾಗಿದ್ದ ನಂಬೂದರಿ ಬ್ರಾಹ್ಮಣ ಕುಟುಂಬದ ಆರ್ಯಾಂಬ ಮತ್ತು ಶಿವಗುರು ಎಂಬುವರು ಶಂಕರರ ಮಾತಾಪಿತೃಗಳು. ಎಳೆ ವಯಸ್ಸಿನಲ್ಲೇ ಇವರಿಗೆ ಉಪನಯನ ಕರ್ಮವನ್ನು ನೆರವೇರಿಸಲಾಯಿತು. ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡರು. ಚಿಕ್ಕ ವಯಸ್ಸಿನಲ್ಲೇ ವೇದ ವೇದಾಂಗ ಪಾರಂಗತನಾದನೆಂದು ಪ್ರತೀತಿ. ಒಂದು ಸಾರಿ ಬಾಲಕ ಶಂಕರನು ನದಿಯಲ್ಲಿ ಸ್ನಾನ ಮಾಡುತ್ತಿರುವಾಗ ಮೊಸಳೆಯ ಹಿಡಿತಕ್ಕೆ ತುತ್ತಾದನೆಂದೂ, ಆದರೆ ಅದುವರೆಗೂ ತನ್ನ ಮಗನು ಸನ್ಯಾಸಿಯಾಗಲು ಒಪ್ಪದಿದ್ದ ಅವನ ತಾಯಿಯು ಒಪ್ಪಿಗೆ ನೀಡಿದ ಪರಿಣಾಮವಾಗಿ ಬಾಲಕನು ಮೊಸಳೆಯ ಹಿಡಿತದಿಂದ ಪಾರಾಗಿ ಅನಂತರ ಸನ್ಯಾಸ ಸ್ವೀಕರಿಸಿದನೆಂದೂ ಪ್ರತೀತಿಯಿದೆ. ಶಂಕರನು ತನ್ನ ಕೇವಲ ಎಂಟನೆಯ ವಯಸ್ಸಿನಲ್ಲಿ ಸನ್ಯಾಸವನ್ನು ಸ್ವೀಕರಿಸಿ ಗೋವಿಂದ ಭಗವತ್ಪಾದರ ಶಿಷ್ಯನಾದನು. ಗೋವಿಂದ ಭಗವತ್ಪಾದರು ತಮ್ಮ ಗುರುಗಳಾದ ಗೌಡಪಾದರಿಂದ ಪಡೆದ ಸಾಂಪ್ರದಾಯಿಕ ಅದ್ವೈತ ಪರವಾದ ಬ್ರಹ್ಮ ಸೂತ್ರ ವ್ಯಾಖ್ಯಾನವನ್ನು ತಮ್ಮ ಶಿಷ್ಯನಿಗೆ ಬೋಧಿಸಿದರು. ಅದ್ವೈತವಾದವನ್ನು ಅಂಗೀಕರಿಸಿದ ಶಂಕರರು ಬದರಿಕಾಶ್ರಮ, ವಾರಣಾಸಿ ಮೊದಲಾದ ಧಾರ್ಮಿಕ ಕೇಂದ್ರಗಳನ್ನು ಸಂದರ್ಶಿಸಿ ಬ್ರಹ್ಮಸೂತ್ರ, ಭಗವದ್ಗೀತೆ ಮತ್ತು ಉಪನಿಷತ್ತುಗಳಿಗೆ ಭಾಷ್ಯ ರಚಿಸಿದರು.

ಶಂಕರಾಚಾರ್ಯರ ಸಿದ್ಧಾಂತಕ್ಕೆ ಅದ್ವೈತ ಸಿದ್ಧಾಂತವೆಂದು ಹೆಸರಾಗಿದೆ. ಇದರ ಪ್ರಕಾರ ಬ್ರಹ್ಮವೊಂದೇ ಸತ್ಯ, ಜಗತ್ತು ಮಾಯ ಅಥವಾ ಮಿಥ್ಯ ರೂಪವಾದುದು. ಅಜ್ಞಾನವನ್ನು ಶಂಕರರು ಮಾಯೆ ಎಂದು ಕರೆದಿದ್ದಾರೆ. ಮಾಯೆಯಿಂದ ವಿಮೋಚನೆ ಹೊಂದಿ ಜ್ಞಾನೋದಯವಾದ ಕೂಡಲೇ ನಿತ್ಯ, ನಿರ್ವಿಕಲ್ಪ ನಿರಂಜನ, ಪರಬ್ರಹ್ಮನೊಬ್ಬನೇ ಸತ್ಯ ಎಂಬ ಅರಿವು ಉಂಟಾಗುತ್ತದೆ. ಜೀವಾತ್ಮ ಪರಮಾತ್ಮ ಇವು ಅಜ್ಞಾನದಿಂದ ಭಿನ್ನವಾಗಿ ಕಂಡರೂ ಅವುಗಳಲ್ಲಿ ಸಾದೃಶ್ಯವಿದೆ. ಜೀವಾತ್ಮನು ಸಚ್ಚಿದಾನಂದ ಸ್ಥಿತಿಯನ್ನು ಪಡೆದಾಗ ಈ ಭೇದವು ತೊಲಗುತ್ತದೆ.

ಶಂಕರಾಚಾರ್ಯರು ದೇಶ ಪರ್ಯಟನೆ ಕೈಗೊಂಡು ಭಾರತದ ನಾನಾ ಧಾರ್ಮಿಕ ಹಾಗೂ ಜ್ಞಾನ ಕೇಂದ್ರಗಳನ್ನು ಸಂದರ್ಶಿಸಿದರು. ತಮ್ಮ ಸಂಚಾರ ಕಾಲದಲ್ಲಿ ಕುಮಾರಿಲ ಭಟ್ಟರನ್ನು ಪ್ರಯಾಗದಲ್ಲಿ ಸಂಧಿಸಿ ತಮ್ಮ ಭಾಷ್ಯವನ್ನು ಪ್ರತಿಪಾದಿಸಿದರು. ಪರ್ಯಟನ ಕಾಲದಲ್ಲಿ ಪ್ರಚಂಡ ವಾಗ್ಮಿಯಾಗಿದ್ದ ಶಂಕರರು ಬೌದ್ಧ ಸನ್ಯಾಸಿಗಳನ್ನು ವಾದ ವಿವಾದಗಳಲ್ಲಿ ಸೋಲಿಸಿ ಆ ಧರ್ಮದ ಅವನತಿಗೂ ವೈದಿಕ ಧರ್ಮದ ಪ್ರಗತಿಗೂ ಕಾರಣರಾದರು. ಶಂಕರರು ಬೌದ್ಧ ಧರ್ಮದ ಹಲವಾರು ತತ್ವಗಳನ್ನು ತಮ್ಮ ಸಿದ್ಧಾಂತಕ್ಕೆ

ಮಾರ್ಪಡಿಸಿಕೊಂಡರು. ಅವರ ಮಾಯವಾದವನ್ನು ಬೌದ್ಧ ಧರ್ಮದಿಂದ ಗ್ರಹಿಸಿದರು. ಅದರಿಂದ ಶಂಕರರ ವಿಮರ್ಶಕರು ಅವರನ್ನು ಪ್ರಚ್ಛನ್ನ ಬುದ್ಧ ಎಂದು ಕರೆದಿದ್ದಾರೆ. ಶಂಕರರು ಕರ್ನಾಟಕದ ಶೃಂಗೇರಿಗೆ ಬಂದು ಅಲ್ಲಿನ ಪ್ರಸಿದ್ಧ ವಿದ್ವಾಂಸರಾದ ಮಂಡನ ಮಿಶ್ರರನ್ನು ಅವರ ಪತ್ನಿ ಭಾರತೀದೇವಿಯನ್ನು ವಾದದಲ್ಲಿ ಸೋಲಿಸಿದರೆಂದು ಪ್ರತೀತಿಯಾಗಿದೆ. ಈ ವಾದದಲ್ಲಿ ಪರಾಜಿತನಾದ ಮಂಡನ ಮಿಶ್ರನು ಸುರೇಶ್ವರಚಾರ್ಯ ಎಂಬ ಹೆಸರಿನಿಂದ ಶೃಂಗೇರಿಯ ಮಠದ ಪ್ರಪ್ರಥಮ ಗುರುವಾದರೆಂಬುದು ತಿಳಿದು ಬರುತ್ತದೆ. ಶಂಕರಚಾರ್ಯರ ಅದ್ವೈತ ಪಂಥವನ್ನು ಪ್ರಚಾರ ಮಾಡಲು ಉತ್ತರದಲ್ಲಿ ಬದರಿ, ದಕ್ಷಿಣದಲ್ಲಿ ಶೃಂಗೇರಿ, ಪೂರ್ವದಲ್ಲಿ ಪುರಿ ಮತ್ತು ಪಶ್ಚಿಮದಲ್ಲಿ ದ್ವಾರಕಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದರು.

ಸನ್ಯಾಸ ಮತ್ತು ಜ್ಞಾನಕ್ಕೆ ವಿಶೇಷ ಪ್ರಾಧಾನ್ಯತೆಯನ್ನು ನೀಡಿದ ಶಂಕರರು ಯಾವುದೇ ಒಂದು ನಿರ್ದಿಷ್ಟ ಮೂರ್ತಿಯನ್ನು ಪೂಜಿಸಬೇಕೆಂದು ಪ್ರತಿಪಾದಿಸಲಿಲ್ಲ. ಅವರು ಸಾಮಾನ್ಯವಾಗಿ ಷಣ್ಮೂರ್ತಿಗಳಾದ ಶಿವ, ವಿಷ್ಣು, ಸೂರ್ಯ, ಗಣೇಶ, ಕುಮಾರ ಮತ್ತು ಶಕ್ತಿ ಪೂಜೆಯನ್ನು ಪ್ರತಿಪಾದಿಸಿದರು. ಆದುದರಿಂದ ಇವರನ್ನು ಷನ್ಮಠ ಸ್ಥಾಪನಾಚಾರ್ಯ ಎಂದು ಕರೆಯಲಾಗಿದೆ. ಹಿಂದೂ ಧರ್ಮದ ಅನೇಕ ಆಡಂಬರದ ಆಚರಣೆಗಳನ್ನು ಖಂಡಿಸಿ ಅದನ್ನು ಸುಧಾರಿಸಲು ಶಂಕರರು ಪ್ರಯತ್ನ ಪಟ್ಟರು. ಬೌದ್ಧ ಧರ್ಮವು ಕ್ಷೀಣಿಸಿ ವೈದಿಕ ಮತವು ವೃದ್ಧಿಯಾಗಲು ಶಂಕರರು ಕಾರಣರಾದರು. ಶಂಕರಾ ಚಾರ್ಯರ ಪ್ರಯತ್ನದಿಂದ ವೇದಾಂತ ಅಧ್ಯಯನದಲ್ಲಿ ಆಸಕ್ತಿ ಬೆಳೆಯಿತು. ಅದ್ವೈತ ಸಿದ್ಧಾಂತವು ಶೇಷವಾಗಿ ಪ್ರಚಾರಕ್ಕೆ ಬಂದಿತು.

## 30.5 ವೀರಶೈವ ಪಂಥದ ಬೆಳವಣಿಗೆ

ಕರ್ನಾಟಕ ಶೈವ ಧರ್ಮದ ಇತಿಹಾಸದಲ್ಲಿ ಬಹು ಜನಪ್ರಿಯವಾದ ಪಂಥವೆಂದರೆ ವೀರಶೈವ ಅಥವಾ ಲಿಂಗಾಯಿತ ಮತ. ಇದು. ಕ್ರಿ.ಶ. 12 ನೇ ಶತಮಾನದಲ್ಲಿ ಪ್ರಸಿದ್ಧಿಗೆ ಬಂದಿತು. ವೀರಶೈವ ಧರ್ಮದ ಕೆಲವು ಗ್ರಂಥಗಳು ಮತ್ತು ನಂಬಿಕೆಗಳ ಪ್ರಕಾರ ಇದು ಐದು ಮಂದಿ ಆಚಾರ್ಯರಿಂದ ಪ್ರಚಾರಕ್ಕೆ ಬಂದಿತೆಂದು ತಿಳಿದು ಬರುತ್ತದೆ. ಇವರನ್ನು ಪಂಚಾಚಾರ್ಯರೆಂದು ಕರೆಯಲಾಗಿದೆ. ರೇವಣಸಿದ್ಧ, ಮರುಳಸಿದ್ಧ, ಪಂಡಿತಾರಾಧ್ಯ, ವಾಕೋರಾಮ ಮತ್ತು ವಿಶ್ವರಾಧ್ಯ- ಇವರೇ ಪಂಚಾಚಾರ್ಯರು. ಇವರು ಪರಮೇಶ್ವರನ ಪಂಚಮುಖಗಳಿಂದ ಉದ್ಭವಿಸಿದ ಪಂಚ ಗಣಾಧೀಶ್ವರರೆಂದು ಹಾಗೂ ಇವರು ರಂಭಾಪುರಿ (ಬಾಳೆ ಹೊನ್ನೂರು) ಉಜ್ಜಯಿನಿ, ಶ್ರೀಶೈಲ, ಕೇದಾರ ಮತ್ತು ಕಾಶಿ ಕ್ಷೇತ್ರಗಳಲ್ಲಿ ಮಠಗಳನ್ನು ಸ್ಥಾಪಿಸಿದರೆಂದು ಪ್ರತೀತಿ ಇದೆ. ಇವರಿಗೆ ಸಂಬಂಧಪಟ್ಟ ವರ್ಣನೆಗಳು ಪೌರಾಣಿಕ ಕಥೆಗಳಂತೆ ಕಂಡರೂ ಇವರು ಐತಿಹಾಸಿಕ ವ್ಯಕ್ತಿಗಳೆಂದು ಊಹಿಸಲು ಅವಕಾಶವಿದೆ. ಪಂಚಾಚಾರ್ಯರು ಕ್ರಿ.ಶ. 11 ಮತ್ತು 12 ನೇ ಶತಮಾನದ ಪೂವಾರ್ಧದಲ್ಲಿ ಇದ್ದಿರಬಹುದೆಂದು ತೋರುತ್ತದೆ.

ವೀರಶೈವ ಪಂಥವು ವಿಶೇಷವಾಗಿ ಪ್ರಚಾರಕ್ಕೆ ಬಂದುದು ಕರ್ನಾಟಕದ ಮಹಾ ಪುರುಷರಲ್ಲೊಬ್ಬರಾದ ಬಸವಣ್ಣ ನವರಿಂದ ಇವರು ಧಾರ್ಮಿಕ ಮತ್ತು ಸಾಮಾಜಿಕ ರಂಗಗಳಿಗೆ ಅಪಾರ ಕೊಡುಗೆ ನೀಡಿದ್ದಾರೆ. ಬಸವಣ್ಣನವರು ಕ್ರಿ.ಶ. 12 ನೇ ಶತಮಾನದ ಮಧ್ಯಭಾಗದಲ್ಲಿ ಆಚರಣೆಗೆ ತಂದ ಕ್ರಾಂತಿಯು ಧಾರ್ಮಿಕ, ಸಾಮಾಜಿಕ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಅಗಾಧ ಬದಲಾವಣೆಗೆ ಕಾರಣವಾಗಿದೆ.

## 30.6 ಬಸವಣ್ಣನವರ ಜೀವನ ಮತ್ತು ಸಾಧನೆ

ಬಸವಣ್ಣನವರ ಜೀವನ ಮತ್ತು ಸಾಧನೆಗಳನ್ನು ವರ್ಣಿಸುವ ಅನೇಕ ಗ್ರಂಥಗಳು ಲಭ್ಯವಾಗಿವೆ. ಅನಂತರದ ಗ್ರಂಥಗಳಲ್ಲಿ ಹಲ ಕೆಲವು ಪೌರಾಣಿಕ ವರ್ಣನೆಗಳೂ ಕಾಣಸಿಗುತ್ತವೆ. ಮಿಗಿಲಾಗಿ, ಬಸವಣ್ಣನವರ ವಚನಗಳು, ಅವರ ಸರಳ ಜೀವನ ಮತ್ತು ಸಮಾಜ ಸುಧಾರಣೆಗಳನ್ನರಿಯಲು ಹೆಚ್ಚು ಸಹಕಾರಿಯಾಗಿದೆ. ಇವರು ಇಂದಿನ ಬಿಜಾಪುರ ಜಿಲ್ಲೆಯ ಬಾಗೇವಾಡಿ ಎಂಬ ಗ್ರಾಮದಲ್ಲಿ ಬ್ರಾಹ್ಮಣ ಕುಟುಂಬವೊಂದರಲ್ಲಿ ಕ್ರಿ.ಶ. 12 ನೇ ಶತಮಾನದ ಮೂರನೇ ದಶಕದಲ್ಲಿ ಜನಿಸಿದರು. ಮಾದಾಂಬೆ ಮತ್ತು ಮಾದಿರಾಜ ಎಂಬುವರು ಇವರ ಮಾತಾಪಿತೃಗಳು. ವೈದಿಕಾಚಾರ ನಿಷ್ಠರಾದ ತಾಯಿ ತಂದೆಯರು, ಪಂಡಿತ ಶ್ರೇಷ್ಠರಿಂದ ಕೂಡಿದ ಕುಟುಂಬಗಳು, ಶಿವ ಪುರಾಣಾಗಮಗಳ ಅಧ್ಯಯನ ಮೊದಲಾದವು ಇವರ ಬಾಲ್ಯದ ಪರಿಸರಗಳಾಗಿದ್ದವು. ಆದರೆ ತತ್ವಕ್ಕೂ ಆಚರಣೆಗೂ ಇದ್ದ ವ್ಯತ್ಯಾಸಗಳು ಬರುಬರುತ್ತ ಬಾಲಕ ಬಸವನಿಗೆ ಅರಿವಾಗತೊಡಗಿದವು. ಉಪನಯನದ ಮಾತು ಬಂದಾಗ ತಮ್ಮ ಮಾತಾಪಿತೃಗಳಿಗೆ ತಮ್ಮ ಸಂಶಯವನ್ನು ತಿಳಿಸಿದರು. ತಮ್ಮ ಎಂಟನೆಯ ವಯಸ್ಸಿನಲ್ಲಿ ಯಜ್ಞೋಪವೀತವನ್ನು ತ್ಯಜಿಸಿ ಧಾರ್ಮಿಕ ಡಂಬಾಚಾರಗಳನ್ನು ಖಂಡಿಸತೊಡಗಿದರು. ಅವರು ಇನ್ನೂ ಬಾಲಕನಾಗಿದ್ದಾಗಲೇ ಆಲೋಚನ ಶಕ್ತಿಯನ್ನು ಬೆಳೆಸಿಕೊಂಡರು. ಆದುದರಿಂದಲೇ ಅವರಿಗೆ ಪರಿಸರದ ಅರಿವೂ ಮತ್ತು ಸಮಾಜದಲ್ಲಿ ಬೇರೂರಿದ್ದ ಬೋಧನೆ ಹಾಗೂ ಆಚರಣೆಯಲ್ಲಿದ್ದ ಗುಣದೋಷಗಳು ವೇದ್ಯವಾಗತೊಡಗಿದವು. ಪರಿಣಾಮವಾಗಿ ಮಾನಸಿಕ ತುಮಲ ಮತ್ತು ವೇದನೆಗಳು ಮೂಡಿ ಜಿಗುಪ್ಸೆಗೊಂಡು ಜನಿವಾರವನ್ನು ಕಿತ್ತೆಸೆದು ತಮಗೂ ಬ್ರಾಹ್ಮಣ್ಯಕ್ಕೂ ಇದ್ದ ಸಂಬಂಧವನ್ನು ತ್ಯಜಿಸಲು ಸಾಧ್ಯವಾಯಿತು. ಸಾಮಾಜಿಕ ಡಂಬಾಚಾರಗಳ ವಿರುದ್ಧ ಬಹಿರಂಗವಾಗಿ ಸೆಟೆದೆದ್ದ ಬಸವಣ್ಣನವರ

ಜೀವನ ಅಂದಿನಿಂದ ವಿನೂತನ ಮಾರ್ಗವನ್ನವಲಂಬಿಸಿತು. ಇವರು ಬಾಗೇವಾಡಿಯನ್ನು ತೊರೆದು ಕೃಷ್ಣ ಮತ್ತು ಮಲಪ್ರಭ ನದಿಗಳ ಸಂಗಮ ಸ್ಥಾನದಲ್ಲಿ ಶೈವಸಂತರ ಕೇಂದ್ರವಾಗಿದ್ದ ಕಪ್ಪಡಿ ಅಥವಾ ಕೂಡಲ ಸಂಗಮಕ್ಕೆ ಬಂದರು. ಅಲ್ಲಿ ಲಕುಲೀಶ-ಪಾಶುಪತ ಸಂಪ್ರದಾಯದ ಈಶಾನ್ಯ ಗುರುಗಳೆಂಬುವರ ಬಳಿಯಲ್ಲಿ ತಮ್ಮ ಅಭ್ಯಾಸವನ್ನು ಮುಂದುವರಿಸಿದರು.

ಕೂಡಲ ಸಂಗಮದಲ್ಲಿ ಸ್ವಲ್ಪ ಕಾಲ ಇದ್ದು ಅನಂತರ ಬಸವಣ್ಣನವರು ಆಗ ಇನ್ನೂ ಚಾಳುಕ್ಯ ಸಾಮಂತನಾಗಿದ್ದ ಬಿಜ್ಜಳನ ರಾಜಧಾನಿ ಮಂಗಳವಾಡಕ್ಕೆ ತೆರಳಿದರು. ಆ ವೇಳೆಗೆ ಅವರ ಸರಳವಾದ ಜೀವನ, ಭಕ್ತಿ ಹಾಗೂ ಸಾಮಾಜಿಕ ಸುಧಾರಣೆಯ ಕಳಕಳಿ ಇವುಗಳಿಂದ ಜನರು ಇವರತ್ತ ಹೆಚ್ಚು ಆಕರ್ಷಿತರಾದರು. ಬಿಜ್ಜಳನ ಬಂಡಾರಿಯಾಗಿದ್ದ ಸಿದ್ಧ ದಂಡಾಧಿಪನು ಬಸವಣ್ಣನನ್ನು ಬಿಜ್ಜಳನಲ್ಲಿಗೆ ಕರೆದೊಯ್ದು ತನ್ನ ಬಂಡಾರದಲ್ಲಿ ಗಣಕ ಹುದ್ದೆಯಲ್ಲಿ ನೇಮಕ ಮಾಡಿಸಿದನೆಂದು ತಿಳಿದು ಬರುತ್ತದೆ. ಸಿದ್ಧ ದಂಡಾಧಿಪನ ಮರಣಾನಂತರ ಬಿಜ್ಜಳನು ಭಂಡಾರಿಯ ಸ್ಥಾನಕ್ಕೆ ಬಸವಣ್ಣನವರನ್ನು ನೇಮಿಸಿದನು. ಅನಂತರ ಸ್ವಲ್ಪ ಕಾಲದಲ್ಲಿ ಬಸವಣ್ಣನವರ ವಿವಾಹವು ನೆರವೇರಿತು. ಸಂಸಾರದಲ್ಲಿ ಸಿಲುಕಿದರೂ ಬಸವಣ್ಣನವರು ಕುಲ, ಅಂತಸ್ತು, ವೃತ್ತಿ ಇವುಗಳ ಭೇದವಿಲ್ಲದೆ ಸರಳ ಜೀವನ ನಡೆಸುತ್ತಾ ಸಾಮಾಜಿಕ ಧರ್ಮ, ಭಕ್ತಿ ಮತ್ತು ಕರ್ತವ್ಯ ನಿರ್ವಹಣೆಗೆ ಹೆಚ್ಚು ಆದ್ಯತೆ ನೀಡಿ ಪ್ರಸಿದ್ಧರಾದರು. ಪ್ರತಿನಿತ್ಯವು ಸಾಧು ಸಂತರೂ, ಜ್ಞಾನಿಗಳೂ ಬಸವಣ್ಣನವರಲ್ಲಿಗೆ ಬಂದು ಅನೇಕ ವಿಷಯಗಳನ್ನು ಕುರಿತು ಚರ್ಚಿಸುವುದು ರೂಢಿಯಾಗಿತ್ತು.

## 30.7 ಕಲ್ಯಾಣದಲ್ಲಿ ಕ್ರಾಂತಿ ಮತ್ತು ಬಸವಣ್ಣನವರ ಸಾಮಾಜಿಕ ಸುಧಾರಣೆಗಳು

ಆ ವೇಳೆಗೆ ಕಲ್ಯಾಣದ ಚಾಳುಕ್ಯ ಸಾಮ್ರಾಜ್ಯದಲ್ಲಿ ಅತಿ ಪ್ರಮುಖ ರಾಜಕೀಯ ಘಟನೆ ಜರುಗಿತು. ದುರ್ಬಲನಾದ ಚಾಳುಕ್ಯ ಚಕ್ರವರ್ತಿಯಾದ ತೈಲಪನನ್ನು ಅಧಿಕಾರದಿಂದ ಚ್ಯುತಿಗೊಳಿಸಿ ಬಿಜ್ಜಳನು ಸಿಂಹಾಸನವನ್ನು ಆಕ್ರಮಿಸಿ ಚಕ್ರವರ್ತಿಯಾದನು. ಈ ಕಾರಣದಿಂದ ಬಸವಣ್ಣನವರು ಸಹ ಕಲ್ಯಾಣಕ್ಕೆ ಬಂದು ಭಂಡಾರಿಯ ಹುದ್ದೆಯನ್ನು ಪಡೆದರು. ಸುಮಾರು 12 ವರ್ಷಗಳ ಕಾಲ ಈ ಹುದ್ದೆಯಲ್ಲಿ ಬಸವಣ್ಣನವರು ಮುಂದುವರೆದರು. ಆ ಕಾಲದಲ್ಲಿ ತಮ್ಮ ಸಾಮಾಜಿಕ ಸುಧಾರಣೆ, ಭಕ್ತಿ, ಪಾಂಡಿತ್ಯ ಮತ್ತು ಶುದ್ಧ ಜೀವನಗಳಿಂದ ಅವರ ಪ್ರಭಾವ ವಿಸ್ತರಿಸಿ ಅದ್ವಿತೀಯವಾಯಿತು. ದಿನನಿತ್ಯ ವಿದ್ವಾಂಸರೂ, ಸಾಧಕರು, ಶರಣರೂ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಅವರತ್ತ ಬರತೊಡಗಿದರು. ಜಾತಿ, ಮತಗಳ ಪರಿವೆಯಿಲ್ಲದೆ ಅನುಭವ ಮಂಟಪದಲ್ಲಿ ಅವರೆಲ್ಲರೂ ಸೇರಿ ವಿಚಾರ ಮಂಥನ ಮಾಡತೊಡಗಿದರು. ಇದರಿಂದ ಬಸವಣ್ಣನವರು ಧಾರ್ಮಿಕ ಮತ್ತು ಸಾಮಾಜಿಕ ಚಟುವಟಿಕೆಗಳ ಕೇಂದ್ರವಾದರು.

ಬಸವಣ್ಣನವರ ಪ್ರಭಾವ ಮತ್ತು ಕ್ರಾಂತಿಕಾರಕ ಭಾವನೆಗಳು ಹಲವರಲ್ಲಿ ಅಸೂಯೆಯನ್ನುಂಟುಮಾಡಿದವು. ಅವರು ಬಸವಣ್ಣನವರ ಮೇಲೆ ಅಪಪ್ರಚಾರದಲ್ಲಿ ತೊಡಗಿದರು. ಬಸವಣ್ಣನವರು ಭಂಡಾರದ ಹಣವನ್ನು ಗುರು ಜಂಗಮ ಸೇವೆಗಾಗಿ ಅಪವ್ಯಯ ಮಾಡುತ್ತಿರುವುದಾಗಿ ವದಂತಿ ಹಬ್ಬಿಸಿದರು. ಅದು ಬಿಜ್ಜಳನವರೆಗೂ ಮುಟ್ಟಿತು. ಬಸವಣ್ಣನವರು ಜಾತಿ ಭೇದವಿಲ್ಲದೆ ಸ್ಪೃಶ್ಯ ಅಸ್ಪೃಶ್ಯರೊಡನೆ ಒಡನಾಡಿಯಾಗುತ್ತಿದ್ದು ಅವರೊಡನೆ ಸಹ ಪಂಕ್ತಿ ಭೋಜನ ಸ್ವೀಕರಿಸುತ್ತಿದ್ದುದೂ ಅವರ ವಿರೋಧಿಗಳಿಗೆ ಸಹಿಸಲಾಗಲಿಲ್ಲ. ಈ ಸಮಯದಲ್ಲಿ ಬಸವಣ್ಣನವರು ಶಿವ ಭಕ್ತರಾಗಿದ್ದ ಬ್ರಾಹ್ಮಣರ ಮಧುವಯ್ಯನ ಮಗಳಿಗೂ ಅಸ್ಪೃಶ್ಯರ ಹರಳಯ್ಯನ ಮಗನಿಗೂ ವಿವಾಹ ಸಂಬಂಧವನ್ನೇರ್ಪಡಿಸಿದರು. ಇದು ವೈದಿಕರನ್ನು ಕೆರಳಿಸಿತು. ಬಸವಣ್ಣನವರು ವರ್ಣಾಶ್ರಮ ಧರ್ಮಕ್ಕೆ ಕಳಂಕ ಪ್ರಾಯರಾಗಿದ್ದಾರೆಂದು ಬಿಜ್ಜಳನಲ್ಲಿ ದೂರಿತ್ತರು. ಸರ್ವರನ್ನು ತೃಪ್ತಿ ಪಡಿಸಬೇಕಾದುದು ಅರಸನ ಕರ್ತವ್ಯವಾಗಿದ್ದರಿಂದ ಈ ಸಂಗತಿ ಬಿಜ್ಜಳ ಮತ್ತು ಬಸವಣ್ಣನವರ ಮಧ್ಯೆ ಅಸಮಾಧಾನ ಮೂಡಿಸಿತ್ತೆಂದು ವ್ಯಕ್ತವಾಗುತ್ತದೆ. ಬಿಜ್ಜಳನು ವೈದಿಕರನ್ನು ಸಾಂತ್ವನಗೊಳಿಸಲು ಮಧುವಯ್ಯ ಮತ್ತು ಹರಳಯ್ಯನವರನ್ನು ಸೆರೆಹಿಡಿಸಿ ಶಿಕ್ಷೆ ಕೊಟ್ಟನು. ಇದು ಎಲ್ಲ ಶಿವ ಭಕ್ತರನ್ನು ಜಂಗಮರನ್ನೂ ಕಳವಳಕ್ಕೀಡು ಮಾಡಿತು. ಅದೇ ಸಮಯದಲ್ಲಿ ಕುಪಿತನಾದ ಜಗದೇವ ಎಂಬುವನ ನಾಯಕತ್ವದಲ್ಲಿ ಬಿಜ್ಜಳನ ಕೊಲೆಯಾಯಿತು. ಇದಾದ ಮೇಲೆ ಜಂಗಮರೆಲ್ಲರೂ ಕಲ್ಯಾಣವನ್ನು ತೊರೆದು ಕೂಡಲ ಸಂಗಮಕ್ಕೆ ತೆರಳಿದರು. ಆ ವೇಳೆಗಾಗಲೇ ಕಲ್ಯಾಣವನ್ನು ತ್ಯಜಿಸಿ ಕೂಡಲ ಸಂಗಮವನ್ನು ತಲುಪಿದ್ದ ಬಸವಣ್ಣನವರು ಅಲ್ಲಿ ಐಕ್ಯರಾದರು. ಈ ಘಟನೆ ಕ್ರಿ.ಶ. 1167-68 ರಲ್ಲಿ ನಡೆಯಿತೆಂದು ತಿಳಿದು ಬರುತ್ತದೆ. ಬಿಜ್ಜಳ ಮತ್ತು ಬಸವಣ್ಣನವರ ಅಂತ್ಯಕ್ಕೆ ಸಂಬಂಧಿಸಿದಂತೆ ವಿಭಿನ್ನ ಹೇಳಿಕೆಗಳಿವೆ.

ಕ್ರಾಂತಿಕಾರಿಯೆಂದು ಪ್ರಸಿದ್ಧರಾಗಿರುವ ಬಸವಣ್ಣನವರ ಸಿದ್ಧಿ ಸಾದನೆಗಳು ಮಹತ್ವಪೂರ್ಣವಾದವು. ಇದುವರೆಗೂ ಸಾವಿರಕ್ಕೂ ಮಿಗಿಲಾಗಿ ಇವರ ವಚನಗಳು ದೊರೆತಿವೆ. ಕೂಡಲ ಸಂಗಮದೇವ ಎಂಬುದು ಇವರ ವಚನಗಳ ಅಂಕಿತ. ಈ ವಚನಗಳಲ್ಲಿ ಬಸವಣ್ಣನವರ ಧಾರ್ಮಿಕ ಮತ್ತು ಸಾಮಾಜಿಕ ದೃಷ್ಟಿಯನ್ನು ಸಮಾಜ ಸುಧಾರಣೆಯಲ್ಲಿ ಅವರಿಗಿದ್ದ ಕಳಕಳಿಯನ್ನು ಕಾಣಬಹುದು. ಬಹಿರಂಗಶುದ್ಧಿಗೆ ಮೊದಲು ಅಂತರಂಗ ಶುದ್ಧಿಯಾಗಬೇಕೆಂದು ಅವರು ಪ್ರತಿಪಾದಿಸಿದರು. ಅರ್ಥವಿಲ್ಲದ ಆಡಂಬರದ ಆಚಾರ, ಅಸಮಾನತೆಗಳನ್ನು ಖಂಡಿಸಿದರು. ಉಚ್ಚ-ನೀಚ, ಮೇಲು-ಕೀಳು, ಶ್ರೀಮಂತ-ಬಡವ ಎಂಬ ತಾರತಮ್ಯವನ್ನು ಮತ್ತು ಅಸಮಾನತೆಯನ್ನು ಖಂಡಿಸಿದರು. ಆಡಂಬರಕ್ಕಾಗಿ ದೇವಾಲಯ ನಿರ್ಮಾಣ ಹಾಗೂ ಯಜ್ಞಕರ್ಮಗಳನ್ನು ವಿರೋಧಿಸಿದರು. ಜಾತಿ ಪದ್ಧತಿಯನ್ನು ವಿರೋಧಿಸಿದ ಅವರು ವ್ಯಕ್ತಿ ಯಾವ ಕುಲದವನಾದರೇನು ಶಿವಲಿಂಗವಿದ್ದವನೇ ಕುಲಜ ಎಂಬ ಸಾಮಾಜಿಕ ಸಮಾನತೆಯನ್ನು

ವ್ಯಕ್ತಪಡಿಸಿದುದು ಮಾತ್ರವಲ್ಲದೆ ಅದನ್ನು ತತ್ವಶಃ ಆಚರಣೆಗೆ ತಂದರು. ಅವರಿಂದ ಸ್ಥಾಪನೆಯಾದ ಅನುಭವ ಮಂಟಪದಲ್ಲಿ ಅಸ್ಪೃಶ್ಯವಾಧಿಯಾಗಿ ಎಲ್ಲರೂ ಸಮಾನತೆಯಿಂದ ಕಲೆತು, ಚರ್ಚೆ ನಡೆಸಿ ಅವರವರ ಅನುಭವಗಳನ್ನು ವ್ಯಕ್ತಪಡಿಸುವ ಆಚರಣೆಯನ್ನು ರೂಢಿಗೆ ತಂದರು.

ಬಸವಣ್ಣನವರು ಪ್ರಾಣಿವಧೆಗೆ ಕಾರಣವಾದ ಯಜ್ಞಯಾಗಗಳನ್ನು ಆಡಂಬರದ ಪೂಜೆಯನ್ನು ಅಂಧಶ್ರದ್ಧೆಯನ್ನು ಖಂಡಿಸಿದರು. ವ್ಯಕ್ತಿಯು ತಾನು ಮಾಡಬೇಕಾದ ಪ್ರಾರ್ಥನೆ ಅಥವಾ ಇಷ್ಟಲಿಂಗ ಪೂಜೆಯನ್ನು ತಾನೇ ಮಾಡಬೇಕು. ತನ್ನ ಉದ್ಧಾರ ಅಥವಾ ಮೋಕ್ಷವನ್ನು ತಾನೇ ಕೈಗೊಳ್ಳಬೇಕು. ಅಸ್ಪೃಶ್ಯತೆಯನ್ನು ವಿರೋಧಿಸಿದಂತೆ ಅವರು ಸ್ತ್ರೀಯರ ಶೋಷಣೆಯನ್ನು ವಿರೋಧಿಸಿದರು. ಅವರಿಗೂ ಸಹ ಸಮಾನವಾಗಿ ಬಾಳಲು ಹಕ್ಕಿದೆಯೆಂದು ಪ್ರತಿಪಾದಿಸಿದರು. ಆ ಕಾಲದಲ್ಲಿ ಪ್ರಸಿದ್ಧರಾದ ಅನೇಕ ಶಿವಶರಣೆಯರು ಇದಕ್ಕೆ ಉಜ್ವಲ ನಿದರ್ಶನವಾಗಿದ್ದಾರೆ. ಬಸವಣ್ಣನವರು ಪ್ರತಿಪಾದಿಸಿದ ಮತ್ತೊಂದು ಪ್ರಮುಖ ತತ್ವವೆಂದರೆ ಕಾಯಕ. ಕಾಯಕವೇ ಕೈಲಾಸವೆಂದು ಸಾರಿದ ಅವರು ವ್ಯಕ್ತಿ ತನ್ನ ಕರ್ತವ್ಯವನ್ನು ಶ್ರದ್ಧೆಯಿಂದ ಮಾಡಬೇಕೆಂದು ಒತ್ತಿ ಹೇಳಿದರು. ಕಾಯಕದಲ್ಲಿ ಮೇಲು ಕೀಳುಗಳಿಲ್ಲ.

ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಬಸವಣ್ಣನವರು ಕ್ರಾಂತಿಯನ್ನುಂಟು ಮಾಡಿದಂತೆ ಅವರು ಕನ್ನಡ ಸಾಹಿತ್ಯದಲ್ಲೂ ವಿಶೇಷ ಪ್ರಭಾವವನ್ನುಂಟು ಮಾಡಿರುವರು. ಕನ್ನಡ ಭಾಷೆ ಒಂದು ಅಪೂರ್ವವಾದ ಚೈತನ್ಯವನ್ನು ಅವರ ವಚನಗಳಿಂದ ಪಡೆಯಿತು. ಅದುವರೆಗೂ ಕೇವಲ ವಿದ್ವಾಂಸರ ಮತ್ತು ಮೇಲ್ವರ್ಗದವರಿಗೆ ಸೀಮಿತವಾಗಿದ್ದ ಸಾಹಿತ್ಯವು ಅಂದಿನಿಂದ ಜನಸಾಮಾನ್ಯರಿಗೂ ನಿಲುಕುವ ಸರಳ ವಚನಗಳ ರೂಪದಲ್ಲಿ ಹೊರಹೊಮ್ಮಿತು. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ವಚನ ವಾಙ್ಮಯವು ಒಂದು ಕ್ರಾಂತಿಕಾರಕ ಘಟ್ಟವಾಗಿದೆ.

ಬಸವಣ್ಣನವರಿಂದ ವಿಶೇಷವಾಗಿ ಪ್ರಚಾರಕ್ಕೆ ಬಂದ ಈ ಪಂಥಕ್ಕೆ ವೀರಶೈವ ಪಂಥ ಅಥವಾ ಲಿಂಗವಂತ ಮತವೆಂದು ಹೆಸರಾಗಿದೆ. ಕಾಲಕ್ರಮದಲ್ಲಿ ರೂಪಿತವಾದ ಗ್ರಂಥಗಳು ವೀರಶೈವ ಧರ್ಮದ ವಿಶಿಷ್ಟ ರೂಪವನ್ನೊಳಗೊಂಡಿದೆ. ಅವುಗಳಲ್ಲಿ ಶೂನ್ಯ ಸಂಪಾದನೆ, ಶಿವ ತತ್ವ ಚಿಂತಾಮಣಿ, ವೀರ ಶೈವಾಮೃತ ಮಹಾಪುರಾಣ ಮೊದಲಾದವು ಪ್ರಮುಖವಾದವು. ವೀರಶೈವ ಧರ್ಮವನ್ನು ಶಕ್ತಿ ವಿಶಿಷ್ಟ ದ್ವೈತ ಎಂದು ಕರೆಯಲಾಗಿದೆ. ಇಷ್ಟ ಲಿಂಗ ಪೂಜೆ ಈ ಧರ್ಮದ ಅನುಯಾಯಿಗಳು ಮಾಡತಕ್ಕ ಪೂಜವಿಧಿ. ಲಿಂಗಾಂಗ ಸಾಮರಸ್ಯವನ್ನು ಸಾಧ್ಯಗೊಳಿಸಲು ಪಂಚಾಚಾರ ಮತ್ತು ಅಷ್ಟ ವರ್ಣಗಳಿಂದ ಕೂಡಿದ ಷಟ್‌ಸ್ಥಲ ಸಿದ್ಧಾಂತವೇ ಈ ಧರ್ಮದ ಸಾಧನಮಾರ್ಗ. ಲಿಂಗಾಚಾರ, ಶಿವಾಚಾರ, ಸದಾಚಾರ, ಭೃತ್ಯಾಚಾರ ಮತ್ತು ಗಣಾಚಾರ ಎಂಬುವು ಪಂಚಾಚಾರಗಳು. ಇವುಗಳಲ್ಲಿ ಧಾರ್ಮಿಕ, ನೈತಿಕ ಮತ್ತು ಸಾಮಾಜಿಕ ಹೊಣೆಗಾರಿಕೆಗಳ ಆಚರಣೆ ಅಭಿವ್ಯಕ್ತವಾಗಿದೆ. ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ಭಸ್ಮ ರುದ್ರಾಕ್ಷಿ ಮತ್ತು ಪಂಚಾಕ್ಷರಿ ಮಂತ್ರ ಇವುಗಳು ಅಷ್ಟವರ್ಣಗಳು. ಅಷ್ಟಾ ವರ್ಣಗಳು ವೀರಶೈವರ ಆಚರಣೆಗೆ ಸಂಬಂಧಿಸಿದವು. ಗುರು, ಲಿಂಗ, ಜಂಗಮ ಇವರ ಸ್ಥಾನ ವೀರಶೈವರ ಆಚರಣೆಗೆ ಸಂಬಂಧಿಸಿದವು. ಗುರು, ಲಿಂಗ, ಜಂಗಮ ಇವರ ಸ್ಥಾನ ವೀರಶೈವರಲ್ಲಿ ಅತ್ಯಂತ ಪ್ರಮುಖವಾದುದು. ವೀರಶೈವ ಪಂಥದ ಗುರು, ಲಿಂಗ, ಜಂಗಮ ಸ್ಥಾನವನ್ನು ಬೌದ್ಧ ಧರ್ಮದ ಬುದ್ಧ, ಧರ್ಮ ಮತ್ತು ಸಂಘಕ್ಕೆ ಸಮಾನವಾದುದೆಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ವೀರಶೈವ ಪಂಥವು ತನ್ನ ಸರಳವಾದ ಬೋಧನೆಗಳಿಂದಲೂ, ಉಚ್ಛ ನೀಚವೆಂಬ ಭೇದವಿಲ್ಲದೆ ಸಾಮಾಜಿಕ ಸಮಾನತೆಯನ್ನು ಎತ್ತಿ ಹಿಡಿದುದ್ದರಿಂದಲೂ ಮತ್ತು ಸರಳವಾದ ಆಚರಣೆಗಳಿಂದಲೂ ಜನರನ್ನು ಆಕರ್ಷಿಸಿತು. ಎಲ್ಲ ವರ್ಗದ ಜನರನ್ನು ಅದು ಆಕರ್ಷಿಸಿತು. ಕಾಲ ಕ್ರಮದಲ್ಲಿ ಕರ್ನಾಟಕದ ಎಲ್ಲಾ ಭಾಗಗಳಿಗೂ ಪ್ರಸಾರವಾಗಿ ಗಡಿ ಪ್ರದೇಶಗಳಾದ ತಮಿಳುನಾಡು, ಆಂಧ್ರ ಹಾಗೂ ಮಹಾರಾಷ್ಟ್ರದ ಸೀಮಿತ ಭಾಗಗಳಿಗೂ ಹರಡಿತು. ಆ ವೇಳೆಗಾಗಲೇ ಪ್ರಚಾರವಾಗಿದ್ದ ಶ್ರೀ ವೈಷ್ಣವ ಪಂಥದಿಂದ ಇಳಿಮುಖವಾಗುತ್ತಿದ್ದ ಜೈನ ಧರ್ಮದ ಪ್ರಭಾವವು ಕನ್ನಡ ನಾಡಿನಲ್ಲಿ ಮತ್ತಷ್ಟು ಕ್ಷೀಣಿಸಿತು. ಶ್ರೀ ವೈಷ್ಣವ ಪಂಥದ ಪ್ರಭಾವವನ್ನು ಸರಿತೂಗಿಸಲು ಶೈವ ಸಂಪ್ರದಾಯವೂ ತನ್ನ ಸಾಮಾಜಿಕ ಮತ್ತು ಧಾರ್ಮಿಕವಾದ ವಿಧಿವಿಧಾನಗಳನ್ನು ಮತ್ತಷ್ಟು ಸರಳಗೊಳಿಸಿದುದರಿಂದ ವೀರಶೈವ ಪಂಥವು ಹೆಚ್ಚು ಆಕರ್ಷಕವಾಯಿತು.

## 30.8 ಸಾರಾಂಶ

ಮೇಲಿನ ಘಟಕದಲ್ಲಿ ಶೈವ ಧರ್ಮ ಮತ್ತು ವೀರಶೈವ ಪಂಥದ ಬೆಳವಣಿಗೆಯನ್ನು ನಿಮ್ಮ ಗಮನಕ್ಕೆ ತರಲಾಗಿದೆ. ಶೈವ ಕಲ್ಪನೆ ಮತ್ತು ಆಚರಣೆಗಳು ವೈದಿಕ ಸಂಪ್ರದಾಯಕ್ಕನುಗುಣವಾಗಿ ಬೆಳೆದು ಬಂದಿದ್ದರೆ ವೀರಶೈವ ಸಂಪ್ರದಾಯವು ಅದಕ್ಕೆ ವಿರುದ್ಧವಾಗಿ ತೀವ್ರತರವಾದ ಸಾಮಾಜಿಕ ಸುಧಾರಣೆಯನ್ನು ಬಯಸಿ ಬೆಳೆದಿರುವುದನ್ನು ಈ ಪಾಠದಲ್ಲಿ ನೀವು ಮನಗಾಣಿದ್ದೀರಿ.

ಕಾಳಮುಖ ಅಥವಾ ಪಾಶುಪತ ಪ್ರಕಾರದ ಶೈವ ಧರ್ಮ ಪುರಾತನವಾಗಿದ್ದು ಐತಿಹಾಸಿಕ ಕಾಲದಿಂದಲೂ ರಾಜಮನ್ನಣೆ ಪಡೆದು ಬೆಳೆದು ಬಂದಿರುವುದನ್ನು ನಿಮಗೆ ತೋರಿಸಿಕೊಡಲಾಗಿದೆ. ಅನೇಕ ಅರಸು ಮನೆತನಗಳು ಈ ಪ್ರಕಾರ ಶೈವ ಧರ್ಮಕ್ಕೆ ಆಶ್ರಯ ನೀಡಿ,

ಪೋಷಿಸಿ ಬೆಳೆಸಿದ್ದರು. ಶಾತವಾಹನರು, ಗಂಗರೂ, ಬಾದಾಮಿ ಚಾಳುಕ್ಯರು ಕಲ್ಯಾಣಿ ಚಾಳುಕ್ಯರು, ಹೊಯ್ಸಳರು, ಪಲ್ಲವರು, ಚೋಳರು ವಿಜಯನಗರದ ಅರಸರು ಶಾಸ್ತ್ರ ಬೆಂಬಲ ಪಡೆದ ವೈದಿಕ ಸಂಪ್ರದಾಯದ ಶೈವ ಧರ್ಮಕ್ಕೆ ವಿಶೇಷ ಬೆಂಬಲ ನೀಡಿರುವುದನ್ನು ಗಮನಿಸಬಹುದು.

ಈ ಶೈವ ಧರ್ಮವು ಎಲ್ಲಾ ವರ್ಗದವರ ಮನ್ನಣೆ ಪಡೆದು ಆಚರಣೆಯಲ್ಲಿದ್ದಿತು. ಭವ್ಯವಾದ ಶಿವ ದೇವಾಲಯಗಳನ್ನು ಅನೇಕ ಅರಸು ಮನೆತನಗಳು ನಿರ್ಮಿಸಿರುವುದನ್ನು ದಕ್ಷಿಣ ಭಾರತಾದ್ಯಂತ ಕಾಣಬಹುದು. ಆದರೆ ವೀರಶೈವ ಪಂಥ ಈ ಮೂಲ ಶೈವ ಧರ್ಮ ಆಚರಣೆಗಿಂತ ಭಿನ್ನವಾಗಿದ್ದು ಸಮಾಜದಲ್ಲಿ ತೀವ್ರ ಸ್ವರೂಪದ ಸುಧಾರಣೆಗಳನ್ನು ತರಲು ಬಯಸಿತು. ಅಸ್ಪೃಶ್ಯತೆ, ಮೇಲು ಕೀಳು ಕಲ್ಪನೆಗಳನ್ನು ಖಂಡಿಸಿ, ಕಾಯಕವೇ ಕೈಲಾಸ ಸಿದ್ಧಾಂತದಿಂದ ವೃತ್ತಿ ಗೌರವವನ್ನು ಸ್ಥಾಪಿಸಲು ಯತ್ನಿಸಿತು. ಈ ಪಂಥದ ವಚನ ರೂಪದ ಸಾಹಿತ್ಯ ಕನ್ನಡ ನಾಡಿಗೆ ಅಮೋಘ ಕೊಡುಗೆಯಾಗಿದೆ.

## 30.9 ಸ್ವಪರೀಕ್ಷೆ ಪ್ರಶ್ನೆಗಳು

1. ಶೈವ ಧರ್ಮದ ಐತಿಹಾಸಿಕ ಬೆಳವಣಿಗೆಯನ್ನು ವಿವರಿಸಿರಿ.
2. ವೀರಶೈವ ಪಂಥದ ಸಾಮಾಜಿಕ ಸಿದ್ಧಾಂತಗಳನ್ನು ವಿಶ್ಲೇಷಿಸಿ.
3. ಶೈವ ಧರ್ಮದ ಬೆಳವಣಿಗೆಗೆ ದಕ್ಷಿಣ ಭಾರತದ ರಾಜಮನೆತನಗಳ ಕೊಡುಗೆಗಳನ್ನು ವಿವರಿಸಿ.
4. ಕಲೆ, ಸಾಹಿತ್ಯಕ್ಕೆ ಶೈವ ಧರ್ಮ ಕೊಡುಗೆಗಳನ್ನು ವಿವರಿಸಿ.

## 30.10 ಹೆಚ್ಚಿನ ಅಧ್ಯಯನಕ್ಕಾಗಿ ಗ್ರಂಥಗಳು


1. Hiriyanna ,M. : Essentials of Indian Philosophy
2. R.G. Bhadarkar : Vaishnavism and Shaivism and other minor religious systems
3. Nandi , R.N. : Origion of the Veerashaiva movement in social roots of Religion in Ancient India
4. P.B. Desai : Basaveswara and His Times
5. R.R. Diwakar : Karnataka through the Ages
6. R.R. Diwakar : ಕರ್ನಾಟಕ ಪರಂಪರೆ
7. S.C. Nandimutt : A Hand Book of Veerashaivism
8. S.C. Malik : Some aspects of Dissent, Protest and Reform
9. ಬಿ. ಷೇಕ್ ಅಲಿ ಮತ್ತು ಬಿ. ಸುರೇಂದ್ರರಾವ್ : ಕರ್ನಾಟಕ ಚರಿತ್ರೆ (ಸಂ 2)
10. Romila Thapar (Ed) : Recent Perspectives of Early Indian History

# ບັນທຶກ

# ಟಿಪ್ಪಣಿಗಳು

# ಟಿಪ್ಪಣಿಗಳು

## ಟಿಪ್ಪಣಿಗಳು

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

........................................................................................................................................................

ಆದೇಶ ಸಂಖ್ಯೆ : ಕರಾಮುವಿ/ಅಸಾವಿ/4-060/2013-2014 ದಿನಾಂಕ : 24-09-2013
ಒಳಪುಟ : 60 GSM ವೆಸ್ಟ್‌ಕೋಸ್ಟ್ ಪೇಪರ್ ಮತ್ತು ಹೊರಪುಟ : 220 GSM ಆರ್ಟ್‌ಕಾರ್ಡ್
ಮುದ್ರಕರು : ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು. ಪ್ರತಿಗಳು : 5000

# Karnataka State Open University

**Mukthagangotri, Mysore - 570 006**

The Open University system has been initiated in order to augment opportunities for higher education and as an instrument of democratizing education.


*National Education Policy 1986*




♣ **REGIONAL CENTRES**

Bangalore
Davanagere
Gulbarga
Dharwad
Shimoga
Mangalore
Tumkur
Hassan
Chamarajanagar
Bellary
Mandya
Kolar
Bijapur
Belagaum
Ramanagar
Bangalore (another one)
Chikmagalur
Udupi
Karwar
Bidar
Mysore

- ● **HEAD QUARTERS**
- ★ **Total Study Centres : 123**
- ♣ **Regional Centres : 21**
- ❄ **B.Ed Study Centres : 10**
- ✦ **M.Ed Study Centres : 06**


Feedback : improvement, revision and launching of new programmes
Multimedia learning material
Self-instructional print material
Electronic media learning components
STUDENT
Academic and other support
Evaluation - methods and modes
INSTRUCTIONAL SYSTEM